
ಸಾಹಿತ್ಯ ದಾಸೋಹ – 248

ಸಂಚಿಕೆ 72 – ಮೇ 2026 11.04.2026ರ ದಾಸೋಹದ ಬರಹಗಳ ಸಂಕಲನ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ...

ನಮ್ಮ ಮಾತು

ಆತ್ಮೀಯರೆ,

೧೧, ಏಪ್ರಿಲ್ ೨೦೨೬ರಂದು ನಡೆದ 'ಸಾಹಿತ್ಯ ದಾಸೋಹ-೨೪೮ರ ಸಂಚಿಕೆ ಇಲ್ಲಿದೆ.

ಈ ದಾಸೋಹದಲ್ಲಿ ಶ್ರೀಮತಿ ರತ್ನಾ ಮೂರ್ತಿಯವರು ಪ್ರಸ್ತುತಪಡಿಸಿದ ಮಂಡಲಕಲೆಯ ಬಗೆಗಿನ ಲೇಖನ ಹಾಗೂ ಅದಕ್ಕೆ ಪೂರಕವಾಗಿ ಅವರೇ ರಚಿಸಿದ ಹಲವಾರು ರೇಖಾ ಚಿತ್ರಗಳು ಹಾಗೂ ಮುಖಪುಟದ ಚಿತ್ರ ಈ ಸಂಚಿಕೆಯ ಮೆರುಗನ್ನು ಹೆಚ್ಚಿಸಿವೆ. ಇದಕ್ಕೆ ಕಾರಣಕರ್ತರಾದ ಶ್ರೀಮತಿ ರತ್ನಾ ಮೂರ್ತಿಯವರಿಗೆ ವಂದನೆಗಳು.

ಸಾಹಿತ್ಯ ದಾಸೋಹ-೨೪೮ರ ಅಧ್ಯಕ್ಷತೆ ವಹಿಸಿದ ನಮ್ಮ ವೇದಿಕೆಯ ಹಿರಿಯ ಸದಸ್ಯೆಯಾದ ಶ್ರೀಮತಿ ಟಿ.ಎಸ್. ಶ್ರವಣ ಕುಮಾರಿಯವರು. ದಾಸೋಹದಲ್ಲಿ ಪ್ರಸ್ತುತಪಡಿಸಲಾದ ಎಲ್ಲಾ ೨೨ ಬರಹಗಳ ಬಗ್ಗೆಯೂ ತಮ್‌ಮ ಅನಿಸಿಕೆಗಳನ್ನು ದಾಖಲಿಸಿದ್ದಾರೆ. ಅವರಿಗೂ, 'ತಿಂಗಳ ಬೆಳಕು-೨೬' ಕಾರ್ಯಕ್ರಮದಲ್ಲಿ 'ಬೆಂಗಳೂರಿನಿಂದ ಲಂಡನ್‌ವರೆಗಿನ ತಮ್ಮ ಪ್ರಣಯ ಪ್ರಯಾಣ'ದ ಬಗ್ಗೆ ಮಾತನಾಡಿದ ಶ್ರೀ ಶ್ರೀನಿವಾಸ್ ಪ್ರಾಣೆಭಾತೆ ಅವರಿಗೂ, ದಾಸೋಹದಲ್ಲಿ ಮತ್ತು ಕವಿಮನ ಅಂಕಣದಲ್ಲಿ ತಮ್ಮ ಸ್ವರಚಿತ ಬರಹಗಳನ್ನು ಪ್ರಸ್ತುತಪಡಿಸಿದ ಎಲ್ಲಾ ಲೇಖಕರಿಗೂ ಮತ್ತು ನಮ್ಮ ತಾಂತ್ರಿಕ ತಂಡಕ್ಕೂ ನಮ್ಮ ಕೃತಜ್ಞತೆಗಳು.

ಸಂಚಿಕೆಯ ಬಗ್ಗೆ ತಮ್ಮ ಅಭಿಪ್ರಾಯ, ಸಲಹೆ, ಸೂಚನೆಗಳಿಗೆ ಸ್ವಾಗತ.

ಸಂಚಾಲಕ ಸಮಿತಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

೦೯, ಮೇ ೨೦೨೬

ದಾಸೋಹದ ಪುಟಗಳಲ್ಲಿ...

ಮುಖಚಿತ್ರ: ಮಂಡಲ ಕಲೆ (ಕಲಾವಿದೆ: ಶ್ರೀಮತಿ ರತ್ನಾ ಮೂರ್ತಿ)

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ–೨೪೮

ಕಾರ್ಯಕ್ರಮ ವರದಿ: ರಾಧಿಕಾ ವಿ. ಗುಜ್ಜರ್

೨೪೮ನೆಯ ಸಾಹಿತ್ಯ ದಾಸೋಹವು ದಿನಾಂಕ ೧೧ನೆಯ ಏಪ್ರಿಲ್ ೨೦೨೬ರಂದು ಮಧ್ಯಾಹ್ನ ೩.೩೦ಕ್ಕೆ ಸರಿಯಾಗಿ ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಗೂಗಲ್ ಮೀಟ್ ಅಂತರಜಾಲ ತಾಣದಲ್ಲಿ ಆರಂಭವಾಯಿತು.



ದಾಸೋಹದ ಅಧ್ಯಕ್ಷತೆಯನ್ನು ಶ್ರೀಮತಿ ಟಿ.ಎಸ್. ಶ್ರವಣ ಕುಮಾರಿಯವರು ವಹಿಸಿದ್ದರು.

ದಾಸೋಹದ ಸಂಚಾಲಕರಾದ ಶ್ರೀ ಕೆ.ಎನ್. ಮಹಾಬಲ ಅವರು ತಮ್ಮ ಔಪಚಾರಿಕ ಮಾತುಗಳ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶ್ರೀಮತಿ ಸುವರ್ಣಲಕ್ಷ್ಮಿಯವರು ಎಲ್ಲರನ್ನೂ ಸ್ವಾಗತಿಸಿ ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀಮತಿ ಟಿ.ಎಸ್. ಶ್ರವಣ ಕುಮಾರಿಯವರನ್ನು ವೇದಿಕೆಗೆ ಪರಿಚಯಿಸಿದರು.

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಮುಖ್ಯಸ್ಥರಾದ ಶ್ರೀ ಬೆಂ.ಶ್ರೀ. ರವೀಂದ್ರ ಅವರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ, ಇಂದಿನವರೆಗೆ ಸತತವಾಗಿ ತೊಂಬತ್ತೊಂಬತ್ತನೆಯ ಸಾಹಿತ್ಯ ದಾಸೋಹದ ಸಂಚಾಲಕತ್ವ ವಹಿಸಿರುವ ಶ್ರೀ ಕೆ.ಎನ್. ಮಹಾಬಲ ಅವರನ್ನು ಅಭಿನಂದಿಸಿ, ಇದೊಂದು ಸಾಧನೆಯ ಮೈಲಿಗಲ್ಲು ಎಂದು ಬಣ್ಣಿಸಿದರು.

೨೫೦ನೆಯ ಸಾಹಿತ್ಯ ದಾಸೋಹ: ಶ್ರೀ ರವೀಂದ್ರ ಅವರು ಮುಂದುವರಿದು, ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನವು ಪ್ರತಿ ತಿಂಗಳು ಸಾಹಿತ್ಯ ದಾಸೋಹ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದು, ಬರುವ ಜೂನ್ ತಿಂಗಳಲ್ಲಿ ೨೫೦ನೇ ಸಾಹಿತ್ಯ ದಾಸೋಹ ನಡೆಯಲಿದೆ. ಇದೊಂದು ವೇದಿಕೆಯ ಬಹುದೊಡ್ಡ ಸಾಧನೆ ಎನ್ನಬಹುದು. ೨೫೦ನೆಯ ಸಾಹಿತ್ಯ ದಾಸೋಹವನ್ನು ಬಹುಸಂಭ್ರಮದಿಂದ ಆಯೋಜಿಸಲು ಉದ್ದೇಶಿಸಿದ್ದು, ಇದಕ್ಕಾಗಿ ೩೦ನೆಯ ಜೂನ್ ೨೦೨೬ರಂದು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣ ಸಿದ್ಧವಿದೆ. ಈ ಸಮಾರಂಭದಲ್ಲಿ ದಾಸೋಹ ನಡೆದು ಬಂದ ದಾರಿಯ ಕುರಿತ ಸವಿ ಸಂಚಿಕೆಯೊಂದನ್ನು ಹೊರತರಲು ಉದ್ದೇಶಿಸಲಾಗಿದೆ. ಈ ಸಂಚಿಕೆಯ ಸಂಪಾದಕತ್ವವನ್ನು ಶ್ರೀ ಕೆ.ಎನ್. ಮಹಾಬಲ, ಶ್ರೀ ಬಿ.ಎಸ್. ಚಂದ್ರಶೇಖರ್ ಹಾಗೂ ಶ್ರೀ ಗುರುರಾಜ ಶಾಸ್ತ್ರಿಯವರಿಗೆ ವಹಿಸಲಾಗಿದೆ ಎಂದರು.

ಸಮನ್ವಯ ಸಮಿತಿಯ ಆರಂಭಿಕ ಉದ್ದೇಶವೇ ಕನ್ನಡದಲ್ಲಿ ಬ್ಯಾಂಕಿಂಗ್ ಮತ್ತು ವಾಣಿಜ್ಯ ವಿಷಯಕ್ಕೆ ಸಂಬಂಧಿಸಿದ ಅಧೋರಚನೆಯನ್ನು ನಿರ್ಮಿಸುವುದು. ಮಾನ್ಯ ಎಚ್ಚೆಸ್ಕೆ ಅವರ ಮಾರ್ಗದರ್ಶನದಲ್ಲಿ ಬ್ಯಾಂಕಿಂಗ್‌ನಲ್ಲಿ ಕನ್ನಡ ಎಂಬ

ಧ್ಯೇಯವನ್ನು ಹಿಡಿದ ನಾವೆಲ್ಲರೂ, ಈ ದೆಸೆಯಲ್ಲಿ ಕಳೆದ ಹಲವು ವರ್ಷಗಳಿಂದ ಶ್ರಮವಹಿಸಿ ನಿರ್ವಹಿಸಿದ ಕಾರ್ಯ ಅನೇಕ ಫಲಗಳನ್ನು ನೀಡಿದೆ. ಇದಕ್ಕೆ ಅನುಗುಣವಾಗಿ ವೇದಿಕೆಯ ಹಿರಿಯ ಸದಸ್ಯರಾಗಿದ್ದ ದಿ. ಪಾ.ರಾಜಗೋಪಾಲ ಅವರ ಉತ್ಸುಕತೆಯಿಂದ ರೂಪುಗೊಂಡ 'ಇಂಗ್ಲಿಷ್–ಕನ್ನಡ ಷೇರುಪೇಟೆ ಪದವಿವರಣ ಕೋಶ'ವನ್ನು ವಿಶೇಷ ಸಂಪಾದಕ ಸಮಿತಿಯ ನೇತೃತ್ವದಲ್ಲಿ ಪರಿಷ್ಕರಿಸಿ ಮುದ್ರಣಕ್ಕೆ ಸಿದ್ಧಪಡಿಸಲಾಗಿದೆ. ಈ ಪದಕೋಶವನ್ನು ಹಾಗೂ ಕಳೆದ ಶ್ರಾವಣ ಮಾಸದಲ್ಲಿ ನಡೆಸಿದ ಮಕ್ಕಳ ಕತೆಗಳ ಅಭಿಯಾನದಲ್ಲಿ ಪ್ರಸ್ತುತಪಡಿಸಲಾದ ಆಯ್ದ ಕತೆಗಳ ಸಂಕಲನವನ್ನು ಸಹಾ ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಗುವುದು. ಇದಲ್ಲದೆ, ನಮ್ಮ ವೇದಿಕೆಯ ಹಲವು ಸದಸ್ಯರು ತಮ್ಮ ಸ್ವರಚಿತ ಕತೆ, ಕಾದಂಬರಿ, ಪ್ರಬಂಧ, ಕವನ ಮುಂತಾದ ಹೊತ್ತಿಗೆಗಳನ್ನು ಇದೇ ಸಮಾರಂಭದಲ್ಲಿ ಲೋಕಾರ್ಪಣೆಗೊಳಿಸುವ ಆಸಕ್ತಿ ತೋರಿಸಿದ್ದಾರೆ. ೨೫೦ನೆಯ ಸಾಹಿತ್ಯ ದಾಸೋಹದ ಸಂಭ್ರಮೋತ್ಸವದಲ್ಲಿ ತಮ್ಮ ಪುಸ್ತಕ ಬಿಡುಗಡೆಯ ಅಪೇಕ್ಷೆಯುಳ್ಳವರು ತಮ್ಮನ್ನು ಸಂಪರ್ಕಿಸಬೇಕೆಂದು ಶ್ರೀ ರವೀಂದ್ರ ಅವರು ವಿನಂತಿಸಿದರು.

ನಂತರ ದಾಸೋಹದಲ್ಲಿ ಲೇಖನಗಳನ್ನು ಪ್ರಸ್ತುತಪಡಿಸಲು ನೋಂದಾಯಿಸಿದ್ದ ವೇದಿಕೆಯ ೨೧ ಸದಸ್ಯರು ತಾವು ರಚಿಸಿದ ಕತೆ, ಕವನ, ಪ್ರಬಂಧ, ಪ್ರವಾಸ ಕಥನ ಮುಂತಾದುವುಗಳನ್ನು ವಾಚಿಸಿದರು.

ಎರಡು ಗಂಟೆಗಳಿಗೂ ಹೆಚ್ಚು ಕಾಲ ನಡೆದ ಸ್ವರಚಿತ ಪ್ರಸ್ತುತಿಗಳ ವಾಚನದ ನಂತರ ದಾಸೋಹದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಟಿ.ಎಸ್. ಶ್ರವಣ ಕುಮಾರಿಯವರು ತಮ್ಮ ಅಧ್ಯಕ್ಷೀಯ ನುಡಿಗಳನ್ನು ದಾಖಲಿಸಿದರು. ಪ್ರಪ್ರಥಮವಾಗಿ ಇಂದು ಪ್ರಸ್ತುತವಾದ ದಾಸೋಹದ ಪ್ರಸ್ತುತಿಗಳ ಓದು ಹಾಗೂ ನಂತರ ಅವುಗಳ ವಾಚನವನ್ನು ಕೇಳುವ, ತನ್ಮೂಲಕ ಬರಹಗಳ ಸಾರವನ್ನು ಮನನ ಮಾಡಿಕೊಳ್ಳುವ ಅವಕಾಶ ನೀಡುವ ದಾಸೋಹಾಧ್ಯಕ್ಷತೆಯ ಸ್ಥಾನವನ್ನು ನೀಡಿದ ಸಂಚಾಲಕ ಮಂಡಳಿಯ ಮುಖ್ಯಸ್ಥರು ಹಾಗೂ ಸದಸ್ಯರನ್ನು ವಂದಿಸಿದರು. ಯಾವ ಯಾವ ಪ್ರಸ್ತುತಿಗಳ ವಿಭಾಗ ಯಾವುದು ಎಂಬ ಒಂದು ಪಕ್ಷಿನೋಟವನ್ನು ನೀಡುತ್ತಲೇ ಅವಲೋಕನವನ್ನು ಆರಂಭಿಸಿದರು. ಕಾಲದ ಮಿತಿಯನ್ನು ಅರಿತು ಅದಕ್ಕೆ ತಕ್ಕಂತೆ ಪ್ರತಿ ಪ್ರಸ್ತುತಿಯ ಗುಣ, ಸಾರ, ಭಾಷೆ, ಪ್ರಸ್ತುತತೆ ಮತ್ತು ಸೌಂದರ್ಯವನ್ನು ಹರಳುಗಟ್ಟಿಸಿ ವಿವರಿಸಿದರು. ಸಭಾ ಸಾರಥ್ಯ ವಹಿಸಿದ್ದ ಶ್ರೀ ಕೆ.ಎನ್. ಮಹಾಬಲ ಅವರು ಅಧ್ಯಕ್ಷರ ಅವಲೋಕನವನ್ನು ಕಾವ್ಯಾತ್ಮಕ ಎಂದರು. ಇಂತಹ ಒಂದು ಪ್ರೌಢ ಅವಲೋಕನವನ್ನು ಕೇಳುವುದೂ ಸಹಾ ಸೌಭಾಗ್ಯವೇ ಸರಿ. ಕನ್ನಡ ಸಾಹಿತ್ಯ ಕ್ಷೇತ್ರದ ಅನುಭವೀ ಲೇಖಕಿಯಾದ ಅವರಿಂದ ಇಂದಿನ ದಾಸೋಹವು ಒಂದು ಉನ್ನತ ಮಜಲನ್ನು ಏರಿ ಕಂಗೊಳಿಸಿತು. (ಅಧ್ಯಕ್ಷರ ಅನಿಸಿಕೆಗಳ ಪೂರ್ಣ ಪಾಠವನ್ನು ಈ ಸಂಚಿಕೆಯಲ್ಲಿ ನೀಡಲಾಗಿದೆ.)

ಶ್ರೀ ಕೆ.ಎನ್.ಮಹಾಬಲ ಅವರು ವಂದನಾರ್ಪಣೆಯೊಂದಿಗೆ ಸುಮಾರು ೩ ಗಂಟೆ ೨೦ ನಿಮಿಷಗಳ ಕಾಲ ನಡೆದ ೨೪೮ನೆಯ ಸಾಹಿತ್ಯ ದಾಸೋಹ ಅಂತ್ಯಗೊಂಡಿತು.

ಸಾಹಿತ್ಯ ದಾಸೋಹದ ಸಂಚಾಲಕತ್ವ : ಶ್ರೀ ಕೆ.ಎನ್.ಮಹಾಬಲ
ಜಿ ಮೀಟ್ ಆತಿಥ್ಯ : ಶ್ರೀಮತಿ ರಾಧಿಕಾ.ವಿ. ಗುಜ್ಜರ್
ವಿಡಿಯೋ ಸಂಸ್ಕರಣೆ : ಶ್ರೀಮತಿ ರೇಣುಕಾ ದೇಸಾಯಿ
ಪಿಡಿಎಫ್ ಆವೃತ್ತಿ ತಯಾರಕರು : ಶ್ರೀ ಶೃಂಗೇಶ್ವರ ಶರ್ಮ ಎಸ್.

(೨೪೮ನೆಯ ಸಾಹಿತ್ಯ ದಾಸೋಹದ ಸಂಪೂರ್ಣ ಚಿತ್ರಣವು ವೇದಿಕೆಯ ಯುಟ್ಯೂಬ್ ಹಾಗೂ ಜಾಲತಾಣದಲ್ಲಿ ವೀಕ್ಷಣೆಗೆ ಲಭ್ಯವಿದೆ.)

***

ತಿಂಗಳ ಬೆಳಕು - 26


ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

"ಬೆಂಗಳೂರಿನಿಂದ ಲಂಡನ್ – ಒಂದು ಪ್ರಣಯ ಪ್ರಯಾಣ"

ಶ್ರೀನಿವಾಸ ಗಂಗಾಧರ್ ಪಾಣಿಭಾತೆ ಅವರ ಸ್ವಾನುಭವ ಪರಿಚಯ

ಕಾರ್ಯಕ್ರಮ ವರದಿ: ರೇಣುಕಾ ದೇಸಾಯಿ

'ತಿಂಗಳ ಬೆಳಕು'– ಇದು ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಪ್ರತಿ ತಿಂಗಳು ನಡೆಯುವ ಕಾರ್ಯಕ್ರಮ. ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ವೆಬಿನಾರ್ ಮೂಲಕ ೨೬ನೆಯ 'ತಿಂಗಳ ಬೆಳಕು' ಕಾರ್ಯಕ್ರಮ ೦೨, ಮೇ ೨೦೨೬ರಂದು ಶನಿವಾರ ಸಂಜೆ ೫.೩೦ಕ್ಕೆ ನಡೆಯಿತು. ಇದು '**ಬೆಂಗಳೂರಿನಿಂದ ಲಂಡನ್ – ಒಂದು ಪ್ರಣಯ ಪ್ರಯಾಣ**' ಎಂಬ ವಿಷಯವನ್ನು ಕುರಿತು ನಮ್ಮ ವೇದಿಕೆಯ ಸದಸ್ಯರೇ ಆದ ಶ್ರೀ ಶ್ರೀನಿವಾಸ ಎಂ.ಜಿ. ಪಾಣಿಭಾತೆ ಅವರು ಬೆಂಗಳೂರಿನಿಂದ ಲಂಡನ್‌ವರೆಗೆ ಪತ್ನಿಸಮೇತ ಕಾರಿನಲ್ಲಿಯೇ ಹೋಗಿ ಬಂದ ಅನುಭವದ ಸಾಹಸಗಾಥೆ ಹೇಳುವ ಒಂದು ವಿಶೇಷ ಕಾರ್ಯಕ್ರಮ ವಾಗಿತ್ತು. ಸುಮಾರು ೬೩ ಲಕ್ಷ ರೂಪಾಯಿ ವೆಚ್ಚ ಮಾಡಿ, (ಅದಕ್ಕಾಗಿ ದಾವಣಗೆರೆಯಲ್ಲಿರುವ ಒಂದು ಸೈಟು ಮಾರಾಟಮಾಡಿ), ತಮ್ಮ ಸ್ವಂತ ಕಾರನ್ನು ಚಲಾಯಿಸಿ ಕೊಂಡು, ೨ ಖಂಡಗಳು, ೨೦ ದೇಶಗಳು, ೭೫ ದಿನಗಳಲ್ಲಿ, ೧೯೩೫೪ ಕಿ.ಮೀ. ದೂರ ಕ್ರಮಿಸಿದ ಅನುಭವಗಳನ್ನು ಸಚಿತ್ರದೊಂದಿಗೆ ವಿವರಿಸಿದ ಅವರ ನಿರೂಪಣಾ ಶೈಲಿ ಸೊಗಸಾಗಿತ್ತು, ರೋಚಕವಾಗಿತ್ತು.



ಆರಂಭದಲ್ಲಿ ಕಾರ್ಯಕ್ರಮದ ನಿರೂಪಕ ಶ್ರೀ ಗುರುರಾಜ ಶಾಸಿಯವರು ತಮ್ಮ ಔಪಚಾರಿಕ ಪ್ರಸ್ತಾವನೆಯಲ್ಲಿ ಕಾರ್ಯಕ್ರಮಕ್ಕೆ 'ಪ್ರಣಯ ಪ್ರಯಾಣ' ಎಂಬ ಕುತೂಹಲಭರಿತ ಶೀರ್ಷಿಕೆ ನೀಡಿದ 'ತಿಂಗಳ ಬೆಳಕು' ಸರಣಿಯ ರೂವಾರಿ ಶ್ರೀ. ರವಿ ಕುಸಬಿಯವರ ಬಗ್ಗೆ ವಿಶೇಷ ಅಭಿಮಾನ ವ್ಯಕ್ತಪಡಿಸಿ ಅಭಿನಂದಿಸಿದರಲ್ಲದೆ, ಮುಖ್ಯ ಅತಿಥಿಗಳು, ಸಭಿಕರು ಎಲ್ಲರನ್ನೂ ಸಭೆಗೆ ಸ್ವಾಗತಿಸಿದರು.

ಅತಿಥಿಗಳಾದ ಶ್ರೀ ಶ್ರೀನಿವಾಸ ಎಂ.ಜಿ.ಪಾಣಿಭಾತೆ ಅವರನ್ನು ಸಭೆಗೆ ಪರಿಚಯಿಸಿದವರು, ವೇದಿಕೆಯ ಹಿರಿಯ, ಹೆಸರಾಂತ, ಬರಹಗಾರ್ತಿ ಶ್ರೀಮತಿ ನಾಗರತ್ನ ಚಂದ್ರಶೇಖರ ಅವರು. "ಶ್ರೀ ಶ್ರೀನಿವಾಸ ಎಂ. ಜಿ. ಪಾಣಿಭಾತೆ ಮೂಲತಃ ಚಿತ್ರದುರ್ಗ ಜಿಲ್ಲೆಯ ಮೊಣಕಾಲ್ಮೂರಿನವರು, ಸುರತ್ಕಲ್ ನ ಎನ್.ಐ.ಟಿ.ಕೆ. ಶಿಕ್ಷಣ ಸಂಸ್ಥೆಯಲ್ಲಿ ಓದಿ, ಇಂಜಿನಿಯರಿಂಗ್

ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಬೆಂಗಳೂರಿನ ಕಂಪನಿಯಲ್ಲಿ ಉದ್ಯೋಗಿಯಾಗಿರುವ ಇವರು ಕಳೆದ ೨೫ ವರುಷಗಳಿಂದ ಬೆಂಗಳೂರಿನ ನಿವಾಸಿಯಾಗಿದ್ದಾರೆ. ಮಡದಿ ಸವಿತಾ ಜೊತೆಯಲ್ಲಿ ಹೊಸಹೊಸ ಸವಾಲುಗಳನ್ನು ಸ್ವೀಕರಿಸಿ, ಸಾಧಿಸಿ, ಸಾಧನೆಗೆ ಸೋಲಿಲ್ಲ ಎನ್ನುತ್ತಾರೆ" ಎಂದು ಪರಿಚಯಿಸಿದರು.

"ಪ್ರವಾಸ ಇವರಿಗೆ ಹೊಸತಲ್ಲ, ಆದರೆ ಪ್ರವಾಸದಲ್ಲಿ ಅಪರೂಪವಾದದ್ದನ್ನು ಮಾಡುವ ಹುಮ್ಮಸ್ಸು ಇವರದು. ೨೦೨೪ರಲ್ಲಿ ಇಂತಹ ಸಾಹಸಕ್ಕೆ ಇಂಬು ಕೊಟ್ಟಿದ್ದು, ಅಡ್ವೆಂಚರ್ಸ್ ಓವರ್‌ಲ್ಯಾಂಡ್ ಟ್ರಾವೆಲ್ ಕಂಪನಿ. ಮಕ್ಕಳ ಒತ್ತಾಸೆ, ಮಡದಿಯ ಸಹಕಾರ, ಸಹಪ್ರಯಾಣದೊಂದಿಗೆ, ೨೧ ಜನ, ೧೧ ಕಾರುಗಳಲ್ಲಿ ತಂತಮ್ಮ ಸ್ವಂತ ಕಾರನ್ನು ಚಲಾಯಿಸಿಕೊಂಡು, ೨ ಖಂಡಗಳು, ೨೦ ದೇಶಗಳು, ೭೫ ದಿನಗಳಲ್ಲಿ, ೧೯೩೫೪ ಕಿ.ಮೀ. ಕ್ರಮಿಸಿದ ಯಶೋಗಾಥೆಯನ್ನು ತಮ್ಮ ಪ್ರಪ್ರಥಮ ಪ್ರಕಟಿತ **'ಸ್ವಂತ ಕಾರಿನಲ್ಲಿ ಬೆಂಗಳೂರಿನಿಂದ ಲಂಡನ್‌ಗೆ'** ಪ್ರವಾಸ ಕಥನ ಪುಸ್ತಕದ ಎಂಬ ೩೩೨ ಪುಟಗಳ ಪ್ರವಾಸ ಕಥನದ ಕುತೂಹಲಕಾರಿ ಸಂಗತಿಗಳನ್ನು ಅವರ ಬಾಯಿಂದಲೇ ಕೇಳೋಣವೆಂದು ಶ್ರೀಮತಿ ನಾಗರತ್ನ ಚಂದ್ರಶೇಖರ್ ಆಶಿಸಿದರು.

ಶ್ರೀ ಶ್ರೀನಿವಾಸ ಎಂ.ಜಿ.ಪಾಣಿಭಾತೆ ಮತ್ತು ಅವರ ಪತ್ನಿ ಶ್ರೀಮತಿ ಸವಿತಾ ಪಾಣಿಭಾತೆಯವರು ವೆಬಿನಾರ್ ವೇದಿಕೆಯಲ್ಲಿ ಒಂದೇ ಫೋಟೋ ಫ್ರೇಮ್‌ನಲ್ಲಿ ಕುಳಿತಿದ್ದು **'ಬೆಂಗಳೂರಿನಿಂದ ಲಂಡನ್ ಒಂದು ಪ್ರಣಯ ಪ್ರಯಾಣ'**ಕ್ಕೆ ಹಿಡಿದ ಕನ್ನಡಿಯಂತೆ ತೋರಿತು, ಅವರ ಮುಖದಲ್ಲಿ ಉಲ್ಲಾಸ ನಳನಳಿಸುತ್ತಿತ್ತು. ತಮ್ಮ ಸಾಹಸದ ಪ್ರವಾಸಕ್ಕೆ ಜೈ ಎಂದು ಹೇಳಿದ ಮಕ್ಕಳಿಬ್ಬರನ್ನೂ ಅವರು ಸಭೆಗೆ ಪರಿಚಯಿಸಿದರು.

ರೋಚಕ ಪ್ರವಾಸದ ಕಥನವನ್ನು ಅತೀ ಅಚ್ಚುಕಟ್ಟಾದ ಪ್ರಾತ್ಯಕ್ಷಿಕೆಯೊಂದಿಗೆ ಅತ್ಯುತ್ತಮವಾಗಿ, ಹಂತಹಂತವಾಗಿ ಒಂದೇ ಒಂದು ಘಟನೆಯನ್ನು ಮರೆಯದೇ ಐದು ಭಾಗವಾಗಿಸಿ, ಸಚಿತ್ರವಾಗಿ ವಿವರಿಸುತ್ತಿದ್ದರೆ ಸಭೆ ಕೌತುಕದ ಮೌನಕ್ಕೆ ಶರಣಾಗಿತ್ತು.

೧) **ನಮಗೆ ಪ್ರೇರಣೆ ಎಲ್ಲಿಂದ ದೊರೆಯಿತು?:** ಇಚ್ಚೆ ಬೂಟ್ಸ ಎನ್ನುವ ನೆದರ್ ಲ್ಯಾಂಡ್ ಮಹಿಳೆ ಬೈಕ್‌ನಲ್ಲಿ ದೆಹಲಿಯಿಂದ ನೆದರ್ ಲ್ಯಾಂಡ್‌ವರೆಗೆ ಪ್ರಯಾಣಿಸಿದ್ದು ಇವರ ಪ್ರೇರಣೆ.

೨) **ಅದಕ್ಕಾಗಿ ತಯಾರಿ ಯಾವಾಗಿನಿಂದ ಪ್ರಾರಂಭವಾಯಿತು, ಕಾರ್ಯರೂಪಕ್ಕೆ ತಂದಿದ್ದು ಯಾವಾಗ?:** ಇಂತಹ ಸಾಹಸಮಯ ಪ್ರಯಾಣ ಮಾಡಲು ೨೦೨೦ರಿಂದ ತಯಾರಿ ನಡೆಸುತ್ತಿದ್ದಾಗ ೨೦೨೩ರಲ್ಲಿ ಅಡ್ವೆಂಚರ್ಸ್ ಓವರ್‌ಲ್ಯಾಂಡ್ ಕಂಪನಿಯಿಂದೊಂದು ವಾಟ್ಸಾಪ್ ಸಂದೇಶ ಬಂದಾಗ, ತಮ್ಮ ಕನಸು ಚಿಗುರೊಡೆಯಿತು ಎಂದು ಅವರ ತಯಾರಿಯ ಸಣ್ಣ ಸಣ್ಣ ವಿವರಣೆ ನೀಡುತ್ತಾರೆ ಶ್ರೀನಿವಾಸ.

೩) **ಈ ಪಯಣವನ್ನು ಕೈಗೊಳ್ಳಲು ನಿರ್ಧರಿಸಿದ ಸಂದರ್ಭ:** ಈ ಪ್ರಯಾಣಕ್ಕೆ ಬೇಕಾಗುವ ೬೩ ಲಕ್ಷ ಹಣವನ್ನು ದಾವಣಗೆರೆಯಲ್ಲಿನ ತಮ್ಮ ಸೈಟ್ ಮಾರಿ ಹೊಂದಿಸಿಕೊಂಡು, ಪುಟ್ಟ ಮಕ್ಕಳ ಒಪ್ಪಿಗೆ ಪಡೆದು, ೧೩ನೇ ಏಪ್ರಿಲ್ ೨೦೨೪ರಿಂದ ೨೭ ಜೂನ್ ೨೦೨೪ ವರೆಗಿನ ೭೫ ದಿನಗಳ ಪ್ರವಾಸಕ್ಕೆ ಚಾಲನೆ.

೪) **ಈ ಪ್ರಯಾಣದ ಕುರಿತು ಹಾಗೂ ಆಯೋಜಿಸಿದ ಸಂಸ್ಥೆಯ ಬಗ್ಗೆ ಕಿರುಪರಿಚಯ:** ಅಡ್ವೆಂಚರ್ಸ್ ಓವರ್‌ಲ್ಯಾಂಡ್ ಟ್ರಾವೆಲ್ ಕಂಪನಿಯವರ **'Road to London'** ಎನ್ನುವ ಪ್ರಮುಖ ರಸ್ತೆ ಪ್ರಯಾಣವನ್ನು ಪ್ರತಿವರ್ಷ ಆಯೋಜಿಸಿ, ಅವರ ಪ್ರಯಾಣದ ತಯಾರಿಯ ಪೂರ್ತಿ ವಿವರಣೆ ನೀಡುತ್ತಾರೆ.

೫) ಪ್ರಯಾಣದಲ್ಲಿ ವೀಕ್ಷಿಸಿದ ಕೆಲವು ಸ್ಥಳಗಳು/ದೇಶಗಳ ಕುರಿತು ಸವಿಸ್ತಾರವಾದ ಮಾಹಿತಿ: ೨ ಖಂಡಗಳು, ೨೦ ದೇಶಗಳು, ೭೫ ದಿನಗಳಲ್ಲಿ, ೧೯೩೫೪ ಕಿ. ಮಿ. ಕ್ರಮಿಸಿದ್ದ ದೇಶಗಳು ಇಂತಿವೆ: ಇಂಡಿಯಾ – ನೇಪಾಳ – ಚೈನಾ – ರೇಗಿಸ್ತಾನ – ಉಜ್ಬೆಕಿಸ್ತಾನ– ಕಜ್ಬೇಕಿಸ್ತಾನ್ – ರಷಿಯಾ – ಜಾರ್ಜಿಯಾ – ಟರ್ಕಿ – ಗ್ರೀಸ್ – ಬಲ್ಗೇರಿಯಾ – ಸೆರಬಿಯಾ – ಹಂಗ್ರಿ – ಆಸ್ಟ್ರಿಯಾ – ಸ್ಲೊವೆಕಿಯಾ – ಚೆಕ್ ರಿಪಬ್ಲಿಕ್ – ಜರ್ಮನಿ – ಬೆಲ್ಜಿಯಂ – ಫ್ರಾನ್ಸ್ – ಯುನೈಟೆಡ್ ಕಿಂಗ್ ಡಂ – ಹೀಗೆ ಒಂದೊಂದು ದೇಶದ ಬೌಗೋಳಿಕ, ಸಾಮಾಜಿಕ. ಪ್ರಯಾಣದ ಕಾಯಿದೆ ಕಾನೂನು ಎಲ್ಲವನ್ನೂ ವರ್ಣಿಸುತ್ತಿದ್ದರೆ ವೆಬಿನಾರ್ ವೇದಿಕೆಯಲ್ಲಿದ್ದ ನಾವು ಅವರ ಮಾತು ಕೇಳೋಣವೋ ಇಲ್ಲಾ ಅಲ್ಲಿ ಬರೆದ ವಿವರ ಓದೋಣವೋ ಎನ್ನುವ ಸ್ಪರ್ಧೆಯಲ್ಲಿದ್ದೆವು. ಜೊತೆಗೆ ಯಾವ ಖರ್ಚು, ವೆಚ್ಚ, ಶ್ರಮವಿಲ್ಲದೆ ಆ ದೇಶಗಳಲ್ಲಿ ಕಾರಿನಲ್ಲಿ ಹೋಗಿಬಂದ ಅನುಭವ ನಮ್ಮದಾಯಿತು.

ಕಾರ್ಯಕ್ರಮದ ಆಯೋಜಕರು ಅವರಿಗೆ ನೀಡಿದ ಸಮಯ ೫೦ ನಿಮಿಷ, ಮೇಲೆ ೧೫ ನಿಮಿಷ ಪ್ರಶ್ನೋತ್ತರ ಒಟ್ಟು ೬೫ ನಿಮಿಷ. ಇಷ್ಟೆಲ್ಲಾ ಸಮಯ ಕಳೆದಿದ್ದರೂ, ನಾವಿನ್ನೂ ಕಜ್ಜಾಕಿಸ್ತಾನದಲ್ಲಿ ಇದ್ದೇವೆ, ಭಾರತಕ್ಕೆ ತಿರುಗಿ ಬರಲು ಇನ್ನೂ ಹದಿನಾರು ದೇಶ ಸುತ್ತುವದಿದೆ ಎಂದುಕೊಂಡಿದ್ದರೆ, ಶ್ರೀನಿವಾಸ ಅವರೇ, "ನೀವು ನಿಗದಿಪಡಿಸಿದ ಸಮಯ ಮುಗಿಯಿತು" ಎಂದರು. ಸಭಿಕರೆಲ್ಲರೂ ಇನ್ನೂ ಪ್ರವಾಸ ಕಥನ ಕೇಳುವದಿದೆ ಎನ್ನುವ ಮೌನಭಾವ ತಾಳಿದಾಗ, ಸೂತ್ರಧಾರಿಗಳಾದ ಶ್ರೀ ಗುರುರಾಜ ಶಾಸ್ತ್ರಿಗಳು ಮತ್ತು ರೇಣುಕಾ ದೇಸಾಯಿ ತಕ್ಷಣದಲ್ಲೇ ನಿರ್ಧಾರ ತೆಗೆದುಕೊಂಡು ಈ ಕುರಿತು ಇನ್ನೊಂದು ಸಂಚಿಕೆ ಮಾಡಬೇಕು, ಅದೂ ವಿಳಂಬವಿಲ್ಲದೆ ಮುಂದಿನ 'ತಿಂಗಳ ಬೆಳಕು' ಕಾರ್ಯಕ್ರಮದಲ್ಲಿ, ರಷಿಯಾಕ್ಕೆ ಕರೆದುಕೊಂಡು ಹೋಗಬೇಕು ಎಂದು ಎಲ್ಲರ ಅಭಿಲಾಷೆಯನ್ನು ಕೇಳಿಕೊಳ್ಳಲಾಗಿ, ಅಷ್ಟೇ ಸಂತೋಷದಿಂದ ಅತಿಥಿಗಳು ಒಪ್ಪಿಗೆ ಸೂಚಿಸಿದರು. ನಾವಂತೂ ಸದ್ಯದಲ್ಲಿಯೇ ರಷಿಯಾಕ್ಕೆ ಹೋಗುತ್ತೇವೆ!! ನೀವು??

ಕೊನೆಯಲ್ಲಿ ಶ್ರೀಮತಿ. ರೇಣುಕಾ ದೇಸಾಯಿ ವಂದನಾರ್ಪಣೆ ಸಲ್ಲಿಸಿದರು.

***

ಕವಿಮನ

ಮಳೆ, ಮರ, ಮರಿ ಹಕ್ಕಿ

ಎಲ್ಲಿ ಬಚ್ಚಿಟ್ಟುಕೊಂಡಿರುವೆ ಎಲೆ ಹಕ್ಕಿ
ಬೆಳಕು ಹರಿಯಿತು ಮೋಡ ಸರಿಯಿತು
ಭೂ ತಾಯಿ ನಗುತಿಹಳು ಹೊರಗೆ ಬಾ।

ಇರುಳು ಸುರಿದ ಜಡಿ ಮಳೆಯಲ್ಲಿ ನೆನೆದು
ಮರವನ್ನಪ್ಪಿ ಆಕಾಶವನೆ ಹೊದ್ದು
ಚಳಿಗೆ ನಡುನಡುಗಿ ಹೆದರಿದೆಯಾ ನೀನು!

ಅಮ್ಮನೊಟ್ಟಿಗೆ ಉಣ್ಣೆ ರಗ್ಗಿನೊಳಗಿದ್ದ ನಾನು
ಹೊಟ್ಟೆ ತುಂಬಿದರು ನಿದ್ರೆ ಬಾರದೆ ನಿನ್ನನ್ನೇ ನೆನೆಯುತ್ತಿದ್ದೆ
ಸಿಡಿಲು ಗುಡುಗಳ ಆರ್ಭಟಕ್ಕೆ ಹೆದರಿ ಮುದುರಿದ್ದೆ..

ಮನೆಯೊಳಗೆ ನಾನು, ಮರದ ಮೇಲೆ ನೀನು
ಮಳೆರಾಯ ಬಂದಾಗ ನೀನೇಕೆ ಬರಲಿಲ್ಲ ಒಳಗೆ
ನಾನಂತು ಮರ ಹತ್ತಿ ಬರಲಾರೆ ನಿನ್ನ ಬಳಿಗೆ

ಮಳೆ ನೀರಿನಲ್ಲಿ ನಿನ್ನಂತೆ ನೆನೆಯಲು ನಂಗಿಷ್ಟ
ನೆಗಡಿ ಕೆಮ್ಮು ಜ್ವರ ಬಂದರೆ ಅಮ್ಮನಿಗೆ ಕಷ್ಟ
ನನ್ನ ಪಾಲಿನ ಖರ್ಜೂರ ಬಾದಾಮಿ ತಿಂದು ನೀನಾಗು ಬಾ ಬಲಿಷ್ಠ.....

ನಿನಗೊಂದು ಅಂಗಿ ತಂದು ಅಂಗಳದಿ ಕಾದಿರುವೆ
ಒದ್ದೆಯಾದರೆ ಪುಕ್ಕಗಳ ಒರೆಸಲು ಕರ ವಸ್ತ್ರ ಇಟ್ಟಿರುವೆ
ನನ್ನ ಕೋಣೆಯ ಕಿಟಕಿಗಳ ಬಾಗಿಲುಗಳ ತೆರೆದಿರುವೆ.
ಮಿಂಚಿದಾಕ್ಷಣ ಹಾರುತ ನನ್ನ ಮಂಚದ ಬಳಿ ಬಾ...

ಮಳೆ ಬಂದರೆ ರಾತ್ರಿ ನಿನಗಿಲ್ಲವಲ್ಲ ಛತ್ರಿ
ನನ್ನಮ್ಮನಂತೆ ನಿನ್ನ ತಟ್ಟಿ ಮಲಗಿಸುವೆ
ಬೇಗ ಬಾ....

– ನಾಗರತ್ನ ಚಂದ್ರಶೇಖರ್
01.04.2026

ಕವಿಮನ

ಶಿಲಾ ಕಾವ್ಯ

ಪ್ರಕೃತಿ ಕುಂಚದಲಿ ಅರಳಿದ ಶಿಲಾ ರೂಪ,
ಮೌನವಾಗಿ ನೀಡುವವು ಕಲೆಯ ಸ್ವರೂಪ
ಗಾಳಿ ಮಳೆಗಳ ಪೆಟ್ಟಿಗೆ ಕುಗ್ಗದ ಧೀರತೆ,
ಕಾಲದ ಪುಟಗಳಲಿ ಅಚ್ಚಾದ ಸುಂದರ ಕಥೆ.//

ಅಗಾಧ ಕಣಿವೆಯಲಿ ಹರಡಿದ ನೀಲಿ ಮಂಜು,
ದೂರದಲಿ ದಿಗಂತಕೆ ತಾಗಿದಂತೆ ಅಂಚು
ನೀಲಗಿರಿ ಘಮವ ಹೊತ್ತ ಪ್ರಕೃತಿಯ ಮಡಿಲು,
ಕಣ್ಣಿಗೆ ಹಬ್ಬವನು ತರುವ ಬ್ಲೂಮೌಂಟೇನ್ಸ್ ಅಳಲು./

ಪ್ರೀತಿಯ ಹಂಬಲಕೆ ವಿಧಿಯಾಟ ಎದುರಾಗಿ,
ಮಾಂತ್ರಿಕನ ಮಂತ್ರದಿ ಶಿಲೆಯಾದರು ಅಂದು
ಯುದ್ಧದ ಅಬ್ಬರದಿ ರಕ್ಷಣೆಗೆ ನಿಂತವರು,
ಮತ್ತೆ ಮಾನವ ರೂಪ ಕಾಣದೆ ಕಲ್ಲಾದವರು./

ಸೂರ್ಯನ ಹೊಂಬೆಳಕು ಸೋಕಿದಾಗ ಬಂಗಾರ,
ನಿಸರ್ಗದ ಮಡಿಲಲ್ಲಿ ಕೆತ್ತಿದ ಅಪೂರ್ವ ಹಾರ.
ಮನುಷ್ಯನ ಕಲೆಗಿಂತಲೂ ಮಿಗಿಲು ಈ ಸೃಷ್ಟಿ
ಕಣ್ಮನ ಸೆಳೆಯುವ ಶಿಲಾ ಕಾವ್ಯ/

ಮೂರು ಶಿಲೆಗಳಲಿ ಅಡಗಿದೆ ಮಮತೆಯ ಬಂಧ,
ಪ್ರತಿ ಮಣ್ಣ ಕಣದಲ್ಲೂ ಉಸಿರಾಡುತಿದೆ ಗಂಧ.
ಕಲೆಯೂ ನೀನೇ, ಶಿಲೆಯೂ ನೀನೇ, ಪ್ರಕೃತಿಯೇ ಸಕಲ
ನಿನ್ನ ಈ ಮಡಿಲಲಿ ನಾವೆಲ್ಲರೂ ಚಿರಕಾಲ//.

– ಶಂಕರ ರಾವ್ ಎನ್.
08.04.2026

ವೈದ್ಯೋ ನಾರಾಯಣ ಹರಿ

ವೈದ್ಯನ ಹೆಸರು, ವಿಳಾಸದ ಶೀರ್ಷಿಕೆ,
ಆರೋಗ್ಯದ ದಾರಿಯಲ್ಲಿ ದಿವ್ಯದ ಕಿರುಬೆಳಕು.
ನಂಬಿಕೆಯ ದೀಪ, ದೇವನ ಸಂಕೇತ,
ಕಣ್ಣಿಗೆ ಕಾಣದ ಆರೈಕೆಯ ದೃಷ್ಟಾಂತ.

Rx ಎಂದು ಬರೆಯುವ ಪ್ರತಿ ಅಕ್ಷರ,
ನಂಬಿಕೆಯ ವೃಕ್ಷದ ಒಂದೊಂದು ಶಾಖೆ
ಮಾತುಗಳಲ್ಲಾದರೂ ದೇವರ ಶಕ್ತಿ,
ಶಾಸ್ತ್ರದ ಜೊತೆಗೆ ದಿವ್ಯದ ಒಡತಿ.

ಔಷಧಿಯ ಸಮಯ, ದಿನದ ಪ್ರಕಾರ,
ಮೂರು ಸಾರಿ, ಎರಡು ಸಾರಿ, ಹೃದಯದ ಅನುಸಾರ.
ಆಹಾರದ ಮುನ್ನ, ಅಥವಾ ನಂತರ,
ದೇವರ ಲೀಲೆಯಂತೆ, ಸಮತೋಲನದ ಅಂತರ.

ಹಸ್ತಾಕ್ಷರವು ವೈದ್ಯನ ದೀಪವಂತೆ,
ಪ್ರತಿ ಅಕ್ಷರದಲ್ಲಿ ದೇವರ ತೋರ್ಪಡಿಕೆ.
ಆರೋಗ್ಯದ ಪ್ರತಿಜ್ಞೆ, ಸೇವೆಯ ಸಂಕೇತ,
ನಾರಾಯಣನ ಕೈಹಿಡಿವ ಕರುಣೆ ತೋರ್ಪಡಿಸುವ ಸೇತುವೆ.

ವೈದ್ಯೋ ನಾರಾಯಣ ಹರಿ, ದೇವರ ರೂಪ,
ಆತ್ಮಾರೋಗ್ಯದ ದಾರಿಯ ಪ್ರತ್ಯೇಕರೂಪ.
ಎಲ್ಲ ದಿಗ್ಬಂಧನಕ್ಕೂ ಮೀರಿ,
ಆರೋಗ್ಯವೆಂಬ ವರವನ್ನು ನೀಡುವ ದಿವ್ಯ ಸೂರಿ.

– ರಘುರಾಂ ಎನ್.ವಿ.
15.04.2026

ಕವಿಮನ

ಬರಿದಾದಳು

ಒಂದು ಬೆಳ್ಳಂ ಬೆಳಿಗ್ಗೆ
ಛಟೀಲನೆ ಇದ್ದಕ್ಕಿದ್ದಂತೆ
ಬುಡ ಕಡಿದ ಮರದಂತೆ
ಧರಾಶಾಹಿಯಾಗಲಿಲ್ಲ ಆಕೆ

ನಿಮಿಷದಲ್ಲಿ ಆಗಿದ್ದಲ್ಲವಿದು
ಆಗಿದ್ದುsss...
ಸದ್ದಿರದ ಋತು ಬದಲಾವಣೆಯಂತೆ
ಬಯಕೆಗಳ ಮುಂದೂssssಡಿ
ಕನಸೊಂದ ಕೈಯಾರೆ ಹೂತು
ಹೇಳಬೇಕಿದ್ದರ ಕತ್ತು ಹಿಸುಕಿ
ಕೇಳುವ ಕಿವಿಗಳ ಕಳೆದುಕೊಂಡು
ತನ್ನನ್ನು ಸಮಜಾಯಿಸುವುದನ್ನು ಕೈಬಿಟ್ಟು
ಹಳಿಯುವುದನ್ನೂ ನಿಲ್ಲಿಸಿ
ದೂರುಗಳ ಪುಟ ಹರಿದು
ನಿರೀಕ್ಷೆಗಳ ಬಾಗಿಲು ಮುಚ್ಚಿ

ಒಂದು ಸಮಯದ ನಂತರ
ಅವರೊಡನೆಯಷ್ಟೇ ಅಲ್ಲ
ತನ್ನನ್ನೂ ಸೇರಿಸಿಯೇ
ಪ್ರಶ್ನಿಸಿಕೊಳ್ಳುವುದನ್ನೂ ಬಿಟ್ಟಳು

ಕೇವಲ ನಗುವಿರುತ್ತಿತ್ತು
ಎಲ್ಲಾ ಸರಿಯಿದೆ ಎನ್ನಿಸುವಂತೆ
ಆದರದು ಮುಖವಾಡ
ಅದರ ಹಿಂದಿನ ಆಕೆಯೇ ಇಲ್ಲವಾಗಿ

ಯಾರೂ ಗಮನಿಸಲಿಲ್ಲ
ಅಂಗಳದಲ್ಲಿದ್ದ ನಳನಳಿಸುವ ಹೂಗಳ
ನಡುಮನೆಯ ನೀರು ತುಂಬಿದ್ದ ಚೊಂಬು
ತಟ್ಟೆಗಿಳಿದ ಬಿಸಿ ಮೃದು ರೊಟ್ಟಿ
ಗರಿ ಗರಿ ಬಟ್ಟೆ, ಗಮನಿಸಲೇ ಇಲ್ಲ
ಇಷ್ಟೇ ಎಣ್ಣೆಯಲ್ಲುರಿಯುತ್ತಿರುವ ದೀಪ

ಇರುವುದೊಂದೇ
ಖಾಲಿ ಖಾಲಿ ಖಾಲೀತನ
ಏಕೆಂದರೆ ಆಕೆ ನಿಮಿಷದಲ್ಲಿ ಅಳಿಯಲಿಲ್ಲ
ದಿನವೂ ನಿಧಾನ ಬರಿದಾದಳು

– ರಾಧಿಕಾ ಗುಜ್ಜರ್
22.04.2026

ಕವಿಮನ

ಮೂಲ

ಗಂಭೀರ ಸಮುದ್ರ ಸುನಾಮಿಗಳ ಆಗರ
ಸುಂದರ ಜಲಪಾತವೂ ಜವನ ಆವಾರ
ಸೂರ್ಯ ಸಿಡಿವ ಬಾಂಬುಗಳ ಗೋದಾಮು
ಚಂದ್ರ ಮಣ್ಣಿನ ಮುದ್ದೆ ಗೊತ್ತಿದ್ದುದು
ಸುಧೆ ಸಿಗುವ ಮುನ್ನ ವಿಷದುತ್ಕರ್ಷ
ಎದೆಯ ಸವಿ ಹಾಲ್ಗಳಸ ಹಸಿಯ ಮಾಂಸ 1

ಸರಳವಾದ್ದರ ಮೂಲ ದುರ್ದರ್ಶ
ನವಕೋಟಿ ನಾರಾಯಣನೊಳಗೆ ಪುರಂದರದಾಸ
ವಲ್ಮೀಕ ಮೂಲದಲಿ ವ್ಯಾಧ
ವ್ಯಾಸ ಜೀನುಗಳಲ್ಲಿ ಮತ್ಸ್ಯಗಂಧ
ಮುಕುತಿಪಥ ತೋರಿದಾಚಾರ್ಯ
ಹುಟ್ಟಿದ್ದು ಸೆರೆಮನೆಯಲೆನುವ ಚೋದ್ಯ 2


ಕಟುಸತ್ಯ ಕಾಣಬೇಕಿಹ ನ್ಯಾಯ
ಪಟ್ಟಿಗಟ್ಟಿದೆ ಕಣ್ಣ
ದಿಟಸಟೆಗಳೆರಡಕೂ ಕಾಣಿರೋ
ಊಸರುಳ್ಳಿಯ ಬಣ್ಣ
ನಡುಪ್ರಾಯವತ್ಯಲ್ಪ ಕಾಲ
ದೃಢಕಾಯ ಕಾಲಕೋಶದಲಿ ಕಂಕಾಲ
ಸೃಷ್ಟಿಕರ್ತನಿಗುಂಟು ಅಂತ್ಯ
ಯಮನಿಗಿಲ್ಲವೆ ಸಾವು?
ಹುಟ್ಟುವಾಗಲೆ ಕಟ್ಟಿತ್ತ ಬುತ್ತಿ
ಹುಟ್ಟಿದ್ದು ಯಾವಾಗ ನಾವು? 3

ನದಿಮೂಲ ಬರಿದೆ ಜಿನುಗುಖನಿ
ಋಷಿಮೂಲ ಶೃಂಗಾರ ವಾಹಿನಿ
ಸರ್ವಶಕ್ತಿಯಾರಂಭವೆ ಮೂಲ
ಏರುತೇರುತ ಚಕ್ರ
ಸಹಸ್ರಾರದಲಿ ಹಮ್ಮಿದ ಜಾಲ
ಮೂಲದಲಿ ಮೂಲಕ್ಕಭಾವ
ನಿಜಕ್ಕೂ ಮೂಲ ಹೌದು ಅಮೂಲ
ನೀರುಳ್ಳಿ ಪದರವೊಂದೊಂದನೇ ತೆಗೆಯೆ
ಸಾರ ಉಳಿದಿದ್ದೀತೆ ಕೊನೆಗೆ?
ನಾಶ ಖಚಿತವಹ ಕೋಶವ್ಯೆದರೊಳಗೆ
ಅವಿನಾಶ ಹೇಗೆ?
ಕನ್ನಡಿಯ ಹಿಂದೆ ಶೂನ್ಯದಲಿಹುದೆ
ಬಣ್ಣ ಜಗವೆಲ್ಲವೂ
ಇನ್ನು ನನಗೆಲ್ಲಿಹುದು ತಾವು? 4

– ಬಿ.ಎಸ್. ಚಂದ್ರಶೇಖರ್
29.04.2026

“ಮಂಡಲ”– ಚಿತ್ರ ರೂಪದಲ್ಲಿನ ಬ್ರಹ್ಮಾಂಡ, ಧ್ಯಾನದಲ್ಲಿನ ಆತ್ಮ

– ರತ್ನಾ ಮೂರ್ತಿ




ಭಾರತೀಯ ಸಂಸ್ಕೃತಿಯಲ್ಲಿ ಕೆಲವೊಂದು ರೂಪಗಳು ಕೇವಲ ದೃಶ್ಯವಲ್ಲ; ಅವು ಜೀವನ ತತ್ತ್ವ, ಧ್ಯಾನ ಮತ್ತು ಬ್ರಹ್ಮಾಂಡದ ಆಳವನ್ನೂ ಪ್ರತಿಬಿಂಬಿಸುತ್ತವೆ. ಅಂತಹ ಒಂದು ರೂಪವೆಂದರೆ ಮಂಡಲ.


'ಮಂಡಲ' ಎಂದರೆ ವೃತ್ತ, ಸಂಪೂರ್ಣತೆ, ಸಮತೋಲನ, ಸೃಷ್ಟಿಯ ಚಕ್ರ, ಇವು ಎಲ್ಲವೂ ಸೇರಿರುವ ಸಂಕೇತ. ಅದನ್ನು ಕೇವಲ ವೃತ್ತಾಕಾರದ ಚಿತ್ರವೆಂದು ನೋಡಿದರೆ, ಅದರಿಂದ ದೊರೆಯುವ ಆಳವಾದ ಬೇರೆಯೇ ಅನುಭವದಿಂದ ವಂಚಿತರಾಗುತ್ತೇವೆ. ಮಂಡಲವೆಂದರೆ ರೂಪದಲ್ಲಿ ತತ್ತ್ವ, ದೃಶ್ಯದಲ್ಲಿ ಧ್ಯಾನ, ಮನಸ್ಸಿನಲ್ಲಿ ನೆಲೆಸುವ ಶಾಂತಿ!

ಭಾರತೀಯ ತತ್ತ್ವಶಾಸ್ತ್ರದಲ್ಲಿ ಬ್ರಹ್ಮಾಂಡವನ್ನು ವೃತ್ತಾಕಾರ ಚಲನೆಯ, ಕೇಂದ್ರದಿಂದ ವಿಸ್ತಾರವಾಗುವ ಶಕ್ತಿಯ ರೂಪದಲ್ಲಿ ತೋರಿಸಲಾಗಿದೆ. ಮಧ್ಯಬಿಂದುವು ಸೃಷ್ಟಿಯ ಮೂಲ, ಆತ್ಮದ ಸಂಕೇತ. ಬಿಂದುವಿನಿಂದ ವಿಸ್ತಾರವಾಗುವ ರೇಖೆಗಳು, ವೃತ್ತಗಳು, ಪದ್ಮಗಳು, ಚೌಕಗಳು ಹೀಗೆ – ಸೃಷ್ಟಿಯ ನಿಯಮಿತ ಚಲನವಲನವನ್ನು ಪ್ರತಿಬಿಂಬಿಸುತ್ತವೆ.

ವೇದಕಾಲದಲ್ಲಿಯೇ ಯಜ್ಞವೇದಿಗಳ ವಿನ್ಯಾಸದಲ್ಲಿ ಮಂಡಲ ತತ್ತ್ವ ಕಂಡುಬರುತ್ತದೆ. ದೇವಾಲಯಗಳ ವಾಸ್ತುಶಿಲ್ಪದಲ್ಲೂ “ವಾಸ್ತುಪುರುಷ ಮಂಡಲ” ಪ್ರಕ್ರಿಯೆಯನ್ನು ಅನುಸರಿಸಲಾಗಿದೆ: ಗರ್ಭಗುಡಿಯೇ ಕೇಂದ್ರಬಿಂದು; ಸುತ್ತಲಿನ ವೃತ್ತಗಳು, ಚೌಕಗಳು, ಪದ್ಮಗಳು – ಎಲ್ಲವೂ ಸೃಷ್ಟಿಯ ಕ್ರಮಬದ್ಧತೆಯನ್ನು ತೋರಿಸುತ್ತವೆ. ಪ್ರತಿಯೊಂದು ವಿನ್ಯಾಸವೂ ಶಕ್ತಿಯ ಸ್ಥಿರತೆ, ಸಮತೋಲನ ಮತ್ತು ಧ್ಯಾನದ ಅನುಕೂಲತೆಯನ್ನು ಸೂಚಿಸುತ್ತದೆ.



ತಂತ್ರಶಾಸ್ತ್ರದಲ್ಲಿ ಮಂಡಲವು ಆರಾಧನೆಯ ಪ್ರಮುಖ ಸಾಧನ. ವಿಶೇಷವಾಗಿ ಶ್ರೀಚಕ್ರವು ದೇವೀ ಉಪಾಸನೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ಪ್ರತಿಯೊಂದು ತ್ರಿಭುಜ, ವೃತ್ತ, ರೇಖೆ, ಚೌಕ ಇವೆಲ್ಲವೂ ಶಕ್ತಿಯ ಸಂಕೇತಗಳು. ಸಾಧಕನು ಅತ್ಯಂತ ಶ್ರದ್ಧೆಯಿಂದ ಇದನ್ನು ಧ್ಯಾನಿಸಿ ಉಪಾಸನೆ ಮಾಡಿದಾಗ, ಆ ಶಕ್ತಿಯೊಂದಿಗೆ ಏಕಾತ್ಮ ಭಾವವನ್ನು ಅನುಭವಿಸಬಹುದು. ಮನೆಗಳಲ್ಲಿ ದೇವಸ್ಥಾನಗಳಲ್ಲಿ ಶ್ರದ್ಧಾಭಕ್ತಿಗಳಿಂದ ನಡೆಸುವ ಗಣಹೋಮ, ಗಣಪತಿ ಹೋಮ, ಸುದರ್ಶನ ಹೋಮ, ಪವಮಾನ ಹೋಮ ಇತ್ಯಾದಿಗಳಲ್ಲಿ ಪೂಜಾ ಭಾಗವಾಗಿ ರಚಿಸುವ ಗಾಢ ವರ್ಣಗಳ ಮಂಡಲಗಳು! ಅವುಗಳು ಉದ್ದೀಪಿಸುವ ಭಕ್ತಿಭಾವ ಸಂತೋಷಗಳನ್ನು




ವರ್ಣಿಸಲು ಸಾಧ್ಯವೇ? ಹೋಮ-ಹವನಗಳಲ್ಲಿ ಪ್ರತಿಷ್ಠಾಪಿಸುವ ಹೋಮಕುಂಡವೂ ಅಥವಾ ಅಗ್ನಿಕುಂಡವೂ ಮಂಡಲದಂತೆ ವ್ಯವಸ್ಥಿತ. ಪ್ರತಿಯೊಂದು ದಿಕ್ಕಿಗೂ ಬೇರೆ ಬೇರೆ ದೇವತೆಗಳಿದ್ದು ಪ್ರತಿಯೊಂದು ಅಂಶವೂ ಶಕ್ತಿಯ ಸಂಕೇತ ವಾಗಿರುತ್ತದೆ. ಹೋಮವು ಮಂಡಲದೊಳಗಿನ ಬ್ರಹ್ಮಾಂಡ,,!

ಬೌದ್ಧ ಪರಂಪರೆಯಲ್ಲಿ, ವಿಶೇಷವಾಗಿ ಬೌದ್ಧ ಧರ್ಮದ ವಜ್ರಯಾನ ಪಂಥದಲ್ಲಿ ಮರಳಿನಿಂದ ಅತ್ಯಂತ ಆಕರ್ಷಕವಾದ, ವರ್ಣಮಯವಾದ ಕ್ಲಿಷ್ಟಕರವಾದ ಮಂಡಲವನ್ನು ಮರಳಿನಿಂದ ರಚಿಸಿ, ಪೂಜಿಸಿ ಎರಡು ಮೂರು ದಿನಗಳ ನಂತರ ನಿರ್ಮೋಹದಿಂದ ಅಳಿಸಿಬಿಡುತ್ತಾರೆ. ಹಾಗೆ ಅಳಿಸಿಬಿಡುವುದನ್ನು ಕಂಡಾಗ ಅಯ್ಯೋ! ಎಷ್ಟು ಚೆಂದದ ಮಂಡಲವನ್ನು ಹೀಗೆ ಅಳಿಸುವರಲ್ಲಾ ಎಂದು ನಮಗೆ ಪರಿತಾಪವಾಗದಿರದು. ಆದರೆ ಈ ಕ್ರಿಯೆ ಜೀವನದ ಅನಿತ್ಯತೆಯನ್ನು ತೋರಿಸುವುದಕ್ಕಾಗಿ. ದಿನಗಳ ಶ್ರಮವನ್ನು ಕ್ಷಣಗಳಲ್ಲಿ ನಾಶಮಾಡುವ ಈ ಪ್ರಕ್ರಿಯೆ ಒಂದು ಮಹಾ ಸಂದೇಶ ನೀಡುತ್ತದೆ: “ಎಲ್ಲವೂ ಕ್ಷಣಿಕ; ಮನಸ್ಸಿನ ಶಾಂತಿಯನ್ನು ಮಾತ್ರ ಕಡೆಯವರೆಗೂ ಕಾಪಿಟ್ಟುಕೊಳ್ಳಬೇಕು.”

ಮಂಡಲವು ಕೇವಲ ದೃಶ್ಯಾತ್ಮಕ ಚಿತ್ರವಲ್ಲ; ಅದು ಕೂಡ ಒಂದು ಧ್ಯಾನದ ಮಾರ್ಗ. ದೃಷ್ಟಿಯನ್ನು ಕೇಂದ್ರ ಬಿಂದುವಿನ ಮೇಲೆ ಅಥವಾ ಇಡೀ ಚಿತ್ರದ ಮೇಲೆ ಏಕಾಗ್ರಗೊಳಿಸುವುದರಿಂದ ಅದು ಮನಸ್ಸನ್ನು ನಿಯಂತ್ರಿಸುತ್ತದೆ, ಚಿಂತನೆಗಳನ್ನು ಸಮತೋಲನ ಗೊಳಿಸುತ್ತದೆ ಎನ್ನುತ್ತಾರೆ. ಪ್ರತಿಯೊಂದು ಪುನರಾವರ್ತನೆಯ ವಿನ್ಯಾಸವೂ ಶಾಂತಿಕಾರಕ, ಧ್ಯಾನಾತ್ಮಕ. ಸಂವಾದದಂತೆ.

ಮನೋವೈಜ್ಞಾನಿಕವಾಗಿ, ಕಾರ್ಲ್ ಜಂಗ್ ಮಂಡಲವನ್ನು 'ಸ್ವಯಂ" ನ (Self) ಪ್ರತಿಬಿಂಬವೆಂದು ವಿವರಿಸಿದ್ದಾನೆ. ಅದು ಮನಸ್ಸಿನ ಒಳಗಿನ ಅಸಮತೋಲನವನ್ನು ಸಮತೋಲನಗೊಳಿಸುತ್ತದೆ. ಪ್ರತಿಯೊಂದು ರೇಖೆ, ಪ್ರತಿಯೊಂದು ವೃತ್ತ, ಚೌಕ ನಮ್ಮ ಒಳಗಿನ ಭಾವ, ಅಲೆ, ಅನುಭವಗಳ ಸಂಕೇತ.



ಮಂಡಲವು ಕಲಾತ್ಮಕ ಮತ್ತು ಧ್ಯಾನಾತ್ಮಕ ಸಮಗ್ರತೆಯ ಸಂಕೇತ. ಮಂಡಲ ಕಲೆಯ ಕಲಾವಿದ, ಅದರ ಧ್ಯಾನಿ ಮತ್ತು ಆರಾಧಕ– ಈ ಮೂವರಿಗೂ ಒಂದೇ ಬಗೆಯ ಅನುಭವವಾಗಬಹುದು. ಪ್ರತಿಯೊಂದು ಮಂಡಲ ವಿಭಿನ್ನ ಭಾವನೆಯನ್ನು ತರುತ್ತದೆ: ಶಕ್ತಿ, ಶಾಂತಿ, ಮೌನ, ಸೃಜನಶೀಲತೆ–ಎಲ್ಲವೂ ಒಟ್ಟುಗೂಡಿದ, ಏಕತೆಯ ಪ್ರತೀಕ ಮಂಡಲ ಕಲೆ. ಅಪಾರವಾದ ತಾಳ್ಮೆ, ನವನವೀನ ಕಲ್ಪನೆಗಳು, ದೃಢ ನಿಶ್ಚಯ ಇವೆಲ್ಲವೂ ಮಂಡಲ ಕಲೆಗೆ ಅಗತ್ಯ. ಅತ್ಯದ್ಭುತವಾಗಿ ಮಂಡಲ ಚಿತ್ರ ರಚಿಸುವವರಿದ್ದಾರೆ. ಇತ್ತೀಚೆಗೆ ಮಂಡಲ ಕಲೆಯ ವಿಸ್ತಾರ ಹೆಚ್ಚಿ, ಹೆಚ್ಚಿನ ಸಾಧ್ಯತೆಯೊಂದಿಗೆ ಆಧುನಿಕತೆಯ ಸ್ಪರ್ಶ ಪಡೆದು ವಿಭಿನ್ನ ಆಯಾಮದಿಂದ ವಿಜೃಂಭಿಸುತ್ತಿದೆ. ವಿಶ್ವದಾದ್ಯಂತ ಬಹಳಷ್ಟು ಜನ ಮಂಡಲ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ



ಮಂಡಲವು ಕೇವಲ ಒಂದು ಬಗೆಯ ಚಿತ್ರ ಕಲೆಯಲ್ಲ; ಧ್ಯಾನದ ರೂಪದಲ್ಲಿ ಅದರ ಆರಾಧನೆ ಮಾಡುತ್ತಾ ಹೋದರೆ ಅದೊಂದು ಆತ್ಮಾನುಭವದ ಯಾನ ಎನ್ನುತ್ತಾರೆ. ಬಾಹ್ಯ ವೀಕ್ಷಣೆಯಿಂದ ಆಂತರಿಕ ಅನುಭವದವರೆಗೆ, ಚಂಚಲವಾದ ಅಶಾಂತಿಯಿಂದ ಶಾಂತಿಯ ಕಡೆಗೆ, ಅಜ್ಞಾನದಿಂದ ಜ್ಞಾನದತ್ತ– ಸಾಧಕನನ್ನು ನಿರಂತರವಾಗಿ ಸಾಗಿಸಬಹುದು ಮಂಡಲ ಕಲೆ. ಮಂಡಲವನ್ನು ಬಿಡಿಸುವುದೆಂದರೆ ಬರೀ ಚಿತ್ರ ಬಿಡಿಸುವುದೆಂದಲ್ಲ, ಅದು ಆತ್ಮದ ಮೌನ ಧ್ಯಾನ ಎನ್ನುತ್ತಾರೆ. ಸಮಯ ನಿಂತಂತೆ ಮನಸ್ಸು ಮೌನವಾಗುತ್ತದೆ, ‘‘ನಾನು ” ಎಂಬ ಭಾವ ಕರಗುತ್ತದೆ. ಮಂಡಲ ಚಿತ್ರಕಲೆ ಒಂದು ಗೀಳಿನಂತೆ, ವ್ಯಸನದಂತೆ. It is Quite Addictive. ಆದರೆ ನಮ್ಮನ್ನು ಊರ್ಧ್ವಮುಖಕ್ಕೇರಿಸುವ ಅತ್ಯಂತ ಸ್ವಾಗತಾರ್ಹ ಗೀಳು. ವ್ಯಸನ.



ಬಾಹ್ಯ ಲೋಕದಲ್ಲಿ ನಾವು ಏನೇ ಮಾಡಿದರೂ ಎಷ್ಟೇ ಸುತ್ತಾಡಿದರೂ, ನಮ್ಮ ಯಾನವು ಅಂತಿಮವಾಗಿ ಆ ಒಂದು ದಿವ್ಯ ಬಿಂದುವಿನತ್ತ, ಆಂತರಿಕ ಶಾಂತಿಯತ್ತ ಸಾಗಬೇಕು.

ಮಂಡಲವನ್ನು ಬಿಡಿಸುವುದು ಎಂದರೆ ಬರೀ ಚಿತ್ರವನ್ನು ಬಿಡಿಸುವುದಲ್ಲ; ಅದು ಆತ್ಮವನ್ನು ಸ್ಪರ್ಶಿಸುವ ಒಂದು ಪ್ರಯತ್ನ.

ನನ್ನ ಗೆಳತಿಯೊಬ್ಬರು ನಾಲ್ಕು ವರ್ಷಗಳ ಹಿಂದೆ ಸಂಕ್ರಾಂತಿಯಂದು ಕಳಿಸಿದ ಒಂದು ಪುಟ್ಟ ಶುಭಾಶಯದ ಚಿತ್ರ ನನ್ನ ಮನಸ್ಸನ್ನು ಅಪಹರಿಸಿತು. ಇದೇನೋ ಬಹಳ ವಿಶಿಷ್ಟವಾಗಿದೆ ಎನಿಸಿ ವಿಚಾರಿಸಿದಾಗ ಅದು ಮಂಡಲ ಚಿತ್ರ ಎಂದರು. ಮೊದಲ ಬಾರಿಗೆ ಕೇಳಿದ ಪದ, ಆಕರ್ಷಿತಳಾದೆ. ನಂತರ ಹುಡುಕಾಡಿ ಮಂಡಲ ಕಲೆಯ ಬಗ್ಗೆ ತಿಳಿದುಕೊಂಡು ಅತ್ಯಾಸಕ್ತಿ ಹುರುಪಿನಿಂದ ಪ್ರಯತ್ನಿಸುತ್ತಾ ಹೋಗಿ ಮಂಡಲದಲ್ಲೇ ಸೆರೆಯಾಗಿ ಹೋದೆ




ನಾನು ರಚಿಸುತ್ತಾ ಹೋದ ಮಂಡಲ ಚಿತ್ರವನ್ನು ವೇದಿಕೆಯಲ್ಲಿ ಪ್ರಸ್ತುತಪಡಿಸುತ್ತಾ ಹೋದಂತೆ ಸಿಗುತ್ತಿದ್ದ ಮೆಚ್ಚುಗೆಯ ಮಹಾಪೂರ ಹೊಸ ಹೊಸ ಪ್ರಯೋಗ ಮಾಡಲು ನನ್ನನ್ನು ಹುರಿದುಂಬಿಸಿತು. ಜನೆವರಿ ೧೭, ೨೦೨೨ರಿಂದ ಸತತ ಮೂರು ತಿಂಗಳು ಬೇರೆಯ ಜ್ಞಾನವೇ ಇಲ್ಲದಂತೆ ಮಂಡಲದಲ್ಲೇ ಬಂಧಿಯಾಗಿದ್ದೆ. "ನೀವು ಬರೀ ಮಂಡಲದಲ್ಲೇ ಮುಳುಗಿದರೆ ನಿಮ್ಮ ಸಾಹಿತ್ಯ ಕೃಷಿಯ ಗತಿಯೇನು?" ಎಂದು ಶ್ರೀ ಗುರುಪ್ರಸಾದ್ ಹಾಲ್ಕುರಿಕೆಯವರು ಎಚ್ಚರಿಸಿದಾಗ ಥಟ್ಟನೆ ಕೈಬಿಟ್ಟೆ. ವೇದಿಕೆಯ ಸದಾ ಕ್ರಿಯಾಶೀಲ ಲೇಖಕ ಶ್ರೀ ವಿಠ್ಠಲ ಇಜೇರಿಯವರು ಅವರ ಬಡಾವಣೆಯ ಸಂಘದಲ್ಲಿ ಅಲ್ಲಿಯವರೆಗೆ



ರಚಿತವಾಗಿದ್ದ ನನ್ನ ಹದಿನೆಂಟು ಮಂಡಲ ಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಿ ಅದರ ಬಗ್ಗೆ ಒಂದಿಷ್ಟು ವಿವರಗಳನ್ನೂ ಹೇಳಬೇಕೆಂದು ಕೇಳಿ ಪ್ರೋತ್ಸಾಹಿಸಿದುದನ್ನು ಅತ್ಯಂತ ಕೃತಜ್ಞತೆಯಿಂದ ನೆನೆಯುತ್ತೇನೆ.

ಅಲ್ಲಿಂದ ಮತ್ತೆ ಎರಡುಕಡೆ ಪ್ರದರ್ಶನವಾಯಿತು. ಈಗ ಸುಮಾರು ವರ್ಷಗಳ ಹಿಂದೆ ಔಷಧವೊಂದರ ಭೀಕರವಾದ ವ್ಯತಿರಿಕ್ತ ಪರಿಣಾಮ ದಿಂದಾಗಿ ನನ್ನ ಆರೋಗ್ಯ ಮಾರಣಾಂತಿಕವಾಗಿ ಉಲ್ಬಣಿಸಿ ಎಲ್ಲರೂ ಎಲ್ಲಾ ಭರವಸೆ ಕಳೆದುಕೊಂಡಿದ್ದರು. ಅಂತೂ ಇಂತೂ ಪವಾಡಸದೃಶವಾಗಿ ಬದುಕಿಗೆ ಮರಳಿದಾಗ ದೇಹ ಮನಸ್ಸು ಎರಡೂ ತೀರ ನಿತ್ರಾಣವಾಗಿ ಓದಿ ಬರೆಯಲು ಸಾಧ್ಯವಾಗದ ಸ್ಥಿತಿ. ಆಗ ಯಾವುದರಲ್ಲಾದರೂ ನನ್ನನ್ನು ತೊಡಗಿಸಿಕೊಳ್ಳಲೇ ಬೇಕೆಂಬ ದೃಢ ನಿಶ್ಚಯದಿಂದ, ಅಂದರೆ ಮೂರು ವರ್ಷಗಳ ಸುದೀರ್ಘ ಅವಧಿಯ ನಂತರ ಮಂಡಲ ಚಿತ್ರಕಲೆಗೆ ಮರಳಿದೆ. ಅದರಿಂದ ನನಗೆ ನವಚೈತನ್ಯ ದೊರಕಿದ್ದು ಸುಳ್ಳಲ್ಲ. ಆಮೇಲೆ ಈ ಒಂದು ವರ್ಷದಲ್ಲಿ ಮತ್ತೆ ೧೪ ಚಿತ್ರಗಳ ರಚನೆಯಾಗಿದೆ. ವೇದಿಕೆಯಲ್ಲಿ ದೊರೆಯುವ ಭರಪೂರ ಮೆಚ್ಚುಗೆಗೆ ನನ್ನಲ್ಲಿ ಪುಳಕ, ಕೃತಜ್ಞತೆ ಹಾಗೂ ಸಾರ್ಥಕ ಭಾವ. ಕೆಲವರಂತೂ ಕವನಗಳನ್ನೇ ರಚಿಸಿ ಅಭಿನಂದಿಸುವ ಪರಿಯನ್ನು ಇನ್ನು ಬೇರೆಲ್ಲಿ ಕಾಣಬಹುದು? ನನ್ನ ಅದೃಷ್ಟ ದೊಡ್ಡದು.



***

ನಿಜ ನಿವೃತ್ತಿ

– ಮಾಲತಿ ಶ್ರೀನಿವಾಸನ್

ಸದಾ ಚಿಂತನೆ, ಸದ್ಭಾವದಲಿ,
ಸಕ್ರಿಯ ಚಲನೆ,
ವಿಚಾರಧಾರೆಯ ಒಳಹರಿವು ನಿರಂತರ,
ಸಮಯ ಸರಿದುದರ ಅರಿವಿಲ್ಲದೆ,
ಮತ್ತಷ್ಟು ಸೇವಾ ಭಾವದ ಬಯಕೆ,
ನಿಜ ನಿವೃತ್ತಿಯುಂಟೆ ಈ ಮನಕೆ.

ಅರವತ್ತರಾಚೆ ಎರಡು ದಶಕಗಳ ಹಿಂದೆ
ಇದೇ ಬಿಟ್ಟು ಬಿಡಲಾರದ ಭಾವ,
ನೂರಾರು ಗೊಂದಲಗಳ ಹಾವಭಾವ,
ನಿರ್ಧಾರ ಗಟ್ಟಿಸಿ ಕಾಯಕಕೆ ಜಾರಿತ್ತು
ತನುಮನ ಹುರುಪಿನಲ್ಲಿ.

ಇಂದು ಮತ್ತೊಮ್ಮೆ ಅದೇ ದ್ವಂದ್ವ,
ಡೋಲಾಯಮಾನ ಎಲ್ಲ ನಿರ್ಧಾರ
ಮನಸೇಕೆ ಭಾರ, ಹಗುರಾಗಿಸು ಅದನ.
ನೂರಾರು ಕನಸುಗಳ ಸಾಕಾರ ಸಂತೃಪ್ತ
ಸುಖ ಸಂಸಾರ ಇದು ಬದಲಾವಣೆಯ ಕಾಲ
ಹೊಸ ಯೋಜನೆ, ಹೊಸ ವಿಚಾರಧಾರೆ,
ಸಚೇತನ, ಸಂದೀಪನ, ಹಳೆ ಚಿಂತನೆಯ
ಹಿನ್ನೆಲೆಯಲಿ ಸ್ವಾಗತಿಸು ಅದನ.

ಕ್ರಮಿಸಿದ ಹಾದಿಯಲಿ ಸರಸಮ್ಮನ
ಅನುಗ್ರಹದ ಅಮೃತ ಕುಡಿಕೆ,,
ಬಗೆದಷ್ಟು ಚಿಮ್ಮುತಲಿಹ ಅನುಭವದ ಗಡಿಗೆ,
ಹೊಸ ವಿಚಾರಧಾರೆ
ಹೊಸ ಕೈಂಕರ್ಯ ಕಾದಿ
ಹದವಾದ ಹುದುಗಿದ
ನೆಲ ಮನವಾಗಿರೆ, ದ್ವಂದ್ವ ದೂರಾಗಿಸು
ಹೊಸತ ಚಿಗುರಿಸು, ಮನವ ತಣಿಸು,
ಎಲ್ಲುಂಟು ನಿಜ ನಿವೃತ್ತಿ ನಿನಗೆ ?.

***

ಕವಿತೆ ಹೊಳೆಯುವ ವೇಳೆ

– ಜಾನಕಿರಾಮ

ಹೊರಗಣ್ಣುಗಳ ಮುಚ್ಚಿ ಒಳಗೊಳಗೆ ಬೆಳಕಾಗಿ
ಹೃದಯದಾಲಯವೆಲ್ಲ ಹೊಳೆಯುವ ವೇಳೆ
ಮನಸ ಭೂಮಿಯ ಹರಗಿ ನೀರಿತ್ತು ಹಸನಾಗಿ
ಭಾವನೆಯ ಪೈರುಗಳು ಬೆಳೆಯುವ ವೇಳೆ...
ಕವಿತೆ ಹೊಳೆಯುವ ವೇಳೆ...

ಯಾವುದೋ ಕಾಲದಲಿ ಯಾರದೋ ಜೀವನದಿ
ನಡೆದ ಘಟನೆಗೆ ಇಂದು ಕಣ್ಣು ನೀರಾಗಿ
ಅಕ್ಷರದ ಹಣತೆಗಳ ಅನುಭವದ ಕಿಡಿಯಲ್ಲಿ
ಬೆಳಗಿಸುತ ಬರೆದಂತೆ ಸಾಲು ನೂರಾಗಿ...
ಕೇಳುಗರ ಅನುಭಾವಕಿಳಿಯುವ ವೇಳೆ...
ಕವಿತೆ ಹೊಳೆಯುವ ವೇಳೆ...

ಬೆಳಗುವ ಘಳಿಗೆಯೋ ಅಸ್ತಮಾನದ ಚಣವೋ
ಕಂಗಳಿಂದಲಿ ಇಳಿದು ಮನದಿ ಸೆರೆಯಾಗಿ
ಲೇಖನಿಯ ಕುಂಚದಲಿ ನವರಸದ ರಂಗಿನಲಿ
ಕಾವ್ಯದ ಚಿತ್ತಾರ ಬಿಡಿಸಿ ಸರಿಯಾಗಿ...
ನೋಡುಗರ ಕಂಗಳಲಿ ಮೊಳೆಯುವ ವೇಳೆ...
ಕವಿತೆ ಹೊಳೆಯುವ ವೇಳೆ...

ಕನಸು ಅರಳುವ ವೇಳೆ ಚಿತ್ತ ಚಿಗುರುವ ವೇಳೆ
ಘನವಾದ ಭಾವಹಿಮ ಕರಗುವ ವೇಳೆ
ಹೇಳುಗನ ದನಿಯಾಗಿ ಕೇಳುಗನ ಕಿವಿಗಾಗಿ
ಕಾಯದೆಯೇ ಹೊರಹೊಮ್ಮಿ ಸೊರಗುವ ವೇಳೆ...
ಶೂನ್ಯದಲಿ ಶೂನ್ಯವನು ಕಳೆಯುವ ವೇಳೆ...
ಕವಿತೆ ಹೊಳೆಯುವ ವೇಳೆ...

***

ಸಕರ್ಮಕ ಅಕರ್ಮಕ ಧಾತುಗಳು

– ಗಣಪತಿ ಹೆಗಡೆ

ಕನ್ನಡ ವ್ಯಾಕರಣದಲ್ಲಿ ವಾಕ್ಯದ ರಚನೆಗೆ ಮುಖ್ಯವಾಗಿ ಕರ್ತೃ, ಕರ್ಮ ಹಾಗೂ ಕ್ರಿಯಾಪದ – ಹೀಗೆ ಮೂರು ಮುಖ್ಯ ಅಂಶಗಳಿರುತ್ತವೆ ಎನ್ನವುದು ತಿಳಿದ ವಿಷಯವೇ ಸರಿ. ವಿಶೇಷಣ, ಕ್ರಿಯಾ ವಿಶೇಷಣ ಮುಂತಾದವು ವಾಕ್ಯದ ಅರ್ಥ ಸೌಂದರ್ಯವನ್ನು ಹೆಚ್ಚಿಸಲು ಮಾತ್ರ ಸಹಕಾರಿ.

ಕರ್ತೃ: ಕೆಲಸವನ್ನು ಮಾಡುವ ವ್ಯಕ್ತಿ/ವಸ್ತು (ಉದಾ: ರಾಮನು).

ಕರ್ಮ: ಕ್ರಿಯೆಯ ಫಲವನ್ನು ಅನುಭವಿಸುವ ವಸ್ತು (ಉದಾ: ಹಣ್ಣನ್ನು).

ಕ್ರಿಯಾಪದ: ಕೆಲಸವನ್ನು ತಿಳಿಸುವ ಪದ (ಉದಾ: ತಿಂದನು).

("ರಾಮನು ಹಣ್ಣನ್ನು ತಿಂದನು.")

ಆದರೆ 'ಕರ್ಮ' ಪದವೇ ಇಲ್ಲದೆ ಎಷ್ಟೋ ವಾಕ್ಯಗಳು ಪ್ರಚಲಿತದಲ್ಲಿವೆ.

ಕ್ರಿಯಾಪದದ ಮೂಲರೂಪವನ್ನು ಧಾತು ಎನ್ನುತ್ತಾರೆ.

ಕ್ರಿಯಾಪದ	**ಧಾತು**
ಹೋದನು/ಹೋಗುತ್ತಾನೆ	ಹೋಗು
ಕೊಂದನು/ಕೊಲ್ಲುತ್ತಾನೆ	ಕೊಲ್ಲು
ತಿಂದನು/ತಿನ್ನುವರು	ತಿನ್ನು
ಹೊಡೆದನು/ಹೊಡೆಯುವವಳು	ಹೊಡೆ
ಏರಿದನು/ಏರುತ್ತಾನೆ	ಏರು
ಬಂದನು/ಬರುವವಳು	ಬಾ
ಬಡಿದನು/ಬಡಿಯುತ್ತಾನೆ	ಬಡಿ

ಈ ಧಾತುಗಳನ್ನು ಉಪಯೋಗಿಸಿ ವಾಕ್ಯಗಳನ್ನು ರಚಿಸೋಣ.

1. ರಾಮನು ಮನೆಗೆ ಹೋದನು.
2. ಭೀಮನು ಹಿಡಿಂಬನನ್ನು ಕೊಂದನು.
3. ಹುಲಿಯು ಹಸುವನ್ನು ತಿನ್ನುತ್ತದೆ.
4. ಸೋಮುವು ಕೃಷ್ಣನಿಗೆ ಹೊಡೆದನು.
5. ಸುಮಾಳು ಪರ್ವತವನ್ನು ಏರಿದಳು.
6. ಕಮಲಳು ಊರಿನಿಂದ ಬರುತ್ತಾಳೆ.
7. ಸುರೇಶನು ಬಡಿಗೆಯಿಂದ ಬಡಿದನು.

ಇಲ್ಲಿ ಬೇರೆ ಬೇರೆ ವಿಭಕ್ತಿ ಪ್ರತ್ಯಯಗಳನ್ನು ಉಪಯೋಗಿಸಿ ರಚಿಸಿದ ವಾಕ್ಯರಚನೆಯನ್ನು ಗುರುತಿಸಬಹುದು.

1 ರಲ್ಲಿ 'ಗೆ' ಸಂಪ್ರದಾನ, ಚತುರ್ಥಿ ವಿಭಕ್ತಿ.
2 ರಲ್ಲಿ 'ಅನ್ನು' ಕರ್ಮ, ದ್ವಿತೀಯ ವಿಭಕ್ತಿ.
3 ರಲ್ಲಿ 'ಅನ್ನು' ಕರ್ಮ, ದ್ವಿತೀಯ ವಿಭಕ್ತಿ.
4 ರಲ್ಲಿ ''ಗೆ' ಸಂಪ್ರದಾನ, ಚತುರ್ಥಿ ವಿಭಕ್ತಿ.
5 ರಲ್ಲಿ 'ಅನ್ನು' ಕರ್ಮ, ದ್ವಿತೀಯ ವಿಭಕ್ತಿ.
6 ರಲ್ಲಿ 'ಇಂದ' ಅಪಾದಾನ, ಪಂಚಮಿ ವಿಭಕ್ತಿ.
7 ರಲ್ಲಿ 'ಇಂದ' ಕರಣ, ತೃತೀಯ ವಿಭಕ್ತಿ.

ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣ ಹಾಗೂ ಸಹಸಂಬಂಧದಲ್ಲಿ 'ಅನ್ನು' ಎನ್ನುವುದು 'ಕರ್ಮ' ಎನ್ನುವ ವಿಭಕ್ತಿ ಪ್ರತ್ಯಯ. (ಏಳನೇ ವಿಭಕ್ತಿ 'ಅ' ಸಹಸಂಬಂಧ, ಕ್ರಿಯೆಗೆ ನೇರವಾಗಿ ಸಂಬಂಧದಲ್ಲಿರುವುದಿಲ್ಲ. ಉದಾ: ಮುಂಗಸಿಯು ಹಾವಿನ ವೈರಿ.)

ಇಂತಹ ಸುಲಭ ವಾಕ್ಯಗಳಲ್ಲಿ ಮೊದಲನೆಯ ಶಬ್ದವು ಪ್ರಥಮಾ ವಿಭಕ್ತಿಯಲ್ಲಿಯೂ, ಮೂರನೇ ಶಬ್ದವು ಕ್ರಿಯಾ ರೂಪದಲ್ಲಿಯೂ ಇರುತ್ತದೆ. (ಮೊದಲನೆಯ ಶಬ್ದದ ಲಿಂಗ ವಚನಗಳಂತೆಯೇ ಕೊನೆಯ ಕ್ರಿಯಾ ರೂಪದ ಶಬ್ದಗಳೂ ಬದಲಾವಣೆಯಾಗುತ್ತವೆ.) ಆದರೆ ಎರಡನೆಯ ಶಬ್ದವು, ಮೊದಲನೆಯ ಶಬ್ದ (ಕರ್ತೃ) ಹಾಗೂ ಮೂರನೆಯ ಶಬ್ದ ಅಂದರೆ ಕ್ರಿಯೆಯ ಸ್ವರೂಪವನ್ನು ಅವಲಂಬಿಸಿ ಇರುತ್ತದೆ.

ಉದಾ:
ಮೊದಲನೆಯ ಶಬ್ದ ರಾಮನು, ಮೂರನೆಯ ಶಬ್ದವು ಹೋಗುತ್ತಾನೆ ಅಂತ ಇದ್ದಾಗ ಮಧ್ಯದಲ್ಲಿಯ ಶಬ್ದ 'ಎಲ್ಲಿಗೆ' ಅಂತಾಗುತ್ತದೆ. ಇದು ಸಂಪ್ರದಾನ, ಚತುರ್ಥಿ. (ಗೆ, ಇಗೆ, ಕ್ಕೆ). ರಾಮನು ಹಾಗೂ ಹೋಗುತ್ತಾನೆ ಇವುಗಳ ಮಧ್ಯೆ ಇನ್ನಾವುದೇ ವಿಭಕ್ತಿ ಪ್ರತ್ಯಯ ಹೊಂದಿಕೆಯಾಗುವದಿಲ್ಲ.

ಹೀಗೆ ಮಧ್ಯದ ಶಬ್ದವು ಏನನ್ನು, ಯಾರನ್ನು, ಹೀಗೆ 'ಕರ್ಮ' ವಾಚಕ ವಿಭಕ್ತಿ ಪ್ರತ್ಯಯವನ್ನು ಸೂಚಿಸುತ್ತದೆಯೋ ಆಗ ಆ ವಾಕ್ಯದ ಕ್ರಿಯಾರೂಪದ ಧಾತುವನ್ನು 'ಸಕರ್ಮಕ' ಧಾತು ಎನ್ನುತ್ತಾರೆ. ಅಥವಾ ಯಾವ ವಾಕ್ಯವನ್ನು ಓದಿದಾಗ ಏನನ್ನು, ಯಾರನ್ನು ಮುಂತಾದ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆಯೋ ಆ ವಾಕ್ಯದ ಕ್ರಿಯಾರೂಪದ ಧಾತುವನ್ನು ಸಕರ್ಮಕ ಧಾತು ಎನ್ನುತ್ತಾರೆ.

ಉದಾ:
– ರಾಮನು ಕೊಂದನು ಅಂತ ಇದ್ದಾಗ ಮಧ್ಯದ ಶಬ್ದ ಸಹಜವಾಗಿಯೇ 'ಯಾರನ್ನು' ಅಂತ ತಿಳಿಸುತ್ತದೆ. (ರಾವಣನನ್ನು).
(ಕೊಲ್ಲು ಎನ್ನುವುದು ಸಕರ್ಮಕ ಧಾತು.)
– ಸೀತೆಯು ತಿಂದಳು ಎಂದಾಗ 'ಏನನ್ನು' ಅಂತ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. (ಹಣ್ಣನ್ನು). ತಿನ್ನು ಎನ್ನುವುದು ಸಕರ್ಮಕ).

ಆದರೆ 'ಬಾ' ಎನ್ನುವ ಧಾತುವನ್ನು ಹೇಳುವಾಗ 'ಎಲ್ಲಿಂದ' ಎನ್ನುವ ಪ್ರಶ್ನೆ ಹುಟ್ಟಿಕೊಳ್ಳುತ್ತದೆ ಆದರೆ ಏನನ್ನು ಅಂತ ಪ್ರಶ್ನೆ ಹುಟ್ಟಿಕೊಳ್ಳುವುದಿಲ್ಲ. ಆದುದರಿಂದ 'ಬಾ' ಎನ್ನವುದು 'ಸಕರ್ಮಕ' ಧಾತುವಲ್ಲ. ಸಕರ್ಮಕವಲ್ಲದ ಧಾತುಗಳನ್ನು 'ಅಕರ್ಮಕ' ಧಾತುಗಳು ಎನ್ನುತ್ತಾರೆ.

***

ಶಾಪ ವಿಮೋಚನೆ

– ಬೆಂಶ್ರೀ ರವೀಂದ್ರ

ಊರ ನಡುವಿನಲಿ ಮೇಲೆದ್ದ ಬಂಡೆ
ಮೇಲೊಂದು ಹಸಿರು ಬುರುಜು
ಉರಸು ಇತಿಹಾಸ ಮರೆಸು
ದೊಗದೊಗಳೆ ಕೊಳಕು ದಿರಿಸು

ಹಗಲೆಲ್ಲ ಉರಿಬಿಸಿಲ ಕುಡಿದು
ರಾತ್ರಿ ಮರಳಿ ಕಕ್ಕುತ್ತ ಬಿಸಿಗಾಳಿ
ತಂಪಾಯಿತೇನೋ ಎನ್ನುವಲ್ಲಿ
ಮತ್ತೆ ಹಾಜರು ಉರಿವ ಭಾನು

ಹಳೆಯೂರಲೆರಡು ಚೂರುರಸ್ತೆ
ಮಿಕ್ಕಂತೆ ಮುಗಿಲಮುಚ್ಚ ಧೂಳು

ಲಂಗೋಟಿಯಲಿ ತುಳಿದ ಸೈಕಲ್ಲು ರಿಕ್ಷಾಕ್ಕೆ
ಬೆವರಬನಿಯ ಜಳಕ
ಮಿಲ್ಲು ಮಾರ್ಕೆಟ್ಟಿನ ಕರಿಹೆಣ್ಣಿಗೆ
ಇದೆ ಅಂಜಿದ ಹರಿಣದ ಕಣ್ಣು

ಆಗಸಕೆ ಮುಖವಿಟ್ಟ ಸ್ಥಾವರಕಂಬ ನಿಲ್ಲದೆ
ಉಗುಳುತಿದೆ ಹಾರುಬೂದಿ
ತುಂಗೆ ಕೃಷ್ಣೆಯರ ನಡುವಿದ್ದೂ ಸೊರಗಿದೆ ಒಡಲ ತೊರೆ

ಎಲ್ಲ ಬದಲಾಗುವುದೆಂಬ ಸಂಭ್ರಮದ ಭ್ರಮೆಯೊಡೆದು
ಮತ್ತೆ ಅದೇ ಮುಗಿಲಮುಚ್ಚ ಧೂಳು

ಬದಲೇ ಆಗದೆಂಬ ರಾಯನೂರಿನ
ಬಿಂಬವೀಗ ಒಡೆದಿದೆಯಂತೆ
ಹೊಸತನದ ಥಳಕು ಆವರಿಸಿದೆ ಎಂದು
ಅಗೋ ಅಲ್ಲಿಂದ ಘೋಷಿಸಲಾಗುತ್ತಿದೆ
ಸೋಗುಮಾತಿನ ಮುದ್ದು ಗುಟರು ಹಾಕುತ್ತಾ
ಸಾಮಾಜಿಕ ಮಾಧ್ಯಮದಿ ಮೆರವಣಿಗೆ ಹೊರಟಿದೆ

ಧಗಧಗದ ಮಧ್ಯಪ್ರಾಚ್ಯ
ಅಮಾಯಕರ ಆರ್ತಧ್ವನಿ
ಅಲೆಕ್ಸಾಂಡರ್ ಚೆಂಗೇಸ್‌ಖಾನ್ ಹಿಟ್ಲರ್
ಮಸಲೋನಿಯರಿಗೆ ಈಗ ಹೊಸ ಹೆಸರು
ಖೊಮೇನಿ, ಟ್ರಂಪ್, ನೆತನ್ಯಾಹು ಮತ್ತು ನೂರಾರು....

ಮನೆ ಬಾಗಿಲಿಗೆ ಬಂದಿದೆ ಯುದ್ದ
ಎನ್ನುತ್ತಾ ಚಾಚಿದರು ಕೈನಿಲ್ಲಿ ಮತಕೆ
ಬಾಗಿಲನು ಕಿತ್ತೆಸೆದು ಅಡುಗೆ ಕೋಣೆಗೆ
ಹಾಕಿ ಯುದ್ದ ಈಗ ಲಗ್ಗೆ
ಸುಟ್ಟ ಮಾನವ ಮಾಂಸದ ದಟ್ಟ ವಾಸನೆ
ವಾಸನೆಯೊಳಗೆ ಬಂಧಿತರಾದವರು
ತೋರಿದ ಮಸಣದ ಮನೆ

ಹಗಲು ರಾತ್ರಿಗಳು ಆಗುತ್ತಲೇ ಇರುತ್ತದೆ
ಈ ಊರು ಹೀಗೇ ಚೂರು.. ಚೂರಾಗಿರುತ್ತದೆ.

ದಾವಾನಲದ ಕಬಂಧ ಬಾಹುಗಳ ಕಡಿವ
ರಾಮ ಲಕ್ಷ್ಮಣರು ಕಾಣುತ್ತಿಲ್ಲ
ಅವನಿಗೆ ಶಾಪ ವಿಮೋಚನೆಯಾಗುವುದಿಲ್ಲ.

***

ಮಾರ್ಥಾ ಬ್ರೌನ್ ಪಿಂಕೆ

– ವಿಠ್ಠಲ ಇಜೇರಿ

ಮುಖ್ಯಾಂಶಗಳು:

– ಭಾರತದ ಭೇಟಿ ನನಗೆ ತೀರ್ಥಯಾತ್ರೆ, ಉಳಿದ ದೇಶಗಳ ಭೇಟಿ ಬರೀ ಪ್ರವಾಸ.

– ನಾನೂ ದಿನವೂ ಬೆಳಿಗ್ಗೆ ಪ್ರಾರ್ಥಿಸುತ್ತಿದ್ದೆ ಮೊದಲು ನನಗಾಗಿ, ನಂತರ ನನ್ನ ಕುಟುಂಬಕ್ಕಾಗಿ, ಇಡೀ ಮಾನವ ಕುಲಕ್ಕಾಗಿ ಪ್ರಾರ್ಥಿಸಬೇಕೆನ್ನುವುದು ನನಗಿಲ್ಲಿಯೇ ಹೊಳೆದದ್ದು.

– ಈಜಿಪ್ತಿನ ಕಲ್ಲಿನ ಶವಪೆಟ್ಟಿಗೆಯಲ್ಲಿ ಇರಿಸಿದ ಬೀಜಗಳು ಇಂದು ಬಿತ್ತಿದರೂ ಮೊಳಕೆ ಒಡೆಯುವ ಶಕ್ತಿ ಉಳಿಸಿ ಕೊಂಡಿರುತ್ತವೆಯಂತೆ. ಭಾರತದ ಆ ಪುಣ್ಯ ಪುರುಷನ ಸ್ಮೃತಿಯ ಬೀಜ ನನ್ನಲ್ಲಿ ಮೊಳೆತು ಮರವಾಗುತ್ತಿದೆ ಮತ್ತು ನನ್ನನ್ನು ಇಲ್ಲಿಗೆ ಕರೆತಂದಿದೆ.

1893ರಲ್ಲಿ ಮಾರ್ಥಾ ಬ್ರೋನ್ ಪಿಂಕೆ – ಹದಿನೆಂಟು ವರ್ಷದ ಆಕೆ ಮೆಸ್ಸುಚುಸೆಟನ ನೋರ್ಥ್‌ಆಂಪ್ಟನ್ ಸ್ಮಿತ್ ಕಾಲೇಜಿನ ವಿದ್ಯಾರ್ಥಿನಿ. ಕಾಲೇಜಿನ ಹಾಸ್ಟೆಲ್‌ನಲ್ಲಿ ಸ್ಥಳಾವಕಾಶ ದೊರೆಯದ ಕಾರಣ ಇನ್ನಿಬ್ಬರು ಸ್ನೇಹಿತೆಯರೊಡನೆ ಪಕ್ಕದಲ್ಲಿಯೇ ಒಂದು ಮನೆಯಲ್ಲಿ ಬಾಡಿಗೆಗೆ ಇದ್ದಳು. ಮನೆ ಮಾಲೀಕಳು ಉದಾರಿ ಮತ್ತು ಹಸನ್ಮುಖಿ. ಸ್ಮಿತ್ ಕಾಲೇಜಿಗೆ ಸ್ವಾಮಿ ವಿವೇಕಾನಂದರು ಉಪನ್ಯಾಸ ನೀಡಲು ಬಂದಿದ್ದರು. ಅವರು ಅತಿಥಿಯಾಗಿ ಮಾರ್ಥಾ ಬಾಡಿಗೆಗೆ ಇದ್ದ ಮನೆಯಲ್ಲಿಯೇ ಉಳಿದಿದ್ದರು. ಆಗ ಅಮೇರಿಕಾದಲ್ಲಿ ಕಪ್ಪುವರ್ಣದವರಿಗೆ ವಸತಿ ನೀಡುತ್ತಿರಲಿಲ್ಲ. ಆದರೆ ಆ ಉದಾರ ಮನಸ್ಸಿನ ಮನೆ ಮಾಲೀಕಳು ಅಂತಹ ಬೇಧ ಎಣಿಸಿರಲಿಲ್ಲ. ಬೋಸ್ಟನ್ ಮತ್ತು ನ್ಯೂಯಾರ್ಕ್ ಮದ್ಯದಲ್ಲಿಯ ಸುಂದರ ಪಟ್ಟಣ, ನಾರ್ತ್ ಆಂಪ್ಟನ್. ವಿವೇಕಾನಂದರನ್ನು ತಾನಿದ್ದ ಮನೆಯಲ್ಲಿಯೇ ಭೇಟಿಮಾಡುವ ಮತ್ತು ಭಾರತದ ಕುರಿತು ತಿಳಿಯುವ ಅವಕಾಶ ಮಾರ್ಥಾ ಬೋನ್‌ಗೆ ದೊರೆಯಿತು.

1935ರಲ್ಲಿ ಮಾರ್ಥಾ ಕೊಲ್ಕೋತ್ತಾದ ಬೇಲೂರು ಮಠಕ್ಕೆ ಭೇಟಿ ನೀಡಿದಳು. ಪವಿತ್ರ ಮನಸ್ಸಿನೊಂದಿಗೆ ಭಾರತಕ್ಕೆ ಕಾಲಿರಿಸಿದ ಆಕೆ ಮೊದಲು ಸ್ವಾಮೀಜಿಯ ಸಮಾಧಿಗೆ ನತಮಸ್ತಕಳಾಗಿ, ನಂತರ ಸ್ವಾಮೀಜಿಯವರ ಇನ್ನೊಬ್ಬ ಶಿಷ್ಯೆ ಜೋಸೆಫ್ ಮ್ಯಾಕ್ಲಿಯೋಡ್ ಳನ್ನು ಅತಿಥಿ ಗೃಹದಲ್ಲಿ ಭೇಟಿ ಮಾಡಿದಳು. ಅಲ್ಲಿಯ ಸ್ವಾಮೀಜಿಗಳು ವಿವೇಕಾನಂದರು ಆಕೆಯಿದ್ದ ಮನೆಯಲ್ಲಿ ಅತಿಥಿಗಳಾಗಿದ್ದ ವಿಷಯ ತಿಳಿದು ಹೆಚ್ಚಿನ ವಿವರ ತಿಳಿಯಲು ಉತ್ಸುಕರಾದರು. ಮಾರ್ಥಾ ಅವರೊಡನೆಯ ಸಂಭಾಷಣೆ ಮತ್ತು ಇತರ ವಿಷಯಗಳನ್ನು ಹಂಚಿಕೊಂಡಳು.

"ಅವರು ಆ ದಿನ ನಾನಿದ್ದ ಮನೆಯನ್ನು ರಾಜಗಾಂಭೀರ್ಯದಿಂದ ಪ್ರವೇಶಿಸಿದರು. ಮುಖದಲ್ಲಿ ಅವರ್ಣನೀಯ ಭಾವ, ಕಣ್ಣಿನಿಂದ ಹೊರಚೆಲ್ಲುತ್ತಿದ್ದ ಪ್ರಭೆ, ಆ ಅದ್ವಿತೀಯ ಶಕ್ತಿಯನ್ನು ವರ್ಣಿಸುವುದೇ ಕಷ್ಟ. ಕಪ್ಪು ಬಟ್ಟೆ ಧರಿಸಿದ್ದರು, ತಲೆ ಮೇಲೆ ಹಳದೀ ಪೇಟ. ಗಂಭೀರವಾಗಿ ನೇರವಾಗಿ ನಿಂತ ಅವರು ಮಾತನಾಡಿದ ದೃಶ್ಯ ಅದ್ಭುತ. ಇಂಗ್ಲಿಷ್ ಭಾಷೆಯ ಮೇಲೆ ಅವರಿಗಿದ್ದ ಪ್ರಭುತ್ವವೂ ಅದ್ಭುತ. ಅವರದು ಶ್ರೀಮಂತ ಕಂಠ.

ಅದೊಂದು ದಿನ ಆ ಮನೆಗೆ ಕಾಲೇಜ್ ಪ್ರೆಸಿಡೆಂಟ್, ತತ್ವಶಾಸ್ತ್ರದ ಮುಖ್ಯ ಪ್ರಾಧ್ಯಾಪಕರು, ಪ್ರೊಫೆಸರ್‌ಗಳು, ನಾಥಾಂಪ್‌ಟನ್ ಚರ್ಚ್ ಬೋಧಕರು ಬಂದಿದ್ದರು. ನಾವು ಮೂವರು ಸ್ನೇಹಿತೆಯರು ದೂರದಲ್ಲಿ ಮುದುಡಿ ಕುಳಿತು ಅವರ ಚರ್ಚೆಯನ್ನು ಗಮನಿಸುತ್ತಿದ್ದೆವು. ಕ್ರಿಸ್ತ ಧರ್ಮವೊಂದೇ ಪ್ರಮುಖ ಧರ್ಮ ಎಂಬ ಚರ್ಚೆ ನಡೆದಿತ್ತು. ಆ ವಿಷಯವನ್ನು ಸ್ವಾಮೀಜಿ ಆರಿಸಿ ಕೊಂಡಿರಲಿಲ್ಲ. ಬಂದವರೆಲ್ಲ ಬೈಬಲ್ಲನ್ನು, ಐರೋಪ್ಯ ತತ್ವ ಶಾಸ್ತ್ರಗಳನ್ನು ಚೆನ್ನಾಗಿ ಓದಿ ಅರಗಿಸಿಕೊಂಡವರು. ಬಂದವರು ಬೈಬಲ್ಲಿನ ವಾಕ್ಯವೊಂದನ್ನು ಹೇಳಿದರೆ, ಸ್ವಾಮೀಜಿ ಅದೇ ಬೈಬಲ್ಲಿನಿಂದ ಅದಕ್ಕೆ ವಿರುದ್ಧ ಅರ್ಥ ನೀಡುವ ಹೇಳಿಕೆಯನ್ನು ಹಕ್ಕಿ ಉತ್ತರಿಸುತ್ತಿದ್ದರು ಮತ್ತು ತಮ್ಮ ವಾದವನ್ನು ಮಂಡಿಸಲು ಇಂಗ್ಲೀಷ್ ದಾರ್ಶನಿಕರ ಮತ್ತು ಬರಹಗಾರರ ಹೇಳಿಕೆಗಳನ್ನು ಲೀಲಾಜಾಲವಾಗಿ ಮುಂದಿಡುತ್ತಿದ್ದರು. ವರ್ಡ್ಸ್‌ವರ್ಥ್. ಥಾಮಸ್ ಗ್ರೇ ಮುಂತಾದ ಕವಿಗಳನ್ನು ಅವರು ಉದಾಹರಿಸುತ್ತಿದ್ದರು.

ಸ್ವಾಮೀಜಿ ಧರ್ಮದ ವ್ಯಾಪ್ತಿಯನ್ನು ಇಡೀ ಮಾನವ ಕುಲವನ್ನು ಅಪ್ಪಿಕೊಳ್ಳುವಷ್ಟು ವಿಸ್ತರಿಸಿ ಕೊಠಡಿಯಲ್ಲಿ ಒಂದು ಸ್ವಾತಂತ್ರ್ಯದ ವಾತಾವರಣವನ್ನು ಸೃಷ್ಟಿಸಿದ್ದರು. ಅವರ ಮಾತುಗಳಿಗೆ ಅನುಗುಣವಾಗಿ ನನ್ನ ಆಂತರ್ಯವೂ ಸ್ಪಂದಿಸುತ್ತಿತ್ತು. ಅದು ಅವರ ಸಂಮೋಹನಗೊಳಿಸುವ ಶಕ್ತಿಯೇ ಸರಿ.

ಚರ್ಚೆ ಮೊದಲು ಸ್ನೇಹಪೂರ್ಣ ವಾತಾವರಣದಲ್ಲಿ ಪ್ರಾರಂಭವಾಯಿತು. ಬರುಬರುತ್ತಾ ಕಾವು ಮೇಲೇರಿ ಕಹಿ ವಾತಾವರಣ ಉಂಟಾಯಿತು. ಕ್ರಿಶ್ಚಿಯನ್ ದಿಗ್ಗಜರು ತಮ್ಮ ಬೇಳೆ ಬೇಯದೆಂದು ತಿಳಿದಾಗ ಅಸಭ್ಯ ವರ್ತನೆಗೂ ಮುಂದಾದರು. ಆದರೆ ಆ ದಿನ ಸ್ವಾಮಿ ವಿವೇಕಾನಂದರು ನೀಡಿದ ಆನಂದವನ್ನು ನಾನೆಂದೂ ಮರೆಯಲಾರೆ.

ಮರುದಿನ ಸ್ನಾನಗೃಹದಲ್ಲಿ ಜೋರಾದ ಶಬ್ದ, ಅದರೊಟ್ಟಿಗೆ ಮಂತ್ರ ಪಠಣ. ಬಾಗಿಲು ಬಳಿ ನಿಂತು ಮಂತ್ರ ಕೇಳಿ ನಂತರ ತಿಂಡಿಯ ಸಮಯದಲ್ಲಿ ಆ ಮಂತ್ರದ ಅರ್ಥ ಕೇಳಿದೆವು. ಅವರೆಂದರು– "ನಾನು ಮೊದಲು ತಲೆಯ ಮೇಲೆ, ನಂತರ ಎದೆಯ ಮೇಲೆ ನೀರು ಹೊಯ್ದುಕೊಳ್ಳುತ್ತೇನೆ. ಪ್ರತಿ ಬಾರಿಯೂ ಜೀವಿಗಳಿಗೆಲ್ಲ ಮಂಗಳವಾಗಲೆಂದು ಪ್ರಾರ್ಥಿಸುತ್ತೇನೆ. ಅವರ ಮಾತುಗಳು ನೇರವಾಗಿ ನನ್ನ ಹೃದಯವನ್ನು ತಟ್ಟಿದವು. ನಾನೂ ಮನೆಯಲ್ಲಿ ದಿನಾಲೂ ಪ್ರಾರ್ಥನೆ ಮಾಡುತ್ತಲಿದ್ದೆ. ಮೊದಲು ನನಗಾಗಿ, ಅನಂತರ ನನ್ನ ಕುಟುಂಬಕ್ಕಾಗಿ ಪ್ರಾರ್ಥಿಸುತ್ತಿದ್ದೆ. ಇಡೀ ಮನುಕುಲಕ್ಕಾಗಿ ಪ್ರಾರ್ಥಿಸಬೇಕೆಂಬುದು ನನಗಿಲ್ಲೇ ಹೊಳೆದದ್ದು.

ತಿಂಡಿ ತಿಂದ ನಂತರ ಸ್ವಾಮೀಜಿಯವರೇ 'ಬನ್ನಿ, ವಾಕ್ ಹೋಗೋಣ' ಎಂದಯ ಕರೆದರು. ಸಂಕೋಚದಿಂದಲೇ ನಾವು ಅವರೊಡನೆ ಹೊರಟೆವು. ಅವರು ಮೌನವನ್ನು ಮುರಿಯುತ್ತ, ತಮ್ಮ ಸುಂದರ ದಂತಪಂಕ್ತಿಯನ್ನು ಶೋಭಾಯಮಾನವಾಗಿ ತೋರುತ್ತ, ಮಂದಹಾಸ ಬೀರುತ್ತ ಮಾತನಾಡಲು ಪ್ರಾರಂಭಿಸಿದರು. ಅವರಾಡಿದ ಒಂದು ಮಾತು ನನಗೆ ಈಗಲೂ ನೆನಪಿದೆ. (1893ರಲ್ಲಿ ಕೇಳಿದ್ದು, ಈಗ 1935ರಲ್ಲಿ ಹೇಳುತ್ತಿದ್ದಾಳೆ) ಕ್ರಿಶ್ಚಿಯನ್ ತತ್ವದ ಬಗ್ಗೆ ಮಾತನಾಡುತ್ತ "ಕ್ರಿಸ್ತನ ರಕ್ತ" ಎಂಬ ಮಾತು ತಮಗೆ ತುಂಬಾ ಜಿಗುಪ್ಸೆ ಉಂಟುಮಾಡುತ್ತದೆ. 'ಕ್ರಿಸ್ತನ ರಕ್ತನಾಳದಿಂದ ತೆಗೆದ ರಕ್ತದ ಝರಿ' ಎಂಬ ಬೈಬಲ್‌ನಲ್ಲಿಯ ಶ್ಲೋಕವನ್ನು ನಾನು ದ್ವೇಷಿಸುತ್ತೇನೆ. ಚರ್ಚ್ ಒಪ್ಪಿದ ಮಾತನ್ನು ಟೀಕಿಸುವುದಕ್ಕೂ ಎದೆಗಾರಿಕೆ ಬೇಕು. ನಾನು ವೇದಗಳ ಕುರಿತು ಪ್ರಶ್ನಿಸಿದೆ. ಅವರು ವೇದಗಳನ್ನು ನೀವೇ ಓದಿ ತಿಳಿದುಕೊಳ್ಳುವುದು ಒಳ್ಳೆಯದು" ಎಂದು ಸಲಹೆ ನೀಡಿದರು.

ಮುಂದೆ ಬೇಸಿಗೆಯಲ್ಲಿ ನಮ್ಮ ಮನೆಗೊಂದು ಮುದ್ದಾದ ಕರು ಬಂದಿತು. ಅದಕ್ಕೆ ನಾನು "ವೇದ" ಎಂದು ಹೆಸರಿಟ್ಟೆ. ಅಲ್ಲಿಗೆ ನನ್ನ ವೇದದ ಅಭಿಯಾನ ಮುಗಿಯಿತು. ಅವರೊಡನೆಯ ಕೆಲವೇ ದಿನಗಳ ಸಂಪರ್ಕ ನನ್ನ ಜೀವನವನ್ನು ಬದಲಿಸಿತು. ಆ ವಿಷಯ ಕುರಿತು ಮನೆಗೆ ಪತ್ರ ಬರೆದಾಗ ನಾನು ನನ್ನ ಧರ್ಮವನ್ನು ತ್ಯಜಿಸಿ ಅವರ ಶಿಷ್ಯಳಾಗುವೆನೆಂದು ಗಾಬರಿಯಾದರು. ಈಜಿಪ್ತಿನ ಕಲ್ಲಿನ ಶವಪೆಟ್ಟಿಗೆಯಲ್ಲಿನ ಬೀಜಗಳ ಬಗ್ಗೆ ಓದುತ್ತೇವೆ. ಅವು ಸಾವಿರಾರು ವರ್ಷಗಳ ನಂತರ ಈಗ ಬಿತ್ತಿದರೂ ಮೊಳಕೆ ಒಡೆಯುವ ಶಕ್ತಿಯನ್ನು ಉಳಿಸಿಕೊಂಡಿರುತ್ತವೆಯಂತೆ. ಭಾರತದ ಆ ಪುಣ್ಯ ಪುರುಷನ ಸ್ಮೃತಿಯ ಬೀಜ ಈಗ ನನ್ನಲ್ಲಿ ಮೊಳೆತು ಗಿಡವಾಗಿ ಬೆಳೆಯುತ್ತಿದೆ. ಅದು ಈಗ ನನ್ನನ್ನು ಈ ದೇಶಕ್ಕೆ ಕರೆತಂದಿದೆ. ಈ ಮೊದಲು ನಾನು ಹಲವು ಕಷ್ಟ ಸುಖ, ಹೋರಾಟಗಳನ್ನು ಎದುರಿಸಿ ಯಾವುದೋ ಮತ ಪಂಥಗಳನ್ನು ಅನುಸರಿಸಿದೆ, ಎಲ್ಲವೂ ನಿರಾಶೆ ತಂದಿತು. ಸ್ವಾಮೀಜಿಯವರ ವಿಶ್ವಾಸನೀಯವಾದ ಸಂದೇಶ ನನ್ನ ಹಂಬಲವನ್ನು ತೃಪ್ತಗೊಳಿಸಿತು. ನಮ್ಮೊಳಗೆ ದಿವ್ಯತೆ ಇದೆ, ನಾವು ಭಗವಂತನ ಅಂಶ, ಇದು ಪ್ರತಿಯೊಬ್ಬರ ವಿಷಯದಲ್ಲಿ ಸತ್ಯ. ಈ ನಂಬಿಕೆಗಿಂತ ಮತ್ತೇನು ಹೆಚ್ಚಿಗೆ ಬೇಕು. ನಾನಿಲ್ಲಿಗೆ (ಬೇಲೂರು ಮಠ, ಕೊಲ್ಕತ್ತಾ) ಬಂದಿರುವುದು ನನ್ನ ಮನೆಗೇ ಬಂದಂತಿದೆ".

(ರಾಮಕೃಷ್ಣ ಸಂಘದ 'ಪ್ರಬುದ್ಧ ಭಾರತ' ಇಂಗ್ಲಿಷ್ ಮಾಸಿಕದ ಸೆಪ್ಟೆಂಬರ್, 1936ರ ಈ ಲೇಖನದ ಮೂಲ: Reminices of Svami Vivekanand ಪುಸ್ತಕ)

***

ಬಾಯಿ ಬಿಡದೆ
ನೋವಿನೊಡನೆ ಇರುವು

– ರಾಧಿಕಾ ವಿ. ಗುಜ್ಜರ್

ಕಾಗದಕ್ಕೆ ದನಿ ಎಲ್ಲಿದೆ
ಅಕ್ಷರಗಳದು ಕೇವಲ ನಡೆ

ಹೇಳಲಾಗದ ಅದುಮಿಟ್ಟುಕೊಳ್ಳಲಾಗದ
ಹೊರಬಂದರೂ ಗುಟ್ಟುಗಳ ಹೆರದ
ಮೌನವೊಂದು ಬಾಯಿ ಬಿಚ್ಚಿದೆ
ಕಾದ ಭಾವಗಳು ಸಾಲು ಸಾಲಾಗಿವೆ

ಓದುವವರು ಅರಿತರಿದೆ ಅಳಲು
ತಾಕುವ ಒಡಲ ಒಲೆಯ ಬಿಸಿಯು
ಕಣ್ಣೀರು ಗಲ್ಲಗಳ ತೋಯಿಸಿದರು
ಆರಲಿಲ್ಲ ಬಿಕ್ಕಳಿಕೆಯ ಕುದಿಯು

ಕಾಗದದ ಎಡ ಕೆಳತುದಿಯಲಿದೆ
ಸಹನೆ ಸೋರಿದ ಹನಿಗಳ ಸಹಿ
ಅಕ್ಷರಗಳದು ಆಕೃತಿಯಾದರೆ
ರಂಗಳಿದು ಕಪ್ಪನಪ್ಪಿದೆ ಅಭಿವ್ಯಕ್ತಿ

ಬರೆದು ಬರಿದಾದವರ ಎದೆಗೂಡು
ಅಪ್ಪಿ ಸಂತೈಸಿದರೆ ಚಿಗುರುವುದೇ?
ಓದುವಾಗಿನ ಅರ್ಥವಾದುದೆಲ್ಲವು
ಮುಗ್ಗರಿಸದೆ ಮುಳ್ಳು ತೆಗೆದೀತೆ?

ಎದೆ ಬಡಿದು ಗೋಳಾಡಿಬಿಡುವ
ಸಹಜ ಅಭಿವ್ಯಕ್ತಿಗಿಂತ ಹರಿತವಿದು
ಒಮ್ಮೆಲೇ ತುಳುಕಿ ಬೋರಲಾಗದ
ಒಂದೊಂದು ಅಕ್ಷರವೂ ಸಾವಿರವು

ಸಾವಿನೊಡನೆ ಇರುವು
ಸಾವಿನಂತಹ ನೋವಿನೊಡನೆ ಇರುವು

***

ಲಾಸ್ಟ್ ವರ್ಕಿಂಗ್ ಡೇ

– ಶ್ರೀನಿವಾಸ ಎಂ.ಜಿ. ಪಾಣಿಭಾತೆ

“ಹಾಯ್ ರಮೇಶ್, ಹೌ ಆರ್ ಯು? ನಿನ್ನೆ ನೀ ಕಾಣಿಸಲಿಲ್ಲ ಆಫೀಸ್‌ನಲ್ಲಿ, ರಜಾ ಇದ್ಯಾ!?” ಎಂದು ಕೇಳುತ್ತಾ ಬಂದ ಆನಂದ, ರಮೇಶ್ ಕುಳಿತಿದ್ದ ಟೇಬಲ್ ಎದುರಿನ ಕುರ್ಚಿಯನ್ನು ಎಳೆದುಕೊಂಡು ಕುಳಿತ.

ರಮೇಶ್, ಆಫೀಸ್ ಕೆಫೆಟೇರಿಯಾದ ಒಂದು ಮೂಲೆಯ ಟೇಬಲಿನಲ್ಲಿ ಒಬ್ಬನೇ ಕೈಯಲ್ಲಿ ಕಾಫಿ ಕಪ್ ಹಿಡಿದು ಕುಳಿತಿದ್ದ. ಕಾಫಿ ತಣ್ಣಗಾಗುತ್ತಿದ್ದರೂ ಅದನ್ನು ಕುಡಿಯದೇ, ಆ ಕಪ್‌ನೇ ನೋಡುತ್ತಾ ಕುಳಿತಿದ್ದ. ಆದರೆ ಅವನ ಗಮನ ಮಾತ್ರ ಎಲ್ಲೋ ಇತ್ತು.

“ಯೆಸ್, ನಿನ್ನೆ ರಜಾ ಇದ್ದೆ” ಎಂದಷ್ಟೇ ಉತ್ತರಿಸಿ ಮತ್ತೆ ಮೌನನಾದ.

“ವೈ ಮ್ಯಾನ್, ಈಸ್ ಎವೆರಿತಿಂಗ್ ಓಕೇ?” ಎಂದು, ಕುಳಿತಿದ್ದ ಚೇರನ್ನು ಸ್ವಲ್ಪ ಮುಂದಕ್ಕೆ ಎಳೆಯುತ್ತಾ, ಸ್ವಲ್ಪ ಬಾಗಿ, ಮೆಲು ಧ್ವನಿಯಲ್ಲಿ ಆನಂದ ಕೇಳಿದ. ಅವನ ಧ್ವನಿಯು ಮೃದುವಾಗಿದ್ದು, ರಮೇಶ್ ಏನಾದರೂ ಮಾತನಾಡಲಿ ಎಂಬಂತೆ ಇತ್ತು.

ರಮೇಶ್ ಮತ್ತು ಆನಂದ ಬೇರೆ ಬೇರೆ ಟೀಮಿನವರಾಗಿದ್ದರೂ, ಬೆಳಿಗ್ಗೆ ಆಫೀಸ್‌ಗೆ ಬಂದ ನಂತರ ಒಂದು ರೌಂಡ್ ಕಾಫಿ ಮತ್ತು ಮಧ್ಯಾಹ್ನದ ಊಟ ಯಾವಾಗಲೂ ಜೊತೆಯಲ್ಲಿಯೇ.

“ಮೊನ್ನೆ ಮಧ್ಯಾಹ್ನ ನಾ ಸ್ವಲ್ಪ ಬೇಗ ಹೊಗಿದ್ದು ನಿನ್ಗೆ ಗೊತ್ತಲ್ವಾ? ನಮ್ಮ ಮುಂದಿನ ಮನೆ ಸತೀಶ್ ತೀರ್ಕೊಂಡ್ ಬಿಟ್ಟ. ಅವನ್ಗೆ ನನ್ನ್ ವಯಸ್ಸೇ ಕಣೋ! ನಿನ್ನೆ ಮಣ್ಣಾಯ್ತು. ಮೊನ್ನೆಯಿಂದ ಮನಸ್ಸಿಗೆ ತುಂಬಾ ಬೇಸ್ರ ಆಗ್ತೈತೆ. ಅವ್ರ್ ಫ್ಯಾಮಿಲಿ ಮತ್ತ್ ನಮ್ಮ್ ಫ್ಯಾಮಿಲಿ ತುಂಬಾ ಹಚ್ಕೊಂಡಿದ್ವಿ. ಅವ್ನ್ ಈಗಿಲ್ಲ ಅಂತ ಯೋಚ್ಸಿದ್ರೆ ನಂಬೋಕಾಗ್ತಿಲ್ಲ”.

“ಯಾಕೆ...ಏನಾಗಿತ್ತು? ಆಕ್ಸಿಡೆಂಟಾ...!?”

“ಇಲ್ಲ ಹಾರ್ಟ್ ಅಟ್ಯಾಕ್ ಅಂತೆ! ಆಫೀಸ್‌ಗೆ ಮಾಮೂಲಿ ಹೋಗೋಹಾಗೆ ಹೋಗಿದ್ದಾನೆ. ಅಲ್ಲಿ ಸ್ವಲ್ಪ ಎದೆನೋವು ಅಂತ ಹೇಳಿದ್ದಕ್ಕೆ, ಇಮ್ಮಿಡಿಯಟ್ ಹಾಸ್ಪೆಟಲ್‌ಗೆ ಕರ್ಕೊಂಡೋಗಿದ್ದಾರೆ, ಆದ್ರೇ ಅಲ್ಲಿ ಹೋಗೋಷ್ಟರಲ್ಲಿ ಹೋಗ್ಬಿಟ್ಟಿದ್ದಾನೆ. ‘ಸಾರೀ, ಹಿ ಇಸ್ ನೋ ಮೋರ್’ ಅಂತ ಹೇಳ್ಕಳ್ಸಿದ್ರಂತೆ. ಆಗ ಇದ್ದೋರು, ಈಗ ಇಲ್ವಲ್ಲೋ?!” ಎಂದು ಕಣ್ಣರಳಿಸಿ, ಆಶ್ಚರ್ಯದಿಂದ ಮೆಲ್ಲಗೆ ಹೇಳಿದ ರಮೇಶ್. ಮುಂದುವರೆಸುತ್ತಾ, “ಅವ್ನೂ ಮತ್ತ್ ಅವ್ರ್ ವೈಫ್ ಎಷ್ಟ್ ಚೆನ್ನಾಗಿದ್ರಂದ್ರೇ, ದಿನಾ ಅವ್ನ್ ಮಿಸ್ಸೆಸ್ ಗೇಟಿಗೆ ಬಂದು ಬೈ ಹೇಳ್ತಿದ್ರು. ಬೆಳಿಗ್ಗೆ ಮನೆಯಿಂದ ಹೋದೋನು, ಸಂಜೆ ವಾಪಾಸ್ ಬರಲ್ಲ ಅಂದ್ರೆ... ಹೇಗೋ? ಅವ್ನ್ ಮಿಸ್ಸೆಸ್ ಗೆ ಹೆಂಗ್ ಆಗಿರ್‌ಬಾರ್ದು!?”

“ಮೊನ್ನೆ ಸಂಡೇ, ಸುಮಾರ್ ಹೊತ್ತು ನಾವು ಕೂತು ಮಾತಾಡ್ತಾ ಇದ್ವಿ. ಮ್ಯೂಚುಯಲ್ ಫಂಡ್ಸ್‌ನಲ್ಲಿ ಹೇಗೆ ಇನ್‌ವೆಸ್ಟ್ ಮಾಡ್ಬೇಕಂತ! ಫೈನಾನ್ಸ್ ಬಗ್ಗೆ ಅವ್ನಿ ತುಂಬಾ ಚೆನ್ನಾಗಿ ಗೊತ್ತಿತ್ತು. ಭಾಳಾ ವಿಚಾರ ಮಾತಾಡೋದಿತ್ತು. ಮತ್ತೆ ಯಾವಾಗಾದ್ರು ಮಾತಾಡೋಣಾಂತ ಅವತ್ತು ಮಧ್ಯಕ್ ನಿಲ್ಸ್‌ಸಿದ್ವಿ. ಈಗ ನೋಡಿದ್ರೆ, ಅವನೇ ಇಲ್ಲ. ಅದರ್ ವಿಚಾರ ಮತ್ತೆ ತಿಳ್ಕೋಬೇಕಂದ್ರೆ, ಈಗ ಅವ್ನಿಲ್ಲ! ಎಲ್ಲಾ ಮಾತ್‌ಗಳು ಅರ್ಧಕ್ ನಿಂತೋದ್ವು. ನಾಳೇಗ್ ಏನಂತ ಗೊತ್ತಿಲ್ವಲ್ಲೋ...!?” ಎಂದು ಬಲು ವಿಷಾದದ ಧ್ವನಿಯಲ್ಲಿ ಹೇಳಿ, ರಮೇಶ್ ಮತ್ತೆ ಮೌನಕ್ಕೆ ಜಾರಿದ.

ಅವನ ಮಾತುಗಳಲ್ಲಿಯೂ ಮುಖಭಾವದಲ್ಲಿಯೂ, ಆ ಎರಡು ಕುಟುಂಬಗಳ ನಡುವಿನ ಬಾಂಧವ್ಯ ಎಷ್ಟು ಚೆನ್ನಾಗಿತ್ತೆಂದು ಸ್ಪಷ್ಟವಾಗಿ ತಿಳಿಯುತ್ತಿತ್ತು. ಹಾಗೆಯೇ, ಆ ಮನೆಯ ಒಡೆಯನನ್ನು ಕಳೆದುಕೊಂಡ ಮನೆಯವರಿಗೆ ಹೇಗಾಗಿರಬಾರದು ಎಂಬ ಯೋಚನೆ ಆನಂದನ ಮನಸ್ಸಿಗೆ ಬಂದುಹೋಯಿತು.

“ಸಮಾಧಾನ ಮಾಡ್ಕೊಳ್ಳೊ. ಹೀಗೇ ಆಗ್ಬೇಕಂತ ದೇವರು ಬರ್ದಿರಬೇಕಾದ್ರೆ, ನಾವೇನು ಮಾಡಕ್ಕಾಗುತ್ತೆ” ಎಂಬ ಸಮಾಧಾನದ ಮಾತುಗಳನ್ನು ಹೇಳಿ, ಸ್ವಲ್ಪ ಹೊತ್ತು ಕುಳಿತು, ಇಬ್ಬರೂ ತಂತಮ್ಮ ಕೆಲಸಕ್ಕೆ ಹೋದರು.

ರಮೇಶ್ ನಿನ್ನೆ ರಜಾ ಇದ್ದಿದ್ದರಿಂದ ಮೊದಲು ಇ-ಮೇಲ್‌ಗಳನ್ನು ನೋಡಿ ಮುಗಿಸಿ ಹತ್ತು ಗಂಟೆಗೆ ಒಂದು ಮೀಟಿಂಗ್‌ಗೆ ಹೋದ. ಡೇಟಾ ಅನಾಲಿಟಿಕ್ಸ್ ಮತ್ತು ರಿಪೋರ್ಟ್ಸ್‌ಗಳಲ್ಲಿ ಪರಿಣಿತನಾಗಿದ್ದ ರಮೇಶ್, ತನ್ನ ಮ್ಯಾನೇಜರ್‌ನ ವಿನಂತಿಯಂತೆ ಬೇರೆ ಒಂದು ಟೀಮಿನವರಿಗೆ ಸ್ವಲ್ಪ ಸಹಾಯ ಮಾಡಲು ಹೇಳಿದ್ದು, ಆ ಟೀಮಿನ ಇಬ್ಬರು ಮೀಟಿಂಗ್‌ಗೆ ಬರುವವರಿದ್ದರು.

ಕಾನ್ಫರೆನ್ಸ್ ರೂಮಿಗೆ ಹೋದಾಗ, ಅವರಲ್ಲಿ ಒಬ್ಬನಾದ ದೀಪಕ್ ಮಾತ್ರ ಬಂದಿದ್ದು, ಮತ್ತೊಬ್ಬನು ಬಂದಿರಲಿಲ್ಲ. ಮುಖ್ಯವಾಗಿ ಅವನೇ ಬರುವುದಾಗಿತ್ತು. “ವೇರ್ ಇಸ್ ರಂಜಿತ್?” ಎಂದು ದೀಪಕ್‌ನಲ್ಲಿ ಕೇಳಿದರೆ, ಅವನು “ನೋ ಐಡಿಯಾ. ಐ ಹ್ಯಾವ್ ನಾಟ್ ಸೀನ್ ಹಿಮ್ ಇನ್ ಆಫೀಸ್ ಟುಡೇ” ಎಂದ.

ಅವನು ಬರಲಿ ಎಂದು ಕಾಯುತ್ತಾ, ಮತ್ತೆ ತನ್ನ ಇ-ಮೇಲ್‌ಗಳಲ್ಲಿ ಮಗ್ನನಾದ. ಹತ್ತು ನಿಮಿಷ ಕಳೆದ ನಂತರ, ಅವನು ಬಾರದಿದ್ದಾಗ, ಸ್ವಲ್ಪ ಸಿಟ್ಟಲ್ಲಿ – “ಹಿ ಇಸ್ ಓನ್ಲೀ ಲುಕಿಂಗ್ ಫಾರ್ ದಿಸ್ ಹೆಲ್ಪ್, ರೈಟ್? ದೆನ್ ವೇರ್ ಇಸ್ ಹಿ...?!” ಎನ್ನುತ್ತಾ, ದೀಪಕ್‌ಗೆ ಕರೆಯುವಾ ಎಂದು, ಮೈಕ್ರೋಸಾಫ್ಟ್ ಟೀಮ್ಸ್‌ನಲ್ಲಿ ಅವನನ್ನು ಪಿಂಗ್ ಮಾಡಲು ಹೋದರೆ, ಅವನ ಮೇಲ್ ಐಡಿ ಇನ್‌ಆಕ್ಟಿವೇಟ್ ಆಗಿತ್ತು.

ಸ್ವಲ್ಪ ಆಶ್ಚರ್ಯನಾಗಿ, “ಹೇ ಮ್ಯಾನ್! ಹಿಸ್ ಮೇಲ್ ಐಡಿ ಈಸ್ ಇನ್‌ಆಕ್ಟಿವೇಟೆಡ್. ವೈ, ವಾಟ್ ಹ್ಯಾಪೆಂಡ್?” ಎನ್ನುತ್ತಾ ದೀಪಕ್‌ನನ್ನು ಕೇಳಿದರೆ, ಅವನು ತನಗೇನೂ ಗೊತ್ತಿಲ್ಲ ಎಂಬಂತೆ, ತನ್ನೆರಡೂ ಭುಜಗಳನ್ನು ಮೇಲೆಕ್ಕೆತ್ತಿದ.

“ಗೀವ್ ಮಿ ಎ ಸೆಕೆಂಡ್, ಐ ವಿಲ್ ಬಿ ಬ್ಯಾಕ್” ಎಂದು ಹೇಳಿ, ರಮೇಶ್ ತನ್ನ ಮ್ಯಾನೇಜರ್ ಡಿಸೋಜನಲ್ಲಿಗೆ ಬಂದು ಕೇಳಿದರೆ– “ಸಾರೀ, ಯು ವೆರ್ ಆನ್ ಲೀವ್ ಯೆಸ್ಟರ್‌ಡೇ. ಐ ಮಿಸ್ಡ್ ಟು ಪಾಸ್ ಆನ್ ದಿಸ್ ಮೆಸೇಜ್ ಟು ಯು. ಯೆಸ್ಟರ್‌ಡೇ ವಾಸ್ ಹಿಸ್ ಲಾಸ್ಟ್ ಡೇ. ಹಿ ಹ್ಯಾಸ್ ಬೀನ್ ಆಸ್ಕಡ್ ಟು ಹ್ಯಾಂಡ್ ಓವರ್ ಹಿಸ್ ಲ್ಯಾಪ್‌ಟಾಪ್ ಅಂಡ್ ಸೈನ್ ದ ಪೇಪರ್ಸ್. ಕಂಪನಿ ಹ್ಯಾಸ್ ಗಿವನ್ ಹಿಮ್ ಟೂ ಮಂತ್ಸ್ ಸ್ಯಾಲರೀ ಇನ್ ಅಡ್ವಾನ್ಸ್” ಎಂದು ಹೇಳಿದ.

‘ಹಿ ಹ್ಯಾಸ್ ಬೀನ್ ಫೈರ್ಡ್!’ – ರಮೇಶನ ಮನಸ್ಸಿಗೆ ನಾಟಿತು.

ರಮೇಶ್‌ಗೆ ಏನು ಮಾತನಾಡಬೇಕೆಂದು ತೋಚದೆ, ಸುಮ್ಮನೇ ವಾಪಾಸ್ ಕಾನ್ಫರೆನ್ಸ್ ರೂಮಿಗೆ ಬಂದ. ಅವನು ಕಂಪನಿಯಲ್ಲಿ ಏನು ನಡೆಯುತ್ತಿದೆ ಎಂದು ಯೋಚಿಸುತ್ತಾ ಕುಳಿತಿರಲು, ದೀಪಕ್ – “ಸರ್, ವಾಟ್ ಹ್ಯಾಪೆಂಡ್?” ಎಂದು ಕೇಳಿದ.

‘ಮೊನ್ನೆ ಇದ್ದ ಅವನ ಪ್ರೀತಿಯ ಗೆಳೆಯ, ನೆರೆಮನೆಯವ ಈ ಲೋಕದಲ್ಲಿಲ್ಲ. ನಿನ್ನೆ ಇದ್ದ ಸಹೋದ್ಯೋಗಿ ಇಂದು ಆಫೀಸ್‌ನಲ್ಲಿಲ್ಲ! ಜೀವನವು ಹೇಗೆ ಅನಿಶ್ಚಿತವೋ, ಹಾಗೆ ಕೆಲಸವೂ ಅನಿಶ್ಚಿತ! ಕೆಲಸಕೆಂದು ಆಫೀಸ್‌ಗೆ ಬಂದವನಿಗೆ – ‘ನೀನು ಕೆಲಸ ಮಾಡುವುದು ಸಾಕು. ನಿನ್ನ ಲ್ಯಾಪ್‌ಟಾಪ್‌ನ್ನು ಕೊಟ್ಟು, ಈ ಪೇಪರ್‌ಗಳಿಗೆ ಸೈನ್‌ಮಾಡಿ, ಐಡಿ ಕಾರ್ಡ್‌ನ್ನು ರಿಸೆಪ್ಷನ್‌ನಲ್ಲಿ ಕೊಟ್ಟು ಹೋಗು’ ಎಂದರೆ, ಅವರಿಗೆ ಹೇಗೆ ಆಗಿರಬಾರದು? ಸಾವಿನ ಆಚೆ ಏನಿದೆಯೆಂದು ತಿಳಿಯದ ನಮಗೆ, ಅನಿರೀಕ್ಷಿತ ಸಾವು ಬಂದಾಗ, ‘ಈ ಜೀವನದ ಜಂಜಾಟಗಳಿಂದ ಮುಕ್ತಿ ಹೊಂದಿದ’ ಎಂದು ಇದ್ದವರ ಮಾತು ಮಾತ್ರ ಗೊತ್ತು. ಸತ್ತವನ ಮನಸ್ಸು ಅಥವಾ ಆತನ ಆತ್ಮ ಹೇಗೆ ಚಿಂತಿಸುತ್ತೇ ಎಂಬುದು ತಿಳಿಯದು. ಆದರೆ, ಬೆಳಿಗ್ಗೆ ಬಂದವನಿಗೆ ಕರೆದು, ‘ನಿನಗೆ ಇಲ್ಲಿ ಕೆಲಸ ಇಲ್ಲ’ ಎಂದು ಹೇಳಿದರೆ, ಬದುಕಿರುವ ಮನುಷ್ಯನ ಮನಸ್ಸಿಗೆ ಹೇಗೆ ಆಗಿರಬಾರದು? ಅವನ ಮನಸ್ಸಿಗೆ ‘ಈ ಜೀವನದ ಜಂಜಾಟಗಳನ್ನು ಹೇಗೆ ನಿಭಾಯಿಸಬೇಕು?’ ಎಂಬ ಸಾವಿರ ಪ್ರಶ್ನೆಗಳು ಒಟ್ಟಿಗೆ ಮುತ್ತಿಕೊಂಡರೆ ಹೇಗಾಗಬಾರದು?

ಸಾವಿಗಿಂತಲೂ, ಈ ಅನಿರೀಕ್ಷಿತ ಕೆಲಸ ಕಳೆದುಕೋಳ್ಳುವುದು ಮನಸ್ಸಿಗೆ ಅಘಾತವಲ್ಲವೇ?!' – ಹೀಗೆ ಯೋಚಿಸುತ್ತಿರಲು, ದೀಪಕ್ – "ಸರ್, ವಾಟ್ ಹ್ಯಾಸ್ ಹ್ಯಾಪೆಂಡ್?!" ಎಂದು ಮತ್ತೊಮ್ಮೆ ಕೇಳಿದ.

"ರಂಜಿತ್ ಈಸ್ ನಾಟ್ ಇನ್ ಆಫೀಸ್. ಹಿ ಹ್ಯಾಸ್ ಬೀನ್ ಆಸ್ಕ್ಡು ಟು ಲೀವ್ ದ ಕಂಪನಿ" ಎಂದು ರಮೇಶ್ ಹೇಳಿದ.

"ಸರ್ ಯಾಕೆ, ಅವ್ರು ಚೆನ್ನಾಗಿಯೇ ಕೆಲ್ಸಾ ಮಾಡ್ತಾ ಇದ್ರಲ್ಲಾ?". ದೀಪಕ್ ಈಗ ಕನ್ನಡ ಭಾಷೆಯಲ್ಲಿ ಕೇಳಿದ್ದ. ಕಷ್ಟದಲ್ಲಿ ತಾಯಿ ನೆನಪಾಗುವಂತೆ, ಈ ಅಹಿತಕರ ಸನ್ನಿವೇಶದಲ್ಲಿ ಮಾತೃಭಾಷೆ ಮೊದಲಾಗಿತ್ತು.

"ಹೌದು, ಬಟ್ ಗೊತ್ತಿಲ್ಲ. ನನ್‌ಗೂ ಶಾಕ್".

"ಸಾರ್ ಈ ರೀಪೋರ್ಟ್ಸ್ ಮತ್ತು ಡ್ಯಾಶ್‌ಬೋರ್ಡ್ಸ್, ಎಲ್ಲಾ ಅವರೇ ಮಾಡ್ತಾ ಇದ್ದದ್ದು. ಈಗ ಯಾರ್ ಮಾಡ್ತಾರೆ? ನಂಗೂ ಇದ್ರ್ ಬಗ್ಗೆ ಜಾಸ್ತಿ ಏನೂ ಗೊತ್ತಿಲ್ಲ" – ದೀಪಕ್ ಧ್ವನಿಯಲ್ಲಿ ಆ ಕೆಲಸ ತನಗೆ ಬಂದರೆ, ಅದರ ಬಗ್ಗೆ ಏನೂ ಗೊತ್ತಿಲ್ಲದ ತಾನು ಹೇಗೆ ಮಾಡಬೇಕು ಎನ್ನುವ ವಿಚಾರದಲ್ಲಿ ಕೇಳಿದ್ದ!

"ಸರ್, ಹೀಗೆಸಡನ್ನೀ ತೆಗ್ದ್ ಬಿಟ್ರೆ, ಅವ್ರು ಮಾಡ್ತಿದ್ದ ನಾಲೆಡ್ಜ್ ಎಲ್ಲಾ ಹೋಗ್ಬಿಡ್ತಲ್ವಾ ಸರ್. ಕಂಪನಿಗೇ ಲಾಸ್ ಅಲ್ವಾ? ಅದೇ ಕೆಲ್ಸಾ ಈಗ ಬೇರೋರು ಮಾಡ್ಬೇಕಂದ್ರೆ, ಮತ್ತೆ ಟೈಮ್ ತಗೋಳ್ತೇ. ಅದ್ಯಾಕ್ ಸರ್ ಹಂಗ್ಮಾಡ್ತಾರೆ?" – ಅವನ ಮಾತು ನಿಶ್ಚಲ ಮನಸ್ಸಿನ ಮಗುವಿನ ಮುಗ್ಧ ಪ್ರಶ್ನೆಯಂತಿತ್ತು.

ರಮೇಶ್‌ನಲ್ಲಿ ಉತ್ತರವಿರಲಿಲ್ಲ. "ವಿ ವಿಲ್ ರೆಸೂಮ್ ಆನ್ ದಿಸ್ ಲೇಟರ್" ಎಂದು ಹೇಳಿ ರೂಮಿನಿಂದ ಹೊರಬಂದ.

ತನ್ನ ಡೆಸ್ಕ್‌ಗೆ ಬಂದು, ಲ್ಯಾಪ್‌ಟಾಪ್‌ನ್ನು ಮುಂದೆ ಟೇಬಲಿನ ಮೇಲೆ ಇಟ್ಟು, ಕಾಲುಗಳನ್ನು ಉದ್ದವಾಗಿ ಚಾಚಿ, ಚೇರನ್ನು ಬೆನ್ನಿನಿಂದ ಹಿಂದಕ್ಕೆ ಮೀಟಿ, ಕಣ್ಣುಗಳನ್ನು ಮುಚ್ಚಿಕೊಂಡು ಕುಳಿತು ಯೋಚಿಸತೊಡಗಿದ. ಎರಡು ದಿನಗಳಿಂದ ಮನಸ್ಸು ಡಿಸ್ಟರ್ಬ್ ಆಗಿತ್ತು. ಎರಡೂ ಅನಿರೀಕ್ಷಿತ ಘಟನೆಗಳು. ಎರಡೂ ನಾಳೆಯ ದಿನ ಏನು ಮಾಡುವುದು ಎಂದು ಯೋಚಿಸುವಂತಹ ಘಟನೆಗಳು. ಆದರೆ, ಮೊದಲನೆಯದರಲ್ಲಿ ಯೋಚಿಸುವವರು ಒಬ್ಬರು ಕಡಿಮೆಯಾಗಿರುತ್ತಾರೆ, ಅದು ಸತ್ತವರು!

ಕೆಲಸ ಕಳೆದುಕೊಳ್ಳುವುದು ಹೊಸದಾಗಿ ಇಂದಿನದೇನಲ್ಲ. ಈ ಮೊದಲೂ ಸಹ ಜನರು ಕೆಲಸ ಕಳೆದುಕೊಳ್ಳುತ್ತಿದ್ದರು. ಆದರೆ ನಮ್ಮಲ್ಲಿ ಅದನ್ನು ಸ್ವಲ್ಪ ಮುಂಚಿತವಾಗಿ ತಿಳಿಸಿ, ಅವರಿಗೆ ಪರ್ಯಾಯ ಅನುಕೂಲತೆಗಳನ್ನು ಮಾಡಿಕೊಳ್ಳಲು ಅವಕಾಶ ಕೊಟ್ಟು ಕೆಲಸದಿಂದ ತೆಗೆಯುತ್ತಿದ್ದರು. ಅದು ಹೇಗೆಂದರೆ – ಕಾಹಿಲೆ ಬಿದ್ದು, ಒಂದೆರಡು ತಿಂಗಳು ನರಳಾಡಿ, ಇನ್ನೇನು ಸ್ವಲ್ಪ ದಿನಗಳಲ್ಲಿ ಸಾಯುತ್ತಾನೆ ಎಂದು ಎಲ್ಲರಿಗೂ ಗೊತ್ತಾದ ಮೇಲೆ ಸತ್ತಂತೆ. ಆಗ ಬದುಕಿದ್ದವರಿಗೂ ಅದನ್ನು ಹೇಗೆ ಸಹಿಸಿಕೊಳ್ಳುವುದೆಂದು, ಅರಿವಾಗಿರುತಿತ್ತು. ಆದರೆ ಈಗಿನ ಕಾರ್ಪೊರೇಟ್ ಪಾಲಿಸಿಗಳು ಹಾಗಲ್ಲ, ಒಂದೇ ಸಲಕ್ಕೆ ಸೀವಿಯರ್ ಹಾರ್ಟ್ ಅಟ್ಯಾಕ್ ಆಗುವಂತೆ. ಒಮ್ಮೆಗೆ ಕರೆದು 'ನಿನಗಿಲ್ಲಿ ಕೆಲಸವಿಲ್ಲ, ನೀನು ಹೋಗಬಹುದು' ಎಂದಂತೆ!

"ರಮೇಶ್ ಊಟಕ್ಕೆ ಹೋಗೋಣ್ವಾ" – ಎಂದು ಆನಂದ ಅವನ ಭುಜದ ಮೇಲೆ ಕೈ ಇಟ್ಟಾಗಲೇ, ಅವನು ಮತ್ತೆ ಯೋಚನಾ ಲೋಕದಿಂದ ಹೊರಬಂದದ್ದು. "ಸರಿ" ಎಂದು ಹೇಳಿ, ತನ್ನ ಲಂಚ್ ಬಾಕ್ಸ್ ಎತ್ತಿಕೊಂಡು ಕೆಫೆಟೇರಿಯಾ ಕಡೆಗೆ ಹೊರಟ.

ಊಟಕ್ಕೆ ಕುಳಿತಾಗ, ಸ್ವಲ್ಪ ಹೊತ್ತು ಏನನ್ನೂ ಮಾತನಾಡದೆ ಸುಮ್ಮನೇ ಊಟಮಾಡುತ್ತಿದ್ದರೆ, 'ತನ್ನ ಗೆಳೆಯನ ಸಾವಿನ ದುಃಖಕ್ಕೆ, ಮಾತಾಡುತ್ತಿಲ್ಲದಿರಬಹುದು. ಅವನ ಪಾಡಿಗೆ ಅವನನ್ನು ಬಿಡುವುದು ಉತ್ತಮ' ಎಂದು ಅಂದುಕೊಂಡು, ಆನಂದ್ ತಾನೂ

ಮಾತಿಲ್ಲದೇ ಮೌನವಾಗಿ ಊಟ ಮಾಡುತ್ತಿದ್ದ. ರಮೇಶನೇ ಮೊದಲಿಗೆ ಬಾಯಿ ತೆರೆದ – ‘‘ಆನಂದ್, ಗೊತ್ತಾಯ್ತಾ? ರಂಜಿತ್‌ನ ತೆಗ್‌ದ್ರಂತೆ ಕೆಲ್ಸದಿಂದ’’.

‘‘ಏನೋ ಹೇಳ್ತೀಯಾ? ನಾನು ಅವ್ನು ನಿನ್ನೆ ಇದೇ ಟೇಬಲ್‌ನಲ್ಲಿ ಕುಳಿತು, ಬೆಳಿಗ್ಗೆ ಕಾಫಿ ಕುಡ್‌ದ್ವೀ. ನೀನಿರ್ಲಿಲ್ಲ ನಿನ್ನೆ. ಆಮೇಲೆ ಅವ್ನು ಸಿಗಲಿಲ್ಲ. ಮಧ್ಯಾಹ್ನ ಊಟ್ದ್ ಟೈಮಲ್ಲಿ ಅವ್ನು ಕಾಣಿಸ್‌ಲಿಲ್ಲ’’ ಎಂದ ಆನಂದ್.

‘‘ಹೌದು, ನಿನ್ನೆ ಬೆಳಿಗ್ಗೆ ಅವ್ನ ಕರ್ದು, ಪೇಪರ್ಸ್‌ಗೆ ಸೈನ್ ಮಾಡ್ಸಿಕೊಂಡು, ಲ್ಯಾಪ್‌ಟಾಪ್ ಇಸ್ಕೊಂಡು ಕಳ್ಸಿದ್ರಂತೆ. ಡಿಸೋಜ ಹೇಳಿದ್ರು. ನನ್‌ಗೂ ಶಾಕ್!’’.

ಈಗ ಮೌನವಾಗಿರುವ ಸರದಿ ಆನಂದನದಾಗಿತ್ತು. ಕೈಯಲ್ಲಿನ ಸ್ಪೂನ್‌ನ್ನು ಬರೀ ತಟ್ಟೆಯಲ್ಲಿ ಆಡಿಸುತ್ತಾ ಕುಳಿತ. ತಟ್ಟೆಯಲ್ಲಿದ್ದ ಅನ್ನವನ್ನು ಬಾಯಿಗೆ ಇಟ್ಟುಕೊಳ್ಳುವ ಮನಸ್ಸಾಗುತ್ತಿರಲಿಲ್ಲ. ಬೆಳಿಗ್ಗೆ ಅವನು ರಮೇಶನಿಗೆ ತನ್ನ ಗೆಳೆಯನ ಸಾವಿನ ವಿಚಾರದಿಂದ ಹೊರಬರಲು ಹೇಳಿದ ಮಾತುಗಳು ನೆನಪಾದವು – ‘ಸಮಾಧಾನ ಮಾಡ್ಕೊಳೊ. ಹೀಗೇ ಅರ್ಜೆಂಟ್ ದೇವರು ಬರ್ದಿರಬೇಕಾದ್ರೆ, ನಾವೇನು ಮಾಡಕ್ಕಾಗುತ್ತೆ’. ಆದು ಸಾವಿನ ವಿಚಾರದಲ್ಲಿ ಸಮಾಧಾನ ಮಾಡುವ ಮಾತಾಗಿತ್ತು, ಸರಿ. ಆದರೆ ಈಗ ರಂಜಿತ್ ಕೆಲಸ ಕಳೆದುಕೊಂಡ ವಿಚಾರದಲ್ಲೂ ಅದೇ ಮಾತು ಹೇಳಬಹುದೇ?

ಈ ತರ್ಕದಿಂದ ಹೊರಬಂದು, ‘‘ಏನೋ ಹೀಗಾದ್ರೆ, ನಾವು ದಿನಾ ಆಫೀಸ್‌ಗೆ ಬರಬೇಕಾದ್ರೆಲ್ಲಾ, ಮನೇಲಿ ಹೇಳ್‌ಬರ್ಬೇಕಾ – ‘ನಾನ್ ವಾಪಾಸ್ ಬರ್ಬೇಕಾದ್ರೆ ಕೆಲ್ಸಾ ಕೈಯಲ್ಲಿರ್ತದೋ ಇಲ್ವೋ, ಗೊತ್ತಿಲ್ಲಾ?’ ಅಂತ’’! – ಅವನ ಮಾತಿನಲ್ಲಿ ಆತಂಕವಿತ್ತು. ನಾಳೆ ತನಗೇನು ಕಾದಿದೆಯೋ ಎಂಬಂತೆ!

‘ಕೆಲಸ ಕಳೆದುಕೊಳ್ಳುವುದು ತಾವು ಮಾಡುವ ಕೆಲಸದ ಮೌಲ್ಯಮಾಪನಕ್ಕಿಂತಾ, ಕಂಪನಿಯು ತಮಗೆ ಅವಶ್ಯಕತೆ ಇಲ್ಲದ ಟೀಮನ್ನು ಕರೆದು ಮನೆಗೆ ಕಳಿಸುವುದೇ ಹೆಚ್ಚು. ಇದು ಎಷ್ಟು ಸರಿ? ನಮ್ಮ ಕೆಲಸಕ್ಕೆ ಮನ್ನಣೆ ಇಲ್ಲವೇ? ಇಷ್ಟು ವರ್ಷಗಳಿಂದ ಸಾಫ್ಟ್‌ವೇರ್ ಕಂಪನಿಗಳು, ತಮ್ಮ ಪ್ರತಿಷ್ಠೆ ಹೆಚಿಸಿಕೊಳ್ಳುವ ಪೈಪೋಟಿಯಲ್ಲಿ, ಒಬ್ಬರಿಗಿಂತ ಒಬ್ಬರು ತಮಗೆ ತೋಚಿದಂತೆ ಹೆಚ್ಚು–ಹೆಚ್ಚು ಸಂಬಳವನ್ನು ಕೊಡುತ್ತಾ, ಜನರಲ್ಲಿಯೂ ಸಹ ಅದಕ್ಕೆ ಒಗ್ಗಿ ಜೀವನ ಸಾಗಿಸುವಂತೆ ಮಾಡಿ, ಇದ್ದಕ್ಕಿದ್ದಂತೆ ಕೆಲಸದಿಂದ ತೆಗೆದುಹಾಕಿದರೆ ಹೇಗೆ? ಭಾರತದಲ್ಲಿ ಮೊದಲೆಲ್ಲಾ ಕೆಲಸದ ಮೌಲ್ಯಕ್ಕೆ ತಕ್ಕಂತೆ ಸಂಬಳ, ಸಂಬಳಕ್ಕೆ ತಕ್ಕಂತೆ ಸಂಸಾರ ನಡೆಯುತಿತ್ತು. ಆದರೆ, ಈಗ ಕೆಲಸ ಸಿಕ್ಕಿ ಒಂದು ಸಂಬಳ ಬಂದಿರುವುದಿಲ್ಲ, ಆಗಲೇ ಸಾಲ ಮಾಡಿ ಐಫೋನ್ ತೆಗೆದುಕೊಂಡಿರುತ್ತಾರೆ. ಜನರು ಸಾಲದ ಜೀವನಕ್ಕೆ ಒಗ್ಗಿಕೊಂಡಿರುತ್ತಾರೆ. ಕೆಲಸ ಹೋಯಿತು, ಸಂಬಳ ನಿಂತಿತು ಎಂದರೆ, ಮುಂದಿನ ತಿಂಗಳ ಇ.ಎಂ.ಐ. ಕಟ್ಟಲು ದುಡ್ಡು ಇರುವುದಿಲ್ಲ. ನಮ್ಮ ಸಮಾಜ, ನಮ್ಮ ಸಾಮಾಜಿಕ ಜೀವನ ಎತ್ತ ಸಾಗುತ್ತಿದೆ. ಇಲ್ಲಿ ಯಾರನ್ನು ದೂಷಿಸುವುದು. ಕಾರ್ಪೊರೇಟ್ ಕಂಪನಿಗಳ ನಡತೆಯನ್ನೇ ಅಥವಾ ನಾವು ಬದುಕುತ್ತಿರುವ ಇಂದಿನ ಪರಿಸ್ಥಿತಿಯನ್ನೇ? ಮೊದಲೆಲ್ಲಾ ಇದ್ದಂತೆ ಕುಲಕಸುಬು ಉತ್ತಮ ಇತ್ತೇ? ಇಲ್ಲ ಈ ಕಾರ್ಪೊರೇಟ್ ಕಂಪನಿಗಳ ಕೆಲಸದ ಜೊತೆಗೆ, ಬೇರೆ ಬದುಕುವ ದಾರಿ ಇಟ್ಟುಕೊಂಡಿರಬೇಕೇ?’ – ಎಂದು ಆನಂದ ತನ್ನ ಮನಸಿನಲ್ಲಿಯೇ ತರ್ಕಕ್ಕೆ ಜಾರಿದ.

ಆದರೆ ಒಂದು ಮಾತಂತೂ ಸತ್ಯ. ಅನಿರೀಕ್ಷಿತ ಸಾವು ಬಂದಾಗ ಅದನ್ನು ಒಪ್ಪಿಕೊಳ್ಳುವಂತೆ, ಅನಿರೀಕ್ಷಿತ ಕೆಲಸ ಹೋದಾಗಲೂ ಅದನ್ನು ಒಪ್ಪಿಕೊಳ್ಳಬೇಕು. ಯಾವತ್ತಿಗೂ ಧೃತಿ ಕೆಡಬಾರದು. ‘ದಿಸ್ ಜಾಬ್ ಇಸ್ ನಾಟ್ ದ ಎಂಡ್ ಆಫ್ ದ ವರ್ಲ್ಡ್’ ಎಂದುಕೊಂಡು ಎದ್ದು ನಿಲ್ಲಬೇಕು. ನನಗೆ ಜೀವನದಲ್ಲಿ ಬೇರೆ ಏನೋ ಸಾಧಿಸಲಿಕ್ಕುಂಟು, ಅದಕ್ಕೆ ಹೀಗಾಗಿದೆ ಎಂದುಕೊಂಡು ಹೊಸತನವನ್ನು ಹುಡಕಬೇಕು. ಈ ಭೂಮಿಗೆ ಬಂದಿರುವುದು, ಸಾಧಿಸಿ ತೋರಿಸುವುದಕ್ಕೆ. ‘ಯಾರಿಂದಲೋ ನಾನಲ್ಲ, ನನ್ನಿಂದ ನಾನೆ!’ ಎಂಬಂತೆ ಬಾಳಿ ಬದುಕಬೇಕು.

***

ತಂಪಣ್ಣ– ಕೋಮಣ್ಣ

– ಪೋರ

ತಂಪಣ್ಣ– ಊರಿಗೆಲ್ಲಾ ಅಣ್ಣ, ಆದರೆ ಕೆಂಗಣ್ಣ
ತೆಪರ, ಉಟ್ಟ ಉಡುಗೆಯ ಕಳಚಿದರೆ
ಥೇಟು ಕೆಂಪು ಚಿಂಪಾಂಜಿಯ ತೆರ
ಮಾತು ಸಡಿಲ, ಬುದ್ಧಿ ಸಣ್ಣ

ಬುದ್ಧಿ ಇದ್ದವರನೆಲ್ಲ ಹಿತ್ತಲಲಿ ಹಿಡಿದಿಟ್ಟಿರುವ
ಮಣೆಹಾಕಿ ಕರೆದು ಕೋಳತೊಡಿಸಿ ಕಾಪಿಟ್ಟಿರುವ
ಕುಬೇರ– ಅಷ್ಟ ದಿಕ್ಕುಗಳಲ್ಲೂ ಇವನದೇ ಪ್ರವರ

ಇವನಲ್ಲಿದೆ ವಜ್ರಾಯುಧ
ಅವರಿವರ ಬೆನ್ನಹುರಿ ಮುರಿದು ಮಾಡಿದ ಅಸ್ತ್ರ
ಮನ್ವಂತರದ ಸಹಸ್ರಾಕ್ಷ ಮೆಯ್ಗಣ್ಣನಿಗೆ ಖಯಾಲಿ
ಇದೆ, ಕಂಡವರ ಮನೆಗೆ ನುಗ್ಗುವ ರಹದಾರಿ

ಇವನ ಮಚ್ಚ – ನ್ಯಾತಣ್ಣ, ಹುಟ್ಟುತ್ತಲೇ ಹುಚ್ಚ
ಅಂಡಲೆವ ಪುಂಡ ಭಯಾನಕ ಕಿಚ್ಚ
ಕಾಂಪೌಂಡಿನಾಚೆ ಕಲ್ಲೆಸೆವ ಬಚ್ಚ
ಕೋಮಣ್ಣನ ವಠಾರದ ನಡುವೆ
ಸಣ್ಣ ಓಣಿಯಲಿ ಇವನ ರಕ್ತ– ರಂಗಿನಾಟ
ಎದೆ ಸೀಳಿದರೆ ಇವನದೂ ಅದೇ ರಕ್ತ

ಉದ್ದ ಗಡ್ಡದ, ನಿತ್ಯ ಪ್ರಾರ್ಥಿಸುತ್ತಾ ಕುಳಿತ,
ರಕ್ತ ಬೀಜಾಸುರ ವಂಶಸ್ಥ
ಕೋಮಣ್ಣನ ಬಾವಿ– ಜೀವಜಲ ಸಂಜೀವಿನಿ ಸಮೃದ್ಧ,
ಲಂಪಟ ಕೆಂಪಣ್ಣನ ಕಣ್ಣು ಬಿತ್ತಾ!

ಕೋಮಣ್ಣ–ತಂಪಣ್ಣ, ಬುದ್ದಿ ಅಡವಿಟ್ಟವರು,
ದುಡಿದು ಗಳಿಸಿದವರಲ್ಲ,
ಪೂರ್ವಾರ್ಜಿತ ನೆನ್ನೆಯ ಅನ್ನ ಉಂಡು
ಕೆರೆತ ಹೆಚ್ಚಾಗಿ ಕದನಕ್ಕಿಳಿದವರು

ದನಕರು ಸತ್ತು, ಮಕ್ಕಳು ಅತ್ತು,
ಪ್ರಗತಿ ಬಂಡಿಯ ಗಾಲಿ ಕಳಚಿ ಬಿತ್ತು
ಬಣವೆಗಿಟ್ಟ ಬೆಂಕಿಯಲಿ ಸುತ್ತಲ ಹಟ್ಟಿ ಬೂದಿ ಬೂದಿ
ದಾರಿಹೋಕರ ಬದುಕು ಮೂರಾಬಟ್ಟೆ –
ಎದೆಯೊಳಗೆ ಹಗೆ ತುಂಬಿ ಗಾಳಿಯಲಿ ವಿಷ ತುಂಬಿ
ಜೀತದಾಳುಗಳ ಹೆಣ ಕಣಿವೆಯಲಿ ತುಂಬಿ ತುಂಬಿ

ಏಸು ಹೇಳಿದರೇನು ಫಲ, ಎಷ್ಟು ಪ್ರಾರ್ಥಿಸಿದರೇನು ಫಲ
ಬುದ್ಧಿ ಮೊಣಕಾಲ ಕೆಳಗೆ
ಸಾರಿಗೆ ದರ ದುಪ್ಪಟ್ಟು ಹಸಿದ ಹೊಟ್ಟೆಯ ದುಡಿತಕೆ ಕುತ್ತು
ತತ್ತರಿಸಿದೆ ಭುವನ ಬವರದ ಉರಿಗೆ ಸುಟ್ಟು
ಸಂಭವಾಮಿ ಯುಗೇ ಯುಗೇ ಎಂದು
ಹಿಂದು–ಳಿದ ತಟಸ್ಥವೇ ಗಸ್ತು

ಬರುವವನು ಕಲಿಯೇ?
ಎಲೆಯ ಮೇಲ್ ತೇಲಿ ಬರುವ ಕೃಷ್ಣನೆ?
ಯಾರಿಗೂ ತಿಳಿಯದಲ್ಲ!

***

ಗುಳೆ ಎದ್ದ ಕಿಟ್ಟಪ್ಪ

– ಉಷಾರಾಣಿ ಟಿ.ಆರ್.

ಕಿಟ್ಟಪ್ಪ ಗುಳೆ ಎದ್ದು ಅವರವ್ವನನ್ನು ಕರಕೊಂಡು ಮೈಸೂರಿಗೆ ಹೋದನಂತೆ"

ವಿಷಯ ಹಳ್ಳಿಯಲ್ಲಿ ಕಾಳ್ಗಿಚ್ಚಿನಂತೆ ಹರಡಿತು.

ಸೀದಾ ಸದಾ ಮನುಷ್ಯ. ಇಡೀ ಪ್ರಪಂಚವನ್ನೇ ವಸುದೈವ ಕುಟುಂಬಕಮ್ ಎಂದುಕೊಂಡವನು. ಮೈಸೂರಿನಿಂದ ಇಪ್ಪತ್ತು ಕಿಲೋ ಮೀಟರ್ ದೂರದಲ್ಲಿ ಅವರಪ್ಪ ಬಿಟ್ಟು ಹೋಗಿದ್ದ ನಲವತ್ತೆಕೆರೆ ಜಾಗದಲ್ಲಿ ಭತ್ತ, ರಾಗಿ, ಕಬ್ಬು, ಬಾಳೆ, ತೆಂಗು, ಮಧ್ಯಂತರ ಬೆಳೆಗಳು, ಹೀಗೆ ಆರಂಭ ಮಾಡಿಕೊಂಡು ಸುಖವಾಗಿದ್ದ. ಓಬೀರಾಯನ ಕಾಲದ ಒಂದು ಸೆಕೆಂಡ್ ಹ್ಯಾಂಡ್ ಮಾರುತಿ ವ್ಯಾನ್ ಓಡಿಸಿಕೊಂಡು ಇಡೀ ಹಳ್ಳಿ ಏನು ಮೈಸೂರಿನವರೆಗೂ ಹೊರಟುಬಿಡುತ್ತಿದ್ದ. ಅವನ ಪರೋಪಕಾರದ ಬುದ್ಧಿಗೆ ಸಾಟಿಯೇ ಇಲ್ಲ. ಅವನಮ್ಮ ಅವನಿಗೆ ಮದುವೆ ಮಾಡಲು ತಿಪ್ಪರಲಾಗ ಹಾಕಿದರೂ ಕಿಟ್ಟಪ್ಪ ಅದಕ್ಕೊಪ್ಪಲಿಲ್ಲ. ಹಾಗೆಯೇ ನಲವತ್ತೈದು ವಸಂತ ಗಳನ್ನು ಕಳೆದುಬಿಟ್ಟಿದ್ದ. ಊರದೇವಿ ಲಕ್ಕಮ್ಮನ ಜಾತ್ರೆಯಲ್ಲಿ ಅವನದೇ ಪಾರುಪತ್ಯೆ. ತನ್ನ ತೋಟದಿಂದಲೇ ತೋರಣಕ್ಕೆ, ಪ್ರಸಾದಕ್ಕೆ, ಸಂತರ್ಪಣೆಗೆ ತೆಂಗಿನ ಗರಿ, ಬಾಳೆ, ಧವಸ, ಧಾನ್ಯ ಸರಬರಾಜು ಮಾಡುತ್ತಿದ್ದ. ಕಿಟ್ಟಪ್ಪ ಎಂದರೆ ಒಂದು ರೀತಿಯ ಖದರು ಊರಿನಲ್ಲಿ. ಅವನಿಗೆ ಶತ್ರುಗಳೆ ಇಲ್ಲವೆಂದಲ್ಲ. ಅವನ ಜನಪ್ರಿಯತೆ ನೋಡಿ ಅಲ್ಲಲ್ಲಿ ಕೀಳು ದರ್ಜೆಯ ರಾಜಕೀಯ ಮಾಡುತ್ತಿದ್ದರು. ಆದರೆ ಕಿಟ್ಟಪ್ಪ ಇದಕ್ಕೆಲ್ಲ ತಲೆ ಕೆಡಿಸಿಕೊಳ್ಳುವವನಲ್ಲ.

ತಮ್ಮ ಪಕ್ಷದಿಂದ ನಿಂತು ಸೋತ ರಾಜಪ್ಪನ ತಲೆಯಲ್ಲಿ ಒಂದು ಹುಳು ಹೊಕ್ಕಿತು. ರಾಜಕೀಯ ಪುಡಾರಿ ರಾಜಪ್ಪ ಊರಿನಲ್ಲಿ ಚಿಲ್ಲರೆ ಕೆಲಸಗಳನ್ನು ಮಾಡಿಕೊಂಡು ಕುಖ್ಯಾತಿ ಗಳಿಸಿದ್ದ. ಈ ಸಲದ ಚುನಾವಣೆಯಲ್ಲಿ ನಮ್ಮ ಕಿಟ್ಟಪ್ಪನನ್ನು ನಿಲ್ಲಿಸಿಬಿಟ್ಟರೆ ತಮ್ಮ ಪಕ್ಷಕ್ಕೆ ಜಯ ಗ್ಯಾರಂಟಿ ಎಂದು ತಲೆಗೆ ಬಂದದ್ದೇ ತಡ, ಹೈ ಕಮ್ಯಾಂಡ್‌ವರೆಗೂ ಕಿಟ್ಟಪ್ಪನ ವಿಷಯ ಹೋದಾಗ ಸ್ವತ: ಅವರೇ ಬಂದು ಅವನ ಜನಪ್ರಿಯತೆಯನ್ನು ಕಣ್ಣಾರೆ ಕಂಡು ಟಿಕೇಟು ಕೊಟ್ಟರೆ ಇವನಿಗೇ ಕೊಡುವುದು ಎಂದು ನಿರ್ಧರಿಸಿಬಿಟ್ಟಿದ್ದರು. ಕಿಟ್ಟಪ್ಪ ಸಾಚಾ ಮನುಷ್ಯ. ಎಲ್ಲಾದಕ್ಕೂ ಸೈ ಅನ್ನುತ್ತಾನೆ. ಅವನ ಹೆಸರಿನಲ್ಲಿ ತಾನೇ ರಾಜ್ಯಭಾರ ಮಾಡಬಹುದು ಎಂಬುದು ರಾಜಪ್ಪನ ಲೆಕ್ಕಾಚಾರ. ಹೆಂಗಸರ ಓಟಂತೂ ಅವನಿಗೆ ಬೀಳುವುದರಲ್ಲಿ ಅನುಮಾನವೇ ಇಲ್ಲ. ಸರೋಜಮ್ಮನ ಮಗಳ ಮದುವೆ, ಗಿರಿಜಮ್ಮನ ಮಗಳು ಮೈನೆರೆದಳು, ರಾಮಕ್ಕನ ಸೊಸೆಯ ಸೀಮಂತವಾದರೂ ಇವನದೇ ಪಾರುಪತ್ಯೆ. ಕಿಟ್ಟಪ್ಪನಿದ್ದನೆಂದರೆ ನೂರು ಆನೆ ಬಲ ಇದ್ದ ಹಾಗೆ ಊರಿನಲ್ಲಿ. ಕಷ್ಟ ಎಂದರೆ ಸರಿ, ಕಿಟ್ಟಪ್ಪನ ಮಾರುತಿ ವ್ಯಾನು ಶ್ರೀರಾಮನ ಮುಂದೆ ನಿಲ್ಲುವ ಮಾರುತಿಯ ಹಾಗೆ ಅವರ ಮನೆಯ ಮುಂದೆ ನಿಂತುಬಿಡುತ್ತಿತ್ತು. ಕಿಟ್ಟಪ್ಪನನ್ನು ನೇರವಾಗಿ ಕೇಳಿದರೆ ಗಿಟ್ಟುವುದಿಲ್ಲ ಎಂದು ರಾಜಪ್ಪ ತನ್ನ ತೋಟದ ರೋಜಾ, ಮಲ್ಲಿಗೆ, ಸೇವಂತಿಗೆ ಹೂವುಗಳು, ಸಣ್ಣಕ್ಕಿ, ಗೋಧಿ, ಎಲ್ಲವನ್ನೂ ತೆಗೆದುಕೊಂಡು ಹೋಗಿ ಕಿಟ್ಟಪ್ಪನಿಲ್ಲದಿದ್ದಾಗ ಅವನ ತಾಯಿ ಪಂಕಜಮ್ಮನ ಚರಣಗಳಿಗೆ ಒಪ್ಪಿಸಿ ಮೆಲ್ಲಗೆ ಈ ಚುನಾವಣೆಯ ವಿಷಯ ತೆಗೆದ. ಹೇಗಾದರೂ ಮಾಡಿ ಮಗನನ್ನು ಒಪ್ಪಿಸುವಂತೆ ದುಂಬಾಲು ಬಿದ್ದ.

"ಅಯ್ಯೋ ನಮ್ಮ ಕಿಟ್ಟ, ಪರೋಪಕಾರಿ ಪಾಪಣ್ಣಾ ಅವನಿಗೆ ತನ್ನ ಮನೆ, ತನ್ನ ಸಂಸಾರ ಏನೂ ಬೇಕಿಲ್ಲ. ಊರಿನ ಉಸಾಬರಿ ನೋಡಿಕೊಂಡು ಕಾಲ ಹಾಕುತ್ತಿದ್ದಾನೆ. ಈ ಮನೆಗೊಬ್ಬ ವಾರಸುದಾರನಿಲ್ಲದೆ ನಾನು ಕಣ್ಣುಮುಚ್ಚಬೇಕು" ಎಂದು ಪಂಕಜಮ್ಮನವರು ಒಂದೇ ಕಣ್ಣಲ್ಲಿ ತಮ್ಮ ಅಳಲನ್ನು ತೋಡಿಕೊಂಡರು. "ಈ ಹೊಸ್ತಿಲಿಗೆ ಸೇರು ಒದೆಯೋ ಹೆಣ್ಣು ಮಗಳು ಹುಟ್ಟೇ ಇಲ್ಲವೋ ಏನೋ ಎಂದು ಅವಲತ್ತುಕೊಂಡರು. ರಾಜಪ್ಪನಿಗೆ ಅವರು ಮಾತು ಕೇಳುವುದು ಬೇಕಿಲ್ಲ. ಹೇಗಾದರೂ ಕಿಟ್ಟಪ್ಪ ಒಪ್ಪಬೇಕು ಅಷ್ಟೇ. "ಆಯ್ತಪ್ಪ ಅವ್ನು ಬರುತ್ಲೂ ಹೇಳ್ತೀನಿ. ಹಂಗೆ ಅವನಿಗೆ ಒಂದು ಮದುವೆ ಮಾಡಿಸಬೇಕು ಅದಕ್ಕೆ ನೀವು ಪ್ರಯತ್ನಪಡಬೇಕು ನೀವು ಒಪ್ಪಿಸಬೇಕು" ಎಂದು ಪಂಕಜಮ್ಮನವರು ರಾಜಪ್ಪನಿಗೇ ತಿರುಗೇಟು ಕೊಟ್ಟರು. "ಓಹೋಹೋ ಅದಕ್ಕೇನಂತೆ, ಈ ಸಲ ನಮ್ಮ ಕಿಟ್ಟಪ್ಪ ಚುನಾವಣೇಲಿ ಗೆಲ್ಲಲಿ, ನಾ ಮುಂದು ತಾ ಮುಂದು ಅಂತ ನಿಮ್ಮ ಮನೆ ಸೇರು

ಒದೆಯೋಕೆ ತಯಾರಾಗ್ತಾರೆ'' ಎಂದು ದೇಶಾವರಿ ನಗೆ ನಕ್ಕಿದ್ದ ರಾಜಪ್ಪ. ಪಂಕಜಮ್ಮನವರು ಮಗನ ಮುಂದೆ ಗಿಳಿಪಾಠ ಒಪ್ಪಿಸಿದ್ದೂ ಆಯಿತು ಅವನು ಸಾಧ್ಯವೇ ಇಲ್ಲವೆಂದು ಮನೆಯಿಂದ ಹೊರಗೆ ಜಗುಲಿಯ ಮೇಲೆ ಮುಖ ಊದಿಸಿಕೊಂಡು ಕುಳಿತಿದ್ದೂ ಆಯಿತು. ರಾಜಪ್ಪನೇ ಸ್ವತಃ ಕಿಟ್ಟಪ್ಪನನ್ನು ಕಂಡು ನಾನಾ ರೀತಿಯಲ್ಲಿ ಹೇಳಿ ನೋಡಿದ. ಏನು ಹೇಳಿದರೂ ಕಿಟ್ಟಪ್ಪ ಮಾತ್ರ, ''ನಿಮಗೆ ದೊಡ್ಡ ನಮಸ್ಕಾರ ಕಣ್ರಪ್ಪೋ, ನಂಗೆ ಈ ರಾಜಕೀಯ ಗೀಜಕೀಯ ಎಲ್ಲಾ ಸರಿಬರಲ್ಲ. ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಡಿ'' ಎಂದು ಮೈಗೆ ಎಣ್ಣೆ ಹಚ್ಚಿಕೊಂಡವನಂತೆ ಜಾರಿಕೊಂಡುಬಿಟ್ಟ.

ಇದೆಲ್ಲಾ ನಡೆದು ತಿಂಗಳಾಗಿಲ್ಲ ಕಿಟ್ಟಪ್ಪನಿಗೆ ಆಕಾಶವೇ ಕಳಚಿ ತಲೆಮೇಲೆ ಬಿದ್ದ ಅನುಭವ. ಪಂಚಾಯಿತಿ ಕಟ್ಟೆಯಲ್ಲಿ ಕೆಂಪಿ ದೂರನ್ನಿತ್ತಿದ್ದಾಳೆ, ಕಿಟ್ಟಪ್ಪನಿಂದ ತಾನು ಬಸುರಿಯಾಗಿದ್ದೇನೆ ಎಂದು. ಪಂಕಜಮ್ಮನವರು ಇರುವ ದೇವರಿಗೆಲ್ಲಾ ಹರಕೆ ಹೊತ್ತು ಬೋರಾಡಿದರು. ಕಿಟ್ಟಪ್ಪ ಅಂತಹವನಲ್ಲ ಎನ್ನುವುದು ಊರ ಹೆಂಗಸರಿಗೆಲ್ಲಾ ತಿಳಿದಿದೆ. ವಯಸ್ಸಿನಲ್ಲಿದ್ದಾಗಲೇ ಅವನು ಆಟವಾಡಿದವನಲ್ಲ, ಇನ್ನು ನಲವತ್ತೈದರ ಮಧ್ಯಪ್ರಾಯದಲ್ಲಿ ಊರಿಗೆಲ್ಲಾ ಪದ್ಮಾವತಿ ಕೆಂಪಿಯನ್ನು ಬಸುರಿ ಮಾಡಿದನೆಂದರೆ ನಂಬಲು ಸಾಧ್ಯವೇ? ಅದುವರೆಗೂ ಊರ ಹೆಣ್ಣುಮಕ್ಕಳನ್ನೆಲ್ಲಾ ಅಕ್ಕ, ತಂಗಿ, ಅಮ್ಮ ಎಂದು ಕರೆದು ಅವರಿಗೆ ಬೇಕಾದ ಹಾಗೆ ಸಹಾಯ ಮಾಡುತ್ತಿದ್ದ ಕಿಟ್ಟಪ್ಪನಿಗೆ ಹೆಂಗಸರಿಗೆ ಸಹಾಯ ಮಾಡುವುದಕ್ಕೆ ಸ್ವಲ್ಪ ಹಿಂಜರಿಕೆಯಾಯಿತು. ''ನನ್ನ ಮಗನಿಗೆ ಏನು ಗ್ರಹಚಾರವಪ್ಪ, ಚೌತಿ ಚಂದ್ರನ ದರ್ಶನ ಮಾಡಿದನೋ ಏನೋ ಎಂದು ಅವನಮ್ಮ ಕಂಡಕಂಡವರ ಮುಂದೆಲ್ಲಾ ಹೇಳಿಕೊಂಡು ತಿರುಗುತ್ತಿದ್ದರೆ, ''ಎಷ್ಟಾದರೂ ಉಪ್ಪು, ಖಾರ ತಿನ್ನುವ ಮೈಯ್ಯಲ್ಲವೇ? ಆಸೆ ಯಾರನ್ನು ಬಿಟ್ಟಿದೆ ಒಂದು ಸರ್ತಿಯಾದರೂ ಕಿಟ್ಟಪ್ಪನಿಗೆ ಮನಸ್ಸಾಗುವುದಿಲ್ಲವೇ? ಸುಲಭವಾಗಿ ಸಿಗುವುದೇ ಕಸುಬುದಾರಳಾದ ಕೆಂಪಿ.'' ಎಂದು ಮಾತನಾಡಿಕೊಳ್ಳುವವರಿಗೂ ಕಡಿಮೆ ಇರಲಿಲ್ಲ.

ಪಂಚರೆಲ್ಲ ಒಗ್ಗೂಡಿ ತೀರ್ಮಾನ ಹೇಳುವ ದಿನ ಬಂದೇಬಿಟ್ಟಿತು. ಪಂಚರ ಮುಂದೆ ಕೆಂಪಿ ಪರಿಪರಿಯಾಗಿ ಗೋಳಾಡಿದಳು. ಕಿಟ್ಟಪ್ಪನಿಂದ ತನಗೆ ಅನ್ಯಾಯ ಆಗಿದೆ, ತನಗೆ ನ್ಯಾಯ ಬೇಕು ಎಂದು ಕೈ ಮುಗಿದು ಕೇಳಿಕೊಂಡಳು. ಊರಿಗೆ ಊರೇ ಸೇರಿತ್ತು ಆ ದಿನ. ಪಂಕಜಮ್ಮನವರು ಮಾತ್ರ ದೇವರ ಸಾನಿಧ್ಯ ಬಿಟ್ಟು ಹೊರ ಬರುವುದಿಲ್ಲ, ನನ್ನ ಮಗ ನಿರಪರಾಧಿ ಎಂದು ದೇವರ ಪಾದ ಹಿಡಿದು ಕುಳಿತುಬಿಟ್ಟಿದ್ದರು ತಮ್ಮ ಮನೆಯಲ್ಲಿ. ''ಕೆಂಪಿ, ನೀನು ಹೇಳುವುದೆಲ್ಲಾ ಮುಗಿದಿದ್ದರೆ ಕಿಟ್ಟಪ್ಪನಿಗೆ ಅವಕಾಶ. ಅವನು ಮಾತಾಡುತ್ತಾನೆ. ನೀನು ಸುಮ್ಮನಿರಬೇಕು'' ಎಂದಿತು ಪಂಚಾಯಿತಿ. ''ಹೇಳಣ್ಣಾ ಕಿಟ್ಟಪ್ಪ, ಕೆಂಪಿಗೆ ನಿನ್ನಿಂದ ಅನ್ಯಾಯವಾಗಿದೆ ಅದಕ್ಕೆ ನೀನು ಏನು ಹೇಳುತ್ತೀಯ?''

''ಪಂಚರಿಗೆ ನಮಸ್ಕಾರ ಮಾಡುತ್ತೇನೆ. ಕಾಯಾ ವಾಚಾ ಮನಸಾ ನಾನು ನಿಜವನ್ನೇ ಹೇಳುತ್ತಿದ್ದೇನೆ. ನನಗೂ ಈ ಪ್ರಸಂಗಕ್ಕೂ ಯಾವುದೇ ಸಂಬಂಧವಿಲ್ಲ. ಇದೇ ಕೆಂಪಿ ಹಿಂದೊಮ್ಮೆ ತೀವ್ರ ಖಾಯಿಲೆ ಎಂದು ಆಸ್ಪತ್ರೆಯ ಹಣ ಕಟ್ಟಲಾರದೇ ಹೊರಗೆ ಒದ್ದಾಡುತ್ತಿದ್ದಾಗ ನಮ್ಮ ತಾಯಿಗೆ ಜ್ವರವೆಂದು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ಇವಳ ಸ್ಥಿತಿ ನೋಡಲಾರದೆ ಇವಳ ಆಸ್ಪತ್ರೆಯ ಖರ್ಚು ನಾನೇ ಕೊಟ್ಟು ನನ್ನ ವ್ಯಾನಿನಲ್ಲೇ ಇವಳನ್ನು ಹಳ್ಳಿಗೆ ತಂದುಬಿಟ್ಟಿದ್ದೆ. ಬೇಕಾದರೆ ನೀವೇ ಕೇಳಿ.'' ಎಂದು ಹೇಳಿದವನೆ, ಕೆಂಪಿಯ ಕಾಲಿಗೆ ಬಿದ್ದು ''ಅವ್ವಾ, ನಾನು ಲಕ್ಕವ್ವನ ಪೂಜೆ ನಿಷ್ಠೆಯಿಂದ ಮಾಡಿಕೊಂಡು ಬಂದಿದೀನಿ. ನಿನ್ನಲ್ಲೂ ಅವಳನ್ನೇ ಕಾಣುತ್ತೇನೆ. ನಿನ್ನನ್ನು ತಂಗೆವ್ವಾ ಎಂದಿದ್ದೇ ಆ ದಿನ. ಈ ದಿನವೂ ಅದೇ ಹೇಳುವೆ. ಈಗ ಹೇಳವ್ವಾ ನಿನ್ನ ಬಸುರಿಗೆ ನಾನು ಕಾರಣಾನಾ. ನಿನ್ನ ಬಾಯಲ್ಲಿ ಆ ಲಕ್ಕವ್ವಾ ನಿಜವನ್ನೇ ನುಡಿಸುವಳೆಂಬ ನಂಬಿಕೆ ನನಗಿದೆ. ನೀನು ನಿಜ ಹೇಳಿದರೂ ಸುಳ್ಳು ಹೇಳಿದರೂ ನಾನು ಇನ್ನೂ ಈ ಊರಲ್ಲಿ ಇರೋನಲ್ಲ. ಮೈಸೂರಿಗೆ ಹೊರಟುಬಿಡ್ತೀನಿ. ಹೇಳವ್ವಾ..." ಎಂದಾಗ ಕೆಂಪಿ ಥರಥರ ನಡುಗಿಬಿಟ್ಟಳು. ಮೋಸ ಮಾಡದ ಅಮಾಯಕನನ್ನು ತಾನೆಂತಹ ಕಷ್ಟಕ್ಕೆ ಸಿಲುಕಿಸಿದ್ದೇನೆ ಎಂದು ಅವಳ ಪಾಪ ಪ್ರಜ್ಞೆ ಕಾಡಿತು.

''ಅಯ್ಯೋ ಯೋಳಿ ಬುದ್ದಿ. ನಾನು ಪಾಪಿ. ಯಾರ್ಯಾರದೋ ಮಾತು ಕಟ್ಟಿಕೊಂಡು ನನ್ನ ಬಾಯಿ ಈ ಹೊಲಸು ಮಾತಾಡಿತು. ನನ್ನ ಮೈ ಚರ್ಮ ಸುಲಿದು ನಿಮಗೆ ಮೆಟ್ಟು ಮಾಡಿ ಕೊಟ್ಟರೂ ನನ್ನ ಪಾಪ ತೀರದು'' ಎಂದವಳೇ ಪಂಚಾಯಿತಿಗೆ ಕೈ ಮುಗಿದು ತನ್ನ ದೂರು ವಾಪಸ್ಸು ತೆಗೆದುಕೊಳ್ಳುವುದಾಗಿ ತಿಳಿಸಿದಳು. ಕಾಲು ಮೇಲೆ ಕಾಲು ಹಾಕಿಕೊಂಡು ಚಮಚಾಗಳ ಮುಂದೆ ಕುಳಿತಿದ್ದ

ರಾಜಪ್ಪನಿಗೆ ಕೆಂಪಿಯ ಮೇಲೆ ನಖಶಿಖಾಂತ ಉರಿದುಹೋಯಿತು. "ಸರಿಯಾಗಿ ಅವಳಿಗೆ ಹೇಳಿಕೊಡುವುದಕ್ಕೆ ಏನ್ರೋ ಬಂದಿತ್ತು ರೋಗ ನಿಮಗೆ? ಪೊಗರದಸ್ತಾಗಿ ತಿಂತೀರ ಒಂದು ಕೆಲ್ಸ ಹೇಳಿದ್ರೆ ನೆಟ್ಟಗೆ ಮಾಡೋಕ್ಕೆ ಆಗಲ್ಲ ನಿಮ್ಗೆ. ಐರ್ಲಿ ಆ ಕೆಂಪಿಗೆ ಮಾಡ್ತೀನಿ, ಅದು ಹೇಗೆ ಊರಲ್ಲಿ ಇರ್ತಾಳೋ ನೋಡ್ತೀನಿ." ಎಂದು ಹಲ್ಲು ಕಡಿಯುತ್ತಾ ಹೊರಟ. ವಿನಾಕಾರಣ ಕಿಟ್ಟಪ್ಪನ ಮೇಲೆ ದೂರು ಕೊಟ್ಟ ಕೆಂಪಿಗೆ ಯಾವ ಶಿಕ್ಷೆ ಕೊಡಬೇಕು ಎಂದು ಕಿಟ್ಟಪ್ಪನನ್ನೇ ಪಂಚರು ಕೇಳಿದಾಗ, "ಅವಳಿಗಲ್ಲ ಬುದ್ಧಿ, ಶಿಕ್ಷೆ ಕೊಡೋದಾದರೆ ಇವಳಿಗೆ ಹೇಳಿಕೊಟ್ಟಿದ್ದಾರಲ್ಲ ಅವರಿಗೆ ಕೊಡಬೇಕು." ಎಂದು ಜನಸಮೂಹದಲ್ಲಿ ಕೂಗಿದರು.

ಕಿಟ್ಟಪ್ಪ ನಿರಪರಾಧಿ ಎಂದು ಸಾಬೀತಾದ ತಕ್ಷಣ ಹಳ್ಳಿಯ ಜನ ಕೈ ಚಪ್ಪಾಳೆ ತಟ್ಟಿ "ಕಿಟ್ಟಪ್ಪನಿಗೆ ಜಯವಾಗಲಿ" ಎಂದು ಕೂಗಿದರು. "ಪಾಪ ಇವಳಿಗೇನು ಶಿಕ್ಷೆ ಕೊಟ್ಟೀರಾ ಬುದ್ಧಿ, ಇವಳನ್ನು ಬಿಟ್ಟುಬಿಡಿ. ಇವಳ ಪರವಾಗಿ ದಂಡ ನಾನು ಕಟ್ತೀನಿ" ಎಂದಾಗ ಕೆಂಪಿ ಮತ್ತಷ್ಟು ಮುಸಿ ಮುಸಿ ಅತ್ತಳು. ಪಂಚರು ಮೂಗಿನ ಮೇಲೆ ಬೆರಳಿಟ್ಟುಕೊಂಡರು.

ಪಂಚರ ಮುಂದೆ ಹೇಳಿದ ಹಾಗೆ ಕಿಟ್ಟಪ್ಪ ತನ್ನ ತಾಯಿಯನ್ನೂ ಕರೆದುಕೊಂಡು ಮೈಸೂರಿನತ್ತ ಮುಖ ಮಾಡಿದ. "ಬೇಡಾ ಅಣ್ಣ ಬಿಟ್ಟು ಹೋಗಬೇಡ" ಎಂದು ಹಳ್ಳಿಗೆ ಹಳ್ಳಿಯೇ ಎಷ್ಟು ಅಂಗಲಾಚಿದರೂ ಕಿಟ್ಟಪ್ಪ ಕೇಳಲಿಲ್ಲ. "ಒಂದು ಸಲ ಮಸಿ ಬಳಿದುಕೊಂಡಮೇಲೆ ಅಲ್ಲಿರಬಾರದು" ಎಂದು ತನ್ನ ಮಾರುತಿ ವ್ಯಾನನ್ನು ಮೈಸೂರಿನತ್ತ ತಿರುಗಿಸಿಯೇಬಿಟ್ಟ.

***

ನೆನಪೋತ್ಸವ

– ಪೂರ್ಣಿಮ ಭಗವಾನ್

"ನೀನು ಅಪ್ಪನ ಮಗಳೇ" ಎನ್ನುವ ಅಕ್ಕರೆಯ ದನಿಯನ್ನು ಕೇಳಿಸಿಕೊಂಡ ರಾಧಾಳಿಗೆ ಮೇಷ್ಟ್ರು ಇದೆಂತಹ ಪ್ರಶ್ನೆ ಕೇಳುತ್ತಿದ್ದಾರೆ, ಯಾರನ್ನು ಕೇಳುತ್ತಿದ್ದಾರೆ ಎಂದು ಅರ್ಥವಾಗದೇ ತರಗತಿಯಲ್ಲಿ ಸುತ್ತಲೂ ಕತ್ತು ತಿರುಗಿಸಿ ನೋಡಿದಳು. ತರಗತಿಯಲ್ಲಿದ್ದ ಎಲ್ಲ ಮಕ್ಕಳೂ ತನ್ನತ್ತಲೇ ನೋಡುತ್ತಾ ಇರುವಂತೆ ಭಾಸವಾಯಿತು. ಮೇಷ್ಟ್ರು ಮತ್ತೊಮ್ಮೆ ಅದೇ ಮಾತನ್ನು ಹೇಳಿದಾಗ ತನ್ನನ್ನೇ ಉದ್ದೇಶಿಸಿ ಪ್ರಶ್ನಿಸಿದ್ದು ಎಂಬ ಅರಿವಾಯಿತು. ಕಕ್ಕಾಬಿಕ್ಕಿಯಾಗಿ ಮಾಸ್ತರರನ್ನೇ ನೋಡುತ್ತಾ ನಿಂತಿದ್ದಳು. ಮಾಸ್ತರರು "ನೀನು ಭಗವಂತನ ಮಗಳೇ" ಎಂದಾಗ ಹೌದೆಂದು ತಲೆಯಾಡಿಸಿ ಸುಮ್ಮನೆ ಕುಳಿತುಬಿಟ್ಟಳು.

ರಾಧಾಳ ಮನಸ್ಸಿನಲ್ಲಿ "ಎಲ್ಲಾ ಮಕ್ಕಳೂ ಅಪ್ಪ ಅಮ್ಮನ ಹಾಗೂ ಭಗವಂತನ ಮಕ್ಕಳೇ ತಾನೇ" ಎನ್ನುವ ವಿಷಯದ ಮಂಥನ ನಡೆಯುತ್ತಿತ್ತು. ಶಾಲೆಯಿಂದ ಮನೆಗೆ ಹಿಂದಿರುಗಿದ ನಂತರ ರಾಧಾಳ ವಿವರಣೆ ಕೇಳಿ ಮನೆಯಲ್ಲಿ ಎಲ್ಲರೂ ಬಿದ್ದು ಬಿದ್ದು ನಗಲಾರಂಭಿಸಿದರು. ನಂತರವಷ್ಟೇ ತಿಳಿಯಿತು ರಾಧಾಳಿಗೆ, ತನ್ನ ಅಪ್ಪ ಊರಿನವರೆಲ್ಲರ ಬಾಯಲ್ಲಿಯೂ ಅಪ್ಪನೇ ಎಂದು.

ಆಗಿನ್ನೂ ಬೇಸಿಗೆ ರಜೆಯ ಆರಂಭ. ಅಜ್ಜಿ, ತಾತನ ಹಳ್ಳಿಗೆ ರಜೆಯ ಮಜ ಅನುಭವಿಸಲು ಹೋಗುತ್ತಿದ್ದ ಸುಸಮಯ. ರಾಧಾ ಏಳನೆಯ ತರಗತಿಯ ಪರೀಕ್ಷೆ ಮುಗಿಸಿ ಎಂಟನೆಯ ತರಗತಿಗೆ ಪ್ರವೇಶ ಪಡೆಯಬೇಕಿತ್ತು. ತನಗಿಂತಲೂ ಎರಡು ವರ್ಷ ಹಿರಿಯಳಾದ ಸೋದರತ್ತೆ ಮತ್ತು ಗೆಳತಿಯರ ಜೊತೆ ಎರಡು ಮೈಲಿ ದೂರದಲ್ಲಿದ್ದ ಪ್ರೌಢಶಾಲೆಗೆ ನಡೆದುಕೊಂಡು ಹೋಗುವ ಸಂಭ್ರಮ ರಾಧಾಳಿಗೆ. ರಸ್ತೆಯ ಇಕ್ಕೆಲಗಳಲ್ಲಿ ಇದ್ದ ಮಿಡಿಮಾವು, ಜೀರಿಗೆ ಮಾವು, ಹುಣಿಸೆ, ನೇರಳೆ, ಪೇರಳೆ ಇನ್ನೂ ಮುಂತಾದ ದೊಡ್ಡದೊಡ್ಡ ಮರಗಳ ಕೆಳಗೆ ಕುಣಿದುಕೊಂಡು ಶಾಲೆಗೆ ಹೋಗುತ್ತಿದ್ದ ದಿನಮಾನಗಳಲ್ಲಿ ವಾಹನ ಸಂಚಾರ ಅಷ್ಟಾಗಿ ಇರಲಿಲ್ಲ. ಆಗೊಮ್ಮೆ ಈಗೊಮ್ಮೆ ಕಂಡುಬರುತ್ತಿದ್ದ ಖಾಸಗಿ ಬಸ್ಸುಗಳು ಸಮಯಕ್ಕೆ ಸರಿಯಾಗಿ ಸಂಚರಿಸುತ್ತಿದ್ದ ಕಾಲವದು. ಎಲ್ಲಾ ಮಕ್ಕಳೂ ಗುಂಪುಗುಂಪಾಗಿ ದಾರಿಯುದ್ದಕ್ಕೂ ಮಾತನಾಡುತ್ತಾ ಶಾಲೆ ತಲುಪಿದ್ದು ಗೊತ್ತಾಗುತ್ತಲೇ ಇರಲಿಲ್ಲ. ಅಪಘಾತಗಳ ಭಯವಂತೂ ಇರಲೇ ಇಲ್ಲ.

ಸುಮತಿ ಹತ್ತನೆಯ ತರಗತಿಯಲ್ಲಿ ಓದುತ್ತಿದ್ದರೆ ರಾಧಾ ಎಂಟನೆಯ ತರಗತಿಯಲ್ಲಿ ಓದುತ್ತಿದ್ದಳು. ರಾಧಾ ಬೇರೆ ಗೆಳತಿಯರ ಜೊತೆ ಎಂಟನೆಯ ತರಗತಿಗೆ ಹೋಗಿ ಕುಳಿತಿದ್ದಳು. ಪಾಠ ಪ್ರವಚನಗಳನ್ನು ತಪ್ಪಿಸಿಕೊಳ್ಳುವುದಿಲ್ಲ ಎನ್ನುವ ನೆಪ ಹೇಳಿ ಮನೆಯಲ್ಲಿ ಒಪ್ಪಿಗೆ ಪಡೆದು ಶಾಲೆಗೆ ಹೋಗಿ ಕುಳಿತಿದ್ದಳವಳು. ಶಾಲೆಯಿಂದ ಮನೆಗೆ ಬಂದ ತಕ್ಷಣ ಶಾಲೆಗೆ ಹೋಗುವಾಗ ಧರಿಸಿದ್ದ ವಸ್ತ್ರಗಳನ್ನು ಮನೆಯ ಹಿಂಭಾಗದ ಕೊಠಡಿಯ ಮೂಲೆಯಲ್ಲಿ ಹಾಕಿ, ಬಟ್ಟೆ ಬದಲಾಯಿಸಿಕೊಳ್ಳುವ ಸಂಪ್ರದಾಯ. ಮರುದಿನ ಹಿರಿಯರು ಮನೆಯ ಹಿಂಭಾಗದಲ್ಲಿದ್ದ ಹೊಳೆಯಲ್ಲಿ ಬಟ್ಟೆ ಒಗೆದುಕೊಂಡು ಬರುತ್ತಿದ್ದರು. ಕುಡಿಯುವ ನೀರನ್ನೂ ಕಾವೇರಿ ನದಿಯಿಂದಲೇ ತೆಗೆದುಕೊಂಡು ಬರುತ್ತಿದ್ದರು. ದೊಡ್ಡವರು ಸೊಂಟದ ಮೇಲೊಂದು, ತಲೆಯ ಮೇಲೊಂದು ತಾಮ್ರದ ಬಿಂದಿಗೆಗಳಲ್ಲಿ ನೀರು ತಂದರೆ, ಮಕ್ಕಳು ಚಿಕ್ಕದೊಂದು ಬಿಂದಿಗೆ ತೆಗೆದುಕೊಂಡು ಹೋಗುತ್ತಿದ್ದರು. ಚಿಕ್ಕ ವಯಸ್ಸಿನಿಂದಲೇ ಹಿರಿಯರ ಕೆಲಸಗಳಲ್ಲಿ ಸಹಾಯ ಮಾಡುವುದನ್ನು ಕಲಿಯುತ್ತಿದ್ದ ದಿನಗಳವು. ಪಾತ್ರೆ, ಬಟ್ಟೆ, ದನಗಳು, ಗಂಡು ಮಕ್ಕಳ ಸ್ನಾನ ಎಲ್ಲವೂ ಕಾವೇರಿ ನದಿಯಲ್ಲಿಯೇ. ಮತ್ತಿತರ ಕೆಲಸಗಳಿಗೆ ಮೂರು ಮನೆಗಳ ನಡುವೆ ಇದ್ದ ಬಾವಿಯಿಂದ ನೀರನ್ನು ಸೇದಿಕೊಡಲು ಒಬ್ಬ ಗಂಡಾಳು ಬರುತ್ತಿದ್ದನು. ಅವನ ಕೆಲಸ ಕೇವಲ ಹಗ್ಗ ಎಳೆಯುವುದು, ಕೊಡವನ್ನು ಬಾವಿಗೆ ಬಿಟ್ಟು ನೀರು ತುಂಬಿದ ನಂತರ ಮೇಲೆ ಎಳೆಯುವುದು. ಅವನು ನೀರು ಸೇದಿಕೊಡುವಾಗ ಎಷ್ಟು ಬಿಂದಿಗೆ ಆಯಿತು ಎಂದು ಲೆಕ್ಕಹಾಕುವ ಕೆಲಸ ಮಕ್ಕಳದ್ದು. ಕೂಲಿಯ ಪಾವತಿ ಬಿಂದಿಗೆಗಳ ಲೆಕ್ಕಕ್ಕೆ ತಕ್ಕಂತೆ ದವಸ ಧಾನ್ಯಗಳ ರೂಪದಲ್ಲಿ ಅಂದಂದೇ ಕೊಡುತ್ತಾ ಇದ್ದರು. ಹಬ್ಬ ಹರಿದಿನಗಳಲ್ಲಿ ಕೆಲವೊಮ್ಮೆ ಹೊಸ ಬಟ್ಟೆಗಳನ್ನು ನೀಡುತ್ತಿದ್ದರು. ಬಿಂದಿಗೆಯಿಂದ ನೀರು ಸುರಿದುಕೊಂಡು ದೊಡ್ಡದಾದ ತೊಟ್ಟಿ, ಹಂಡೆಗಳಿಗೆ ತುಂಬಿಸುವ ಕೆಲಸ ಮನೆಯ ಪುರುಷರು ಮತ್ತು ಹೆಂಗಳೆಯರದ್ದು.

ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದ ರಾಧಾಳಿಗೆ ತನ್ನ ಜೊತೆಗೆ ಆಟವಾಡಲು ಗಂಡು, ಹೆಣ್ಣು ಮಕ್ಕಳೆನ್ನುವ ಭೇದಭಾವ ಇರಲಿಲ್ಲ. ದಿನವೂ ಸಂಜೆ ಏಳು ಗಂಟೆಯವರೆಗೆ ಮನೆಯ ಮುಂದಿನ ಓಣಿಯಲ್ಲಿ ಮಕ್ಕಳೊಂದಿಗೆ ಗೋಲಿ, ಬುಗುರಿ, ಚಿನ್ನಿದಾಂಡು,

ಲಗೋರಿ, ಕಣ್ಣಾಮುಚ್ಚಾಲೆ, ಐಸ್‌ಪೈಸ್, ಕುಂಟೆಬಿಲ್ಲೆ ಇನ್ನಿತರ ಆಟಗಳನ್ನು ನಿರ್ಭಿಡೆಯಿಂದ ಆಡುತ್ತಾ ಇದ್ದಳು. ಮೊದಲಿನಿಂದಲೂ ಚುರುಕು, ಧೈರ್ಯವಂತೆ. ಪಗಡೆ, ಚೌಕಾಭಾರ, ಚೆಸ್, ಅಳಗುಳಿ ಮಣೆ ಮುಂತಾದ ಆಟಗಳಲ್ಲೂ ಎತ್ತಿದ ಕೈ. ತನಗಿಂತಲೂ ದೊಡ್ಡವಳಾದ ಸುಮತಿಯನ್ನು ಸೋಲಿಸಿ ಗೋಳು ಹೊಯ್ದುಕೊಳ್ಳುವ ಮಜವೇ ಮಜ. ಹಳ್ಳಿಯಲ್ಲಿ ಹೊರಗಡೆ ಆಡುವುದಕ್ಕೆ ಸ್ವಲ್ಪ ನಿರ್ಬಂಧವಿತ್ತು. ಗಂಡು, ಹೆಣ್ಣು ಎನ್ನುವುದರ ಜೊತೆಗೆ ಜಾತಿ ಬೇಧವೂ ನುಸುಳಿ ಹೊರಗಡೆ ಆಟವಾಡಿದರೆ "ಗಂಡುಬೀರಿ" ಎನ್ನುವ ಹಣೆಪಟ್ಟಿ. ಆಟ ಮುಗಿಸಿ ಮನೆಯೊಳಗೆ ಬಂದು ಮತ್ತೆ ಸ್ನಾನ ಮಾಡಬೇಕಾದ ಪರಿಸ್ಥಿತಿ. ತಮ್ಮ ಹಳ್ಳಿ ಮನೆಯೇ ಒಂದು ಪುಟ್ಟ ಗ್ರಂಥಾಲಯ. ಚಂದಮಾಮ, ಬಾಲಮಿತ್ರ ಸಂಗ್ರಹಗಳನ್ನು ಓದಿ ಮುಗಿಸಿದ ನಂತರ ಓದಲು ಮತ್ತಷ್ಟು ಪುಸ್ತಕಗಳನ್ನು ಗೆಳತಿಯರ ಬಳಿಯಿಂದ ತರುವುದು, ಸುಧಾ, ಪ್ರಜಾಮತ, ತರಂಗ ವಾರಪತ್ರಿಕೆಗಳು ಯಾವಾಗ ಬರುತ್ತದೋ ಎಂದು ಕಾಯುತ್ತಿದ್ದ ದಿನಗಳವು.

ವಿದ್ಯುಚ್ಛಕ್ತಿ ಆಗಿನ್ನೂ ನಗರ ಪ್ರದೇಶಗಳಿಗಷ್ಟೇ ಸೀಮಿತವಾಗಿತ್ತು. ಹಳ್ಳಿಗಳಲ್ಲಿ ರಾತ್ರಿಯ ಹೊತ್ತು ಸೀಮೆಎಣ್ಣೆ ದೀಪಗಳ ಬೆಳಕೇ ಆಸರೆ. ರಾತ್ರಿಯ ಹೊತ್ತು ಏಳು ಗಂಟೆಯ ವೇಳೆಗೆ ಊಟ ಮುಗಿಸಿ ಮನೆಯ ಮುಂದಿನ ಜಗಲಿಯಲ್ಲಿ ಊರಿನ ಹಿರಿಯ ಗಂಡಸರು ಕಲೆತು ವಾರ್ತಾಪತ್ರಿಕೆಗಳಲ್ಲಿ ಬರುತ್ತಿದ್ದ ವಿಷಯಗಳನ್ನು ಚರ್ಚಿಸಿ ಮಾತುಕತೆ ಮುಗಿಸಿ, ಅಕ್ಕಪಕ್ಕದವರ ಯೋಗಕ್ಷೇಮ ವಿಚಾರಿಸಿ ಎಂಟು ಗಂಟೆಗೇ ಮಲಗಲು ಅಣಿಯಾಗುತ್ತಿದ್ದರು. ಹೆಂಗಸರು ಅಷ್ಟರಲ್ಲಿ ಅಡುಗೆಮನೆಯ ಮಿಕ್ಕೆಲ್ಲಾ ಕೆಲಸಗಳನ್ನು ಮುಗಿಸಿ, ಮಲಗಲು ಹಾಸಿಗೆಗಳನ್ನು ಸಿದ್ಧಪಡಿಸಿ ಇಡುತ್ತಿದ್ದರು. ಮತ್ತೆ ಬೆಳಿಗ್ಗೆ ಬೇಗನೆ ಸೂರ್ಯೋದಯದ ಸಮಯಕ್ಕೇ ಎದ್ದು ದೈನಂದಿನ ಕಲಾಪಗಳಲ್ಲಿ ತೊಡಗುತ್ತಿದ್ದರು.

ಅರವತ್ತರ ದಶಕದಲ್ಲಿ ತಮ್ಮ ಹಳ್ಳಿಯಲ್ಲಿ ವಿದ್ಯುತ್ ಕಂಬಗಳ ಪ್ರವೇಶವಾದಾಗ ಜನರಲ್ಲಿ ಸಂತಸದ ಕಡಲು ಉಕ್ಕಿ ಹರಿದಿತ್ತು. ವಿದ್ಯುದ್ದೀಪಗಳ ಬೆಳಕಿನಲ್ಲಿ ಓದುವ ಸಂಭ್ರಮ ವಿದ್ಯಾರ್ಥಿಗಳಲ್ಲಿ ಮನೆಮಾಡಿತ್ತು. ಎಪ್ಪತ್ತರ ದಶಕದಲ್ಲಿ ಹಳ್ಳಿಯ ಬೆಟ್ಟಗಳನ್ನು ಅಲ್ಲಲ್ಲಿ ಬ್ಲಾಸ್ಟ್ ಮಾಡಿ ದೊಡ್ಡ ದೊಡ್ಡ ಕಂಬಗಳನ್ನು ನಿರ್ಮಿಸಿ ನೀರಿನ ನಾಲೆಗಳನ್ನು ಕಟ್ಟುವ ಕಾರ್ಯ ಕೈಗೊಂಡಾಗ ಹಳ್ಳಿಗರ ಸಂತಸ ಮುಗಿಲು ಮುಟ್ಟಿತ್ತು. ಬಂಡೆಗಳನ್ನು ಒಡೆಯುವಾಗ ಕೆಲವೊಮ್ಮೆ ಮನೆಗಳು ಅದುರುತ್ತಿದ್ದವು. ಆದರೂ ಸಹ ತಮ್ಮ ಹಳ್ಳಿಯಲ್ಲಿ ನಡೆಯುತ್ತಿರುವ ಅಭಿವೃದ್ಧಿಯು ಜನರ ಮನೆ ಮಾತಾಗಿತ್ತು. ಅಂತೂ ಎಂಬತ್ತರ ದಶಕದಲ್ಲಿ ಮನೆಮನೆಗೆ ಕೊಳಾಯಿ ಬಂದಿತ್ತು. ಹೆಂಗಳೆಯರಿಗೆ ನೀರು ಹೊರುವ ಕೆಲಸ ಕಡಿಮೆಯಾದ ಸಂತೋಷ ಒಂದುಕಡೆಯಾದರೆ ದಿನದಲ್ಲಿ ಹಲವು ಬಾರಿ ಹೊಳೆಗೆ ಹೋಗಿ ಬರುವುದು ನಿಂತುಹೋಗಿ ತಮ್ಮ ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಿತೆಂಬ ಬೇಸರ ಒಂದುಕಡೆ.

ಕಾಲಕ್ಕೆ ತಕ್ಕಂತೆ ಬದಲಾವಣೆಗೆ ಹೊಂದಿಕೊಂಡು ಬದಲಾದ ಜೀವನಶೈಲಿಗೆ ಒಗ್ಗಿಕೊಳ್ಳುವಷ್ಟರಲ್ಲಿ ರಸ್ತೆ ಅಗಲೀಕರಣದ ಸುದ್ದಿ ಅಪ್ಪಳಿಸಿ ಎಲ್ಲರ ಮನವನ್ನು ಕಲಕಿತ್ತು. ಹಳ್ಳಿಯ ಒಂದು ಕಡೆಗೆ ಬೆಟ್ಟ, ಮತ್ತೊಂದು ಕಡೆಗೆ ಕಾವೇರಿ ಹರಿಯುತ್ತಿದ್ದಳು. ಒಂದೇ ಒಂದು ಮುಖ್ಯ ರಸ್ತೆಯ ಇಬ್ಬದಿಗಳಲ್ಲಿ ಮನೆಗಳು, ಮನೆಯ ಮುಂದೆ ಅಂಗಡಿಗಳು ತಲೆಯೆತ್ತಿ ನಿಂತಿದ್ದವು. ಹೊಳೆಗೆ ಹೋಗುವ ಸಣ್ಣ ಗಲ್ಲಿಯಲ್ಲಿ ದನದ ಕೊಟ್ಟಿಗೆ, ನಾಲ್ಕಾರು ಗುಡಿಸಲುಗಳು ಇದ್ದವು. ರಾಮಸ್ವಾಮಿ ಕಣಿವೆ ಹಳ್ಳಿಯ ಅನ್ವರ್ಥನಾಮ ಆಗಿತ್ತು. ಸುತ್ತಮುತ್ತಲಿನ ಹಳ್ಳಿಗಳ ಜನರು ದೋಣಿಯಲ್ಲಿ ಪ್ರಯಾಣ ಮಾಡಿ ಬಂದು ಇವರ ಹಳ್ಳಿಯಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿದ್ದರು. ರೈತಾಪಿ ಜನರ ಬೇಕುಗಳನ್ನು ಪೂರೈಸುತ್ತಿದ್ದ ಹಳ್ಳಿಯ ಹಲವಾರು ಮನೆಗಳು ರಸ್ತೆ ಅಗಲೀಕರಣಕ್ಕೆ ಬಲಿಯಾಗಿ ರಿಪೇರಿ ಮಾಡಲಾಗದ ದುಸ್ಥಿತಿ ತಲುಪಿದ್ದವು. ಸರ್ಕಾರದಿಂದ ಬಂದ ಪರಿಹಾರದ ಮೊತ್ತವು ರಿಪೇರಿಗೂ ಸಾಕಾಗುತ್ತಿರಲಿಲ್ಲ. ಕೆಲವರಿಗಂತೂ ಪರಿಹಾರದ ಹಣವನ್ನು ತೆಗೆದುಕೊಂಡು ಹಳ್ಳಿಯನ್ನು ಬಿಟ್ಟು ನಗರಗಳಿಗೆ ಧಾವಿಸಿ ಕೆಲಸ ಹುಡುಕಬೇಕಾದ ದುಸ್ಥಿತಿ ಒದಗಿತ್ತು. ದೊಡ್ಡ ದೊಡ್ಡ ಮರಗಳು ನೆಲಕ್ಕುರುಳಿ ಬಿಸಿಲನ್ನೇ ಕಂಡಿರದೆ ಇದ್ದ ಹಳ್ಳಿಯ ರಸ್ತೆಗಳು ಬಿಸಿಲಿನ ಝಳದಿಂದ ತತ್ತರಿಸಿದವು. ಸಂಚಾರಕ್ಕೆ ದೋಣಿಗಳನ್ನು ಅವಲಂಬಿಸಿದ್ದ ಜನರು ಇಂದು ತೂಗುಸೇತುವೆಯಲ್ಲಿ ಸಂಚರಿಸುತ್ತಿದ್ದಾರೆ.

ಇತಿಹಾಸ ಪ್ರಸಿದ್ಧವಾದ, ರಾಮಸ್ವಾಮಿ ಕಣಿವೆ, ಶ್ರೀರಾಮ ಲಕ್ಷ್ಮಣರು ತಮ್ಮ ಪೂಜೆಗೆಂದು ಶಿವಲಿಂಗವನ್ನು ಪ್ರತಿಷ್ಠಾಪಿಸಿ ಪೂಜೆ ಕೈಗೊಂಡಿದ್ದಾರೆ ಎಂದು ನಂಬಿ ಅಭಿವೃದ್ಧಿಪಡಿಸಿರುವ ಶ್ರೀರಾಮಲಿಂಗೇಶ್ವರ ದೇವಸ್ಥಾನ, ಲಕ್ಷ್ಮಣೇಶ್ವರ ದೇವಸ್ಥಾನಗಳಿಗೆ ಶ್ರೀರಾಮ ನವಮಿಯಂದು ನಡೆಯುವ ವಾರ್ಷಿಕ ಜಾತ್ರಾ ಮಹೋತ್ಸವದ ಸಮಯದಲ್ಲಿ ಲಕ್ಷಾಂತರ ಭಕ್ತರು, ಭೇಟಿ ನೀಡುತ್ತಾರೆ. ಈಗಲೂ ಸಹ ಪ್ರತಿ ವರ್ಷವೂ ರಾಮನವಮಿಗೆ ಮೊದಲು ಕಾಶಿಯಿಂದ ಗಂಗಾಜಲವನ್ನು ಪಕ್ಕದೂರು ಹೆಬ್ಬಾಲೆಗೆ ಕಳುಹಿಸುತ್ತಾರೆ.

ಹೆಬ್ಬಾಲೆಯಿಂದ ಮೆರವಣಿಗೆಯಲ್ಲಿ ಗಂಗಾಜಲವನ್ನು ತಂದು ಅಭಿಷೇಕ ಮಾಡಿದ ನಂತರ ರಾಮನವಮಿಯ ಪೂಜಾ ಕೈಂಕರ್ಯವನ್ನು ಆರಂಭಿಸುತ್ತಾರೆ. ಮೊದಲಿಗೆ ಎತ್ತಿನ ಗಾಡಿಗಳಲ್ಲಿ ನಡೆಸುತ್ತಿದ್ದ ಮೆರವಣಿಗೆಯನ್ನು ಈಗ ಟ್ರ್ಯಾಕ್ಟರ್‌ನಲ್ಲಿ ನಡೆಸುತ್ತಾರೆ. ಸುತ್ತಮುತ್ತಲಿನ ಹತ್ತಾರು ಹಳ್ಳಿಗಳ ಜನರು ಒಗ್ಗೂಡಿ ಸಾಮೂಹಿಕವಾಗಿ ನಾಲ್ಕೈದು ದಿನ ಜಾತ್ರೆ ನಡೆಸುವರು. ಕೊನೆಯ ದಿನ ತೆಪ್ಪೋತ್ಸವ ಇರುತ್ತದೆ. ದೇವಾಲಯದ ಬಳಿಯಿಂದ ಕಾವೇರಿ ನದಿಗೆ ಇಳಿದು ಹೋಗಲು ಅಗಲವಾದ ದೊಡ್ಡ ದೊಡ್ಡ ಮೆಟ್ಟಿಲುಗಳನ್ನು ಕಟ್ಟಿಸಿದ್ದಾರೆ. ಬೆಂಗಳೂರು ನಗರದ ಜಾತ್ರೆಗಳಲ್ಲಿ ಇರುವಂತೆಯೇ ಜಾತ್ರಾ ಸಮಯದಲ್ಲಿ ಅಲ್ಲಿಯೂ ಎಲ್ಲಾ ತೆರನಾದ ವಸ್ತುಗಳು ದೊರೆಯುತ್ತವೆ.

***

ನವ ಸಂವತ್ಸರ

– ಎಂ.ಆರ್. ರಘುನಾಥ್

ಶಿಶಿರನ ದಾಳಿ ಉದುರಿದ ಎಲೆಗಳು
ಅರೆ ಬೋಳಾಗಿಹ
ತರುಲತೆಗಳು
ಕಾಂಡದಿ ಮೂಡಿಹ
ಹೊಸ ಕಣ್ಣುಗಳು
ಹಸಿರು ಕೆಂಪಿನ
ಚಿಗುರುಗಳು

ಶಿಶಿರನ ನಿರ್ಗಮನ
ವಸಂತನ ಆಗಮನ
ತರುಲತೆಗಳು
ನವನವೀನ
ತುಂಬಿತೆಲ್ಲರ ಮೈಮನ

ನಸುನಗೆಯ ಸೂಸುತ್ತ
ಕಣ್ತೆರೆದರೆ ಕಣ್ತಣಿಸುವ
ಚಿಗುರು ಮೊಗ್ಗು ಹೂಗಳು
ವಿವಿಧ ತರದ ಹಣ್ಗಳು

ಮೂಗರಳಿಸುವ
ಕಂಪು ತಂಪು
ಕೋಗಿಲೆಯ ಗಾನದಿಂಪು
ನಮ್ಮನೆಲ್ಲ ಕರೆದಿವೆ
ಮನವ ಮುದಗೊಳಿಸಿವೆ

ಮುಗಿಲಿನಿಂದ
ಭುವಿಯವರೆಗೆ
ಸಂಭ್ರಮವೋ ಸಂಭ್ರಮ
ಚಿತ್ರವಿಚಿತ್ರ ವರ್ಣಗಳು
ಅನುಪಮ
ಪ್ರಕೃತಿ ಮಾತೆಯ ಉಮ್ಮಹ

ಮನೆಮನೆಗಳ ಮುಂದೆ
ರಂಗವಲ್ಲಿಯ ಆಭರಣ
ಬಾಗಿಲುಗಳಿಗೆ
ಮಾವುಬೇವಿನ
ಹಸಿಹಸಿರಿನ ತೋರಣ

ಪಾಕಶಾಲೆಯಲಿ
ವಿಶೇಷ ಶ್ರಮ
ಪ್ರವೀಣರ ಕೈಚಳಕದ
ಹೂರಣ
ಹೋಳಿಗೆಯ ಘಮಘಮ
ಪಂಚೇಂದ್ರಿಯಗಳಿಗೆ
ರಸ ಭೂಮ

ಪರಾಭವ ಸಂವತ್ಸರ
ಬಂದರೇಕೆ ಬೇಸರ
ಬೇವು ಬೆಲ್ಲ ಸವಿದು
ನಾವು
ಆಚರಿಸೋಣ
ವಿಜಯೋತ್ಸವ.

***

ಒಂದೇ ಬಳ್ಳಿಯ ಹೂವುಗಳು

– ಗೋಪಿನಾಥ್

ಶ್ರೀನಿವಾಸ ನನ್ನ ದೋಸ್ತ, ಬಹಳ ಹಳೇ ಪರಿಚಯ ಇಬ್ಬರದು. ಅವನು ಕಂಜೂಸ್ ಮನುಷ್ಯ ರೊಕ್ಕ ಬಿಚ್ಚುವವನಲ್ಲ. ಆದರೆ ಎಲ್ಲವೂ ಅಗ್ಗದಲ್ಲಿ ಸಿಗಬೇಕು. ಒಂದುಸಲ ಅವರ ಮನೆಯಲ್ಲಿ ಮೊಮ್ಮಗುವಿನ ತೊಟ್ಟಿಲು ಶಾಸ್ತ್ರವಿತ್ತು. ತೊಟ್ಟಿಲು ಅಲಂಕರಿಸಲು ಧಾರಾಳವಾಗಿ ಹೂವು ಬೇಕಿತ್ತು..

ಸುಮಾರು ಹತ್ತು, ಹದಿನೈದು ಮಾರು ಹೂವು ಬೇಕಿತ್ತು. ಇವನೋ ಕಂಜೂಸ್ ಮನುಷ್ಯ. "ಹೂವು ಕೊಳ್ಳಲು ನಿನ್ನ ಬಜೆಟ್ ಎಷ್ಟು'' ಎಂದೆ.

"ಹೆಚ್ಚೆಗೇಂದ್ರೆ ನಿನಗಾಗಿ ನೂರೈವತ್ತರವರೆಗೆ ಹಿಗ್ಗಿಸಬಹುದು'' ಎಂದ.

ನಾನು ಗಹಗಹಿಸಿ ನಕ್ಕೆ. "ಏನಯ್ಯ ನಿನ್ನ ಲೋಕಜ್ಞಾನ, ಒಂದು ಮಾರಿಗೆ ನೂರವೈತ್ತು ಹೇಳುವಾಗ ಎಲ್ಲಕ್ಕೂ ಸೇರಿ ನೂರವೈತ್ತು ಆಗಬೇಕು ಎನ್ನುತ್ತಿಯಲ್ಲ'' ಎಂದೆ.

"ನೀ ಇರಬೇಕಾದರೆ ನನಗೇನು ಭಯ" ಅಂದ.

ನಾನು ಚಕಿತನಾಗಿ ಕೇಳಿದೆ, "ಏನಯ್ಯ ನಿನ್ನ ಮಾತಿನ ಅರ್ಥ ಸೀನ".

"ಅದೇನಪ್ಪ... ನಿನಗೊಬ್ಬಳು ಹೂವಿನವಳು ಫ್ರೆಂಡರ ಇದಾಳಲ್ಲ, ಅವಳಹತ್ರ ಕೊಡಿಸು" ಎಂದ.

"ಏನಯ್ಯ ನಿನ್ನ ಮಾತು, ಹೂವಿನಳು ನನ್ನ ಫ್ರೆಂಡ್ ಎನ್ನುತ್ತೀಯಲ್ಲ, ಸದ್ಯ ಈ ಮಾತು ಮನೆಯಲ್ಲಿ ನನ್ನ ಹೆಂಡತಿ ಮುಂದೆ ಹೇಳಲಿಲ್ಲವಲ್ಲ, ಅವಳು ಮನೆಯಲ್ಲೇ ಇದ್ದಾಳೆ ಎಚ್ಚರ" ಎಂದೆ.

"ಅಲ್ಲಯ್ಯ, ಈಗ ನಾ ಹೇಳಿದ್ರಲ್ಲೇನು ತಪ್ಪು, ಪರಿಚಯ ಎನ್ನುವ ಬದಲು ಫ್ರೆಂಡ್ ಎಂದೆ ಅಷ್ಟೆ. ಅಲ್ಲಪ್ಪ, ನಾ ಕಂಡಹಾಗೆ ನೀನು ತರಕಾರಿ ಅಂಗಡಿಗೆ ಹೋಗುತ್ತೀಯ. ಅಲಮೇಲಮ್ಮ ನಿನ್ನನ್ನ ದೂರದಿಂದಲೇ ನೋಡಿ, ಅವಳೇ ಅರ್ಧ ದಾರಿಗೆ ಬಂದು ಕರಕೊಂಡು ಹೋಗುತ್ತಾಳೆ ಅಂಗಡಿಗೆ"

"ಅಲ್ಲ ಕಣೋ ಸೀನ.. ನೀನು ಬೇಗ ಅಪಾರ್ಥ ಮಾಡುಕೊಳ್ಳತ್ತೀಯ ನೋಡು. ಅಲಮೇಲು ನಾನು ಒಟ್ಟಿಗೆ ಮಿಡಲ್ ಸ್ಕೂಲಲ್ಲಿ ಓದುತ್ತಿದ್ದವರು ಅದಕ್ಕೆ ಅದು ಹಾಗೆ ಮುಂದುವರಿದಿದೆ"

"ಹೋಗಲಿ ಬಿಡಪ್ಪ.. ಬೇಕರಿ ಮಾಲಿನಿ ನಿನ್ನ ಫ್ರಂಡ್ ತಂಗಿಯಲ್ವಾ?"

"ಹೌದು ಸರಿಯಾಗಿ ಹೇಳಿದೆ, ಅವಳಿಂದೇನಾಗಬೇಕು ಹೇಳು, ಬರ್ತಡೇಗೆ ಕೇಕ್ ಮಾಡಿಸಬೇಕಾ, ನಾ ಹೇಳ್ತೀನಿ ಬಾ"

"ಅದೇ ನಾ ಹೇಳಿದ್ದು.. ನೀನು ಎಲ್ಲಿ ಹೋದರೂ ಗೋಪಿಕೆಯರು ಸುತ್ತುವರಿಯುತ್ತಾರೆ ನೋಡು. ನೀನು ಬೇಕರಿಗೆ ಹೋದರೆ ಬೇರೆಯವರನ್ನು ಮಾಲಿನಿ ವಿಚಾರಿಸುವುದೇ ಇಲ್ಲ.. ನಿನ್ನಲ್ಲಿ ಅವಳ ದೃಷ್ಟಿ ನೆಟ್ಟಿರುತ್ತೆ" ನಾವು ಹೋದರೆ ನನ್ನ ನೋಡೋದೆ ಇಲ್ಲ"

"ಶ್ರೀನಿವಾಸ ಇದೇನೋ ನಿನ್ನ ಮಾತು, ನನಗೀಗ ಎಪ್ಪತ್ತು ವಯಸ್ಸು. ಈ ವಯಸ್ಸಿನಲ್ಲೂ ನೀನು ನನ್ನ ಮೇಲೆ ಹೊಟ್ಟೆ ಉರಕೊಳ್ತೀಯಲ್ಲ, ಸರಿಯಿಲ್ಲ ಕಣೋ.. ನೀನು ಈಗಾಗಲೇ ಬಹಳ ಬಿರುದುಗಳನ್ನು ಸಂಪಾದಿಸಿರುವೆ. ಅವಳೇನಂತಾಳೆ ಗೊತ್ತ ನಿನ್ನ ಕಂಜೂಸ್, ಜಿಪುಣ, ಜುಗ್ಗ.. ಮತ್ತೆ..."

"ಸಾಕು ಅವಳು ಹೇಳದಿದ್ದರೂ ನೀನೇ ಎಲ್ಲವನ್ನೂ ಅವಳೂಂತ ಹೇಳಿ ಸೇಡು ತಿರಿಸಿಕೊಳ್ಳಬೇಡ"

"ಅಲ್ಲಯ್ಯ ಸೀನ, ನನ್ನ ಮಾತಾಡಿಸಿದ ಹೆಂಗಸರಿಗೆಲ್ಲ ಹಣೆಪಟ್ಟಿ ಕಟ್ತೀಯ. ಪಾಪ ಎನಿಸುತ್ತೆ, ನೀನು ನೋಡೋ ಕಣ್ಣುಗಳಲ್ಲಿ ದೋಷವಿದೆ"

"ಈಗೇಕಯ್ಯ ನಮ್ಮ ನಮ್ಮಲ್ಲಿ ಚರ್ಚೆ.. ಹೂವು ಬೇಕಲ್ಲ ಪೊನ್ನಮ್ಮನ ಹೂವಿನಂಗಡಿಗೆ ಹೋಗೋಣ" ಎಂದ.

"ಬೇಡಯ್ಯ, ಅಲ್ಲಿಗೇಕೆ ಇಲ್ಲೇ ಅಗ್ಗವಾಗಿ ಸಿಗುತ್ತೆ ಬಾ" ಎಂದೆ ಅಳುಕುತ್ತ.

"ಬಾರಯ್ಯ ಗೋಪು.. ನಿನ್ನ ಹಣೆಬರಹ ಇವತ್ತು ಗೊತ್ತಾಗುತ್ತೆ" ಎಂದು ಶನಿದೇವರ ಗುಡಿ ಹತ್ತಿರ ಪೊನ್ನಮ್ಮನ ಅಂಗಡಿಗೆ ಕರೆದುಕೊಂಡು ಹೋದ. ನನಗಿಂತಲೂ ಇವನಿಗೆ ಅವಳ ಅಂಗಡಿ ಗುರುತು ಚೆನ್ನಾಗಿ ಗೊತ್ತಿದೆ ಎಂದುಕೊಂಡೆ.

ಪೊನ್ನಮ್ಮ ನಮ್ಮನ್ನು ಕಂಡೊಡನೆ, ‘‘ವಾಂಗೋ.. ಸಾಮಿ ರೊಂಬ ದಿನ ಆಯ್ತು’’ ಅಂತ ಹರಕು ಕನ್ನಡ ತಮಿಳು ಮಿಶ್ರ ಭಾಷೆಯಲ್ಲಿ ಕರೆದಳು.

"ಸಾಮಿ ಶ್ರೀನಿವಾಸ... ಚಾಮಿ... ಬಹಳ ದಿನ ಆಯ್ತು, ನೀನು ಅಮ್ಮ ಇಂದ ಪಕ್ಕ ಬರಲೆ ಇಲ್ಲ.. ಹೋದಸಲ ಪುವು ಕೊಂಡಿದ್ದು ನೂರವೈತ್ತು ಬಾಕಿ ಇದೆ, ಕೊಡಲು ಬಂದಿರಾ" ಎಂದಳು.

ನಾನು ಶ್ರೀನಿವಾಸನ ಕಡೆ ನೋಡಿದೆ.. ಅವನು, ‘‘ಹೀ..ಹೀ..." ಅದು ಏನಾಯ್ತು ಎಂದರೆ... !"

"ನೀ ಏನು ಹೇಳಬ್ಯಾಡ ಸಾಮಿ, .ಅವರು ಎನಕೆ ಚೆನ್ನಾಗಿ ಗೊತ್ತು.. ಗೋಪು ಸಾರ್.."

"ಅವರು ನಲ್ಲ ತೆರಯುದಾ’’ ಎಂದು ಅಣಕವಾಡಿದ.

"ಅವರ ಅಮ್ಮ ಕೂಡ ತೆರೆಯೋ"

"ಏನು ಅವರಮ್ಮನೂ ಗೊತ್ತ?"

"ಅಯ್ಯೋ ಸಾಮಿ ನಾ ಹೇಳಿದ್ದು ಅಮ್ಮಂದ್ರೆ ಅವರ ಹೆಂಡತಿ, ಮತ್ತೆ ಪುಳ್ಳೆಯು ತೆರೆಯು ಎಂದು.. ಸೀನಿ ಸಾರ್ ನಿಮ್ಮ ಮಗ ನಿನ್ನೆ ಬಂದಿತ್ತು. ನಿಮ್ಮ ಮನೆಯಲ್ಲಿ ಇವತ್ತು ತೊಟ್ಟಿಲು ಶಾಸ್ತ್ರ ಅಮವಾ, ಪೂವು ಬೇಕಲ್ಲ.. ನಿಮ್ಮ ಹೆಂಡತಿ ಆಗಲೇ ಬಂದಿತ್ತು ಕಳಿಸಿದ್ದೀನಿ, ಇವತ್ತಿನ ದುಡ್ಡು ನಿಮ್ಮಅಮ್ಮ..ಅಲ್ಲ ನಿಮ್ಮ ಹೆಂಡತಿ ಕೊಡುತ್ತೆ. ಈಗ ನೀನು ನೂರವೈತ್ತು ರೂಪಾಯಿ ಕೊಡಕ್ಕೆ ಬಂದಿದ್ದ, ಅಯ್ಯ ಕಾಸು ಕೊಡಕ್ಕೆ ಎಷ್ಟು ಕಂಜೂಸಪ್ಪ ಸೀನಿ ನೀನು" ಎಂದಾಗ ಸೀನಿ, ‘‘ನಾಳೆ ದುಡ್ಡು ತರತ್ತೀನಿ" ಎಂದ ಪೆಚ್ಚಾಗಿ.

ಸೀನಿ ನನ್ನ ಮೀರಿಸಿದ್ದ. ಅವನ ಜಾತಕ ಬಹಿರಂಗ ಮಾಡಿದ್ದಳು ಪೊನ್ನಮ್ಮ! ಶ್ರೀನಿವಾಸ ಇಂಗು ತಿಂದ ಮಂಗನಂತಾಗಿದ್ದ!

"ಒಂದೇ ಬಳ್ಳಿಯ ಹೂವುಗಳು" ಎಂದರೊಬ್ಬರು.

***

ಜೀವನಧಾರೆ

– ಮಾಲತಿ ಶ್ರೀನಿವಾಸನ್

ಮೇಲೇರಿ ರಭಸದಲಿ, ಧುಮ್ಮಿಕ್ಕಿ ಕೆಳಗಿಳಿದು,
ಕಲ್ಲು ಮುಳ್ಳುಗಳ ಲೆಕ್ಕಿಸದೆ
ಸಾಗುವ ನದಿಯಂತೆ ದಶಕಗಳಲಿ
ಹರಿದಿಹುದು ಜೀವನಧಾರೆ.

ಅದೆಷ್ಟು ಹುರುಪು ಉತ್ಸಾಹ ಪಯಣದಿ ಬೇಕು
ಬೇಡದ್ದನ್ನೆಲ್ಲ ಅನುಭಾವಿಸಿ.
ಭಾವನೆಗಳ ಹುಚ್ಚಾಟಕ್ಕೆ ಸ್ಪಂದಿಸಿ,
ಒಂದೆಡೆ ನಿಲ್ಲದೆ,
ನಾನಾ ದೇಶಗಳ ಜನಜಂಗುಳಿಯ ಜೊತೆ
ನಕ್ಕು ನಲಿದಾಡಿ ಎಲ್ಲವನು ಆಸ್ವಾದಿಸಿ,
ವಿವಿಧತೆಯ ಸೊಬಗನು ಅನುಭವಿಸಿ,
ಎಲ್ಲವನು ಒಪ್ಪಿ ಅಪ್ಪಿ ತನ್ನತನವನು ಕಾಪಿರಿಸಿ,
ಅದೆಷ್ಟು ತೀವ್ರ ಗತಿಯಲಿ
ಓಡಿತ್ತು ಜೀವನದ ಬಂಡಿ.

ಸತ್ಯ ಅಸತ್ಯತೆಯ ಪರಿಧಿ ಅರಿವಾಯಿತೆ?
ಹಾದಿಯಲಿ ಪಸರಿಸಿದ ಬೆಳಕಿನ ಭ್ರಮೆ ಕುಂದಿತೆ?
ದಾರಿ ಕಾಣದೆ ತಡಕಾಡುತ್ತಿದೆ
ಇಂದೇಕೆ ಮುಸಂಜೆಯ ಮಂಪರಿನಲಿ ಈ ಮನ.
ನನ್ನವರು ಹತ್ತಿರಿದಂತಿದ್ದು ದೂರಾದವರು,
ದೂರಿದ್ದು ಹತ್ತಿರಾದವರು ಹಲವರು,
ಏನಿದೀ ನಾಟಕ ಬಾಳ ಪಥದಲಿ.
ಕಾಲನ ಜಾದು ಸುತ್ತಲಿನ ಮಾಯಾಲೋಕ ಸರಿಯೇ
ದಿನಕ್ಕೊಂದು ಹೊಸ ಚಿತ್ರಣ, ಎಲ್ಲ ಬರಿದು
ಎಲ್ಲುಂಟು ಸ್ಥಿರತೆ ಜಗದಿ?
ಇದನರಿತು ನಿಧಾನಿಸದೇಕೆ?
ಈ ಮುಸ್ಸಂಜೆಯಲಿ, ಅದೇ ವೇಗ
ಅದೇ ರಭಸದಲಿ ಸಾಗಲಿಚ್ಚಿಸುವುದೇಕೆ?,
ಈ ಹುಚ್ಚು ಮನ.

***

ಕಾಶೀ ವಿಶ್ವನಾಥ ದೇವಾಲಯ

– ಸುವರ್ಣ ಲಕ್ಷ್ಮೀ

ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಪ್ರಮುಖ ಜ್ಯೋತಿರ್ಲಿಂಗವಾದ ಕಾಶೀ ವಿಶ್ವನಾಥ ದೇವಾಲಯ ವಾರಣಾಸಿಯಲ್ಲಿ ಇರುವುದು ನಮಗೆಲ್ಲಾ ತಿಳಿದಿದೆ. ಆತನನ್ನು ದರ್ಶನ ಮಾಡಿದರೆ ಮೋಕ್ಷ ಸಿಗುವುದೆಂದು ಭಾರತದ ಹಿಂದೂಗಳೆಲ್ಲರ ನಂಬಿಕೆ.

ಶಿವನು ಕಾಶಿಯಲ್ಲಿ ನೆಲೆಗೊಂಡ ದಂತಕಥೆಯನ್ನು ತಿಳಿಯೋಣ. ಶಿವನು ಕೈಲಾಸ ವಾಸಿ. ಆತ ಪಾರ್ವತಿಯನ್ನು ಮದುವೆಯಾದ ನಂತರ ಯಾವುದಾದರೂ ಸಿದ್ಧ ಕ್ಷೇತ್ರದಲ್ಲಿರಲು ಬಯಸುತ್ತಾನೆ. ಆಗ ಇಡೀ ಜಗತ್ತನ್ನು ನೋಡಿ ಅದ್ಭುತವಾಗಿ ವಾಸಿಸಲು ಕಾಶೀ ಪಟ್ಟಣವನ್ನು ಆಯ್ಕೆ ಮಾಡುತ್ತಾನೆ. ಆ ಕಾಲಕ್ಕೆ ಕಾಶಿಯಲ್ಲಿ 27000 ದೇಗುಲಗಳಿದ್ದವಂತೆ. ಇದು ಮನುಷ್ಯನ ದೇಹದಲ್ಲಿರುವ ನರಗಳ ಸಂಖ್ಯೆಯೂ ಹೌದೆಂದು ಬಲ್ಲವರು ಹೇಳುತ್ತಾರೆ. ಸತೀ ಪಾರ್ವತಿಯ ಸಮೇತ ಕಾಶಿಯಲ್ಲಿ ವಾಸಿಸಲು ಪ್ರಾರಂಭಿಸುತ್ತಾರೆ. ಆಗ ಕಾಶಿಯನ್ನು ದಿವೋದಾಸ ಎಂಬ ರಾಜ ಆಳುತ್ತಿರುತ್ತಾನೆ.

ಆತನಿಗೆ ಶಿವ ಕಾಶಿಯಲ್ಲಿ ನೆಲೆಗೊಳ್ಳುವುದು ಇಷ್ಟವಾಗಲಿಲ್ಲ. ಒಮ್ಮೆ ಶಿವನು ಕಾಶಿಯಲ್ಲಿ ನೆಲೆ ನಿಂತರೆ ಶಿವನೇ ಕ್ರೇಂದ್ರಬಿಂದುವಾಗಿ ಎಲ್ಲರೂ ಆತನ ಸುತ್ತಲೂ ನೆರೆಯುತ್ತಾರೆ. ನನ್ನ ಮಾತಿಗೆ ಯಾರೂ ಬೆಲೆ ಕೊಡುವುದಿಲ್ಲ ಎಂಬುದು ಆತನ ಊಹೆಯಾಗಿತ್ತು. ಆಗ ದಿವೋದಾಸನು ಬ್ರಹ್ಮನನ್ನು ಕುರಿತು ಘೋರ ತಪಸ್ಸು ಮಾಡಿದನು. ಆತನ ತಪಸ್ಸಿಗೆ ಮೆಚ್ಚಿ ಬ್ರಹ್ಮದೇವನು ಪ್ರತ್ಯಕ್ಷನಾದ. ಆಗ ದಿವೋದಾಸನು ಕಾಶಿಯಲ್ಲಿ ಮನುಷ್ಯರು ಮಾತ್ರ ವಾಸಿಸಬೇಕು, ಶಿವನಂತಹ ದೇವರುಗಳು ವಾಸಮಾಡಬಾರದು ಎಂದು ಕೇಳುತ್ತಾನೆ. ಬ್ರಹ್ಮ ತಥಾಸ್ತು ಎಂದು ವರ ಕೊಡುತ್ತಾನೆ. ವರ ಪ್ರಭಾವದಿಂದ ಶಿವನು ತನ್ನ ಪರಿವಾರ ಸಮೇತ ಕಾಶಿಯನ್ನು ಬಿಟ್ಟು ಕೈಲಾಸಕ್ಕೆ ಹೊರಡುತ್ತಾರೆ. ಆದರೆ ಶಿವನಿಗೆ ಕಾಶೀ ನಗರದ ಸೆಳೆತ ಹೆಚ್ಚಾಗಿ ಮತ್ತೆ ಕಾಶಿಗೆ ಹೋಗಲು ಮನ ಹಾತೊರೆಯುತ್ತಿರುತ್ತದೆ. ಶಿವನು 64 ಯೋಗಿನಿಯರನ್ನು ಕಳುಹಿಸುತ್ತಾನೆ, ನೀವು ಏನಾದರೂ ಮಾಡಿ ಆತನನ್ನು ಮೋಹಪಾಶಕ್ಕೆ ಸಿಲುಕಿಸಿ ನಾನು ಅಲ್ಲಿಗೆ ಬರಲು ದಿವೋದಾಸನನ್ನು ಒಪ್ಪಿಸಿ ಎಂದು. ಆದರೆ ಅವರು ಕಾಶಿಯ ಬೆರಗಿಗೆ ಮನಸೋತು ಬಂದ ಕೆಲಸವನ್ನು ಮರೆತು ಕಾಶಿಯಲ್ಲೇ ಇದ್ದುಬಿಡುತ್ತಾರೆ.

ನಂತರ ಶಿವನು ಸೂರ್ಯದೇವನನ್ನು ಕಳುಹಿಸುತ್ತಾನೆ, ಏನಾದರೂ ಮಾಡಿ ನಾನು ಕಾಶಿಗೆ ನಾನು ಬರಲು ದಿವೋದಾಸನನ್ನು ಒಪ್ಪಿಸು ಎಂದು. ಆದರೆ ಸೂರ್ಯದೇವನೂ ಸಹ ಕಾಶಿಯ ತೇಜಸ್ಸಿಗೆ ಬೆರಗಾಗಿ ಮನಸೋತು ತನ್ನ ಹನ್ನೆರಡು ರೂಪಗಳಲ್ಲಿ ಕಾಶಿಯಲ್ಲಿ ನೆಲೆಸಿಬಿಡುತ್ತಾನೆ. ಇದಕ್ಕೆ ಸಾಕ್ಷಿ ಎಂಬಂತೆ ಇಂದು ಸಹ ಕಾಶಿಯಲ್ಲಿ 12 ಸೂರ್ಯನ ದೇಗುಲಗಳಿವೆ. ನಿರಾಶನಾದ ಶಿವನು ದಿವೋದಾಸನ ಮನವೊಲಿಸಲು ಬ್ರಹ್ಮನನ್ನು ಕಾಶಿಗೆ ಕಳುಹಿಸುತ್ತಾನೆ. ಬ್ರಹ್ಮದೇವನು ಕಾಶಿ ನಗರದಿಂದ ಎಷ್ಟು ಪ್ರಭಾವಿತ ನಾದನೆಂದರೆ ದಿವೋದಾಸನ ಸಹಾಯ ಪಡೆದು ಹತ್ತು ಕುದುರೆಗಳಿಂದ ಅಶ್ವಮೇಧ ಯಾಗಗಳನ್ನು ಮಾಡಿ ಶಾಶ್ವತವಾಗಿ ನೆಲೆಸಿ ಬಿಡುತ್ತಾನೆ. ಈತ ಅಶ್ವಮೇಧ ಯಾಗ ಮಾಡಿದ ಸ್ಥಳವೇ ಇಂದು ದಶಾಶ್ವಮೇಧ ಘಾಟ್ ಎಂದು ಪ್ರಸಿದ್ಧಿ ಪಡೆದಿದೆ. ನಂತರ ಶಿವನು ತನ್ನ ಇಬ್ಬರು ನಂಬಿಕಸ್ಥ ಗಣಗಳನ್ನು ಕಳುಹಿಸುತ್ತಾನೆ. ಅವರೋ ಕಾಶಿಯ ಚೆಲುವಿಗೆ, ಪವಿತ್ರತೆಗೆ ಮನಸೋತು ದ್ವಾರಪಾಲಕರಾಗಿ ನಿಂತುಬಿಡುತ್ತಾರೆ. ನಂತರ ಶಿವನು ಗಣೇಶನನ್ನು ಆತನ ಗಣದೊಂದಿಗೆ ಕಾಶಿಗೆ ಕಳುಹಿಸುತ್ತಾನೆ. ಗಣಪನೂ ಸಹ 56 ರೂಪಗಳಲ್ಲಿ ನೆಲೆಸಿಬಿಡುತ್ತಾನೆ. ಇಂದಿಗೂ ಕಾಶಿಯಲ್ಲಿ ಪಂಚಕ್ರೋಶೀ ಯಾತ್ರೆಯನ್ನು ಕೈಗೊಂಡರೆ ಈ ಎಲ್ಲಾ 56 ಗಣಪಗಳನ್ನು ನೋಡಬಹುದು.

ಕಡೆಗೆ ಶಿವನು ವಿಷ್ಣುವನ್ನು ದಿವೋದಾಸನ ಬಳಿಗೆ ಕಳುಹಿಸುತ್ತಾನೆ. ವಿಷ್ಣುವು ಕಾಶೀನಗರದ ಗಂಗಾ ಹಾಗೂ ವರುಣಾ ನದಿಗಳ ಸಂಗಮ ಸ್ಥಳದಲ್ಲಿ ಕಾಣಿಸಿಕೊಳ್ಳುತ್ತಾನೆ. ಆ ಸ್ಥಳದಲ್ಲಿ ಇರುವ ಆದಿಕೇಶವ (ಮೂಲ ಕೇಶವ ದೇಗುಲ) ಈ ಘಟನೆಗೆ ಸಾಕ್ಷಿ ಎನ್ನುತ್ತವೆ ಪುರಾಣಗಳು. ವಿಷ್ಣುವು ದಿವೋದಾಸನನ್ನು ಭೇಟಿ ಮಾಡಿ ನೀನು ಶಿವನು ಕಾಶಿಯಲ್ಲಿ ನೆಲೆಸಲು ಅನುಮತಿ ನೀಡಿದರೆ ನಿನಗೆ ಮೋಕ್ಷ ಸಿಗುವಂತೆ ಮಾಡುತ್ತೇನೆ ಎಂದು ಹೇಳಿದ ಮತ್ತು ಕಾಶಿಯಲ್ಲಿ ನೀನು ಒಂದು ಶಿವಲಿಂಗ ಪ್ರತಿಷ್ಠೆ ಮಾಡಿದ ತಕ್ಷಣ

ನಿನ್ನನ್ನು ಕೈಲಾಸಕ್ಕೆ ಹೋಗಲು ಪುಷ್ಪಕ ವಿಮಾನ ಬಂದರೆ ನೀನು ಸಶರೀರನಾಗಿ ಕೈಲಾಸಕ್ಕೆ ಹೋಗಬಹುದು ಅನ್ನುತ್ತಾನೆ. ಮೋಕ್ಷಕ್ಕೆ ಆಸೆ ಪಟ್ಟು ದಿವೋದಾಸನು ಶಿವನು ಕಾಶಿಗೆ ಬಂದು ನೆಲೆಸಲು ಒಪ್ಪಿ ಶಿವಲಿಂಗ ಪ್ರತಿಷ್ಠಾಪಿಸಿ ಸಶರೀರನಾಗಿ ಮೋಕ್ಷ ಲೋಕಕ್ಕೆ ಹೋಗುತ್ತಾನೆ ಆತನು ಪ್ರತಿಷ್ಠೆ ಮಾಡಿದ ಶಿವಲಿಂಗವು "ದಿವೋದಾಸೇಶ್ವರ ಶಿವ" ಎಂಬ ಹೆಸರಿನಲ್ಲಿ ದಶಾಶ್ವಮೇಧ ಘಾಟ್ ನ ವಿಶ್ವಭುಜ ಗೌರಿ ದೇಗುಲದ ಬಳಿ ಪೂಜಿಸಲ್ಪಡುತ್ತಿದ್ದಾನೆ.

ಇದು ದಂತಕಥೆಯಾದರೆ ದಾಖಲೆಗಳಲ್ಲಿರುವ ವಿಶ್ವನಾಥ ದೇಗುಲದ ಬಗ್ಗೆ ಈಗ ತಿಳಿಯೋಣ. ಗುಪ್ತರ ಕಾಲದ ಮಧ್ಯಂತರದಲ್ಲಿ 320–550CE ಯಲ್ಲಿ ಕಾಶೀ ವಿಶ್ವನಾಥ ದೇಗುಲವನ್ನು ಭವ್ಯವಾಗಿ ನಿರ್ಮಿಸಿದ್ದಾರೆಂದು ಇತಿಹಾಸ, ಚೀನೀ ಯಾತ್ರಿಕ ಹುಯೆನ್ಸ್ ತ್ಸಾಂಗ್ 635ನೇ ಇಸವಿಯಲ್ಲಿ ಭಾರತಕ್ಕೆ ಭೇಟಿ ನೀಡಿದಾಗ ಈ ದೇಗುಲದ ವರ್ಣನೆಯನ್ನು ತಮ್ಮ ಪ್ರವಾಸ ಕಥನದಲ್ಲಿ ಬರೆದಿದ್ದಾರೆ. ಇದರ ನಂತರ ಕಾಶೀ ವಿಶ್ವನಾಥ ದೇಗುಲವು ಹಲವಾರು ಬಾರಿ ದಾಳಿಗೊಳಗಾಗಿ ಮತ್ತೆ ನಿರ್ಮಾಣಗೊಂಡಿದೆ. 1194ರಲ್ಲಿ ಮಹಮದ್ ಘೋರಿಯ ಆಳ್ವಿಕೆಯಲ್ಲಿ ಈ ದೇಗುಲವನ್ನು ನಾಶಪಡಿಸಲಾಗಿದೆ. 1210–1236ರ ನಡುವೆ ಮತ್ತೊಮ್ಮೆ ಗುಜರಾತಿ ವ್ಯಾಪಾರಿಯೊಬ್ಬರು ಪುನರ್ನಿರ್ಮಾಣ ಮಾಡಿದರು. 1300ರಲ್ಲಿ ಫಿರೋಜ್ ಶಾ ಹಾಗೂ 1400ರಲ್ಲಿ ಜಾನ್ ಪುರದ ಶಾರ್ಕಿ 1485ರಲ್ಲಿ ನಾಶಪಡಿಸಿದರು. ಮೊಘಲ್ ಅಕ್ಬರನ ಚಕ್ರವರ್ತಿ ರಾಜಾತೊಡರಮಲ್ ಅವರು ಮೂಲ ಸ್ಥಳದಲ್ಲಿ ವಿಶ್ವನಾಥ ದೇಗುಲವನ್ನು ಮತ್ತೆ ನಿರ್ಮಿಸಿದರು. ಆದರೆ ತೊಡರಮಲ್ ಅವರ ಮಗಳು ಇಸ್ಲಾಂ ಆಡಳಿತಗಾರರನ್ನು ಮದುವೆಯಾಗಲು ಸಾಂಪ್ರದಾಯಿಕ ಬ್ರಾಹ್ಮಣರು ದೇಗುಲವನ್ನು ಬಹಿಷ್ಕರಿಸಿದರು.

ನಂತರ ಜಹಾಂಗೀರನ ಆಳ್ವಿಕೆಯಲ್ಲಿ ವೀರಸಿಂಗ್ ದೇವು ಅವರು ತೊಡರಮಲ್ ನಿಲ್ಲಿಸಿದ್ದ ನಿರ್ಮಾಣ ಮರು ಪ್ರಾಂಭಿಸಿ ಪೂರ್ಣಗೊಳಿಸಿ ಪೂಜೆಗಳಿಗೆ ಅಣಿ ಮಾಡಿಕೊಟ್ಟರು. 1669ರಲ್ಲಿ ಔರಂಗಜೇಬನು ಮತ್ತೆ ದೇಗುಲವನ್ನು ಧ್ವಂಸ ಮಾಡಿ, ಶಿವಲಿಂಗವನ್ನು ಸಹ ಧ್ವಂಸ ಮಾಡಿ ಅದನ್ನು ಹಾಗೆಯೇ ಬಿಟ್ಟರೆ ಮತ್ತೆ ದೇಗುಲವನ್ನು ನಿರ್ಮಿಸುತ್ತಾರೆ ಎಂದು ಆ ಸ್ಥಳದಲ್ಲಿ ಮಸೀದಿಯನ್ನು ನಿರ್ಮಿಸುತ್ತಾನೆ.

1742ರಲ್ಲಿ ಮರಾಠಾ ದೊರೆ ಮಲ್ಹಾರ್ ರಾವ್ ಹೋಳ್ಕರ್ ಮಸೀದಿಯನ್ನು ಕೆಡವಲು ಮತ್ತು ಸ್ಥಳದಲ್ಲಿ ವಿಶ್ವೇಶ್ವರ ದೇವಾಲಯವನ್ನು ಪುನರ್ನಿರ್ಮಿಸಲು ಯೋಜನೆಯನ್ನು ರೂಪಿಸಿದರು. ಆದಾಗ್ಯೂ, ಅವರ ಕಾರ್ಯರೂಪಕ್ಕೆ ಬರಲಿಲ್ಲ, ಅವಧ ಪ್ರಾಂತದ ನವಾಬನ ಮಧ್ಯಸ್ಥಿಕೆಯಿಂದಾಗಿ ಅವರಿಗೆ ಪ್ರದೇಶದ ನಿಯಂತ್ರಣವನ್ನು ನೀಡಲಾಯಿತು. 1750ರ ಸುಮಾರಿಗೆ ಜೈಪುರದ ಮಹಾರಾಜರು ಕಾಶಿ ವಿಶ್ವನಾಥ ದೇವಾಲಯವನ್ನು ಪುನರ್ನಿರ್ಮಿಸಲು ಭೂಮಿಯನ್ನು ಖರೀದಿಸುವ ಉದ್ದೇಶದಿಂದ ಸುತ್ತಲಿನ ಭೂಮಿಯ ಸಮೀಕ್ಷೆಯನ್ನು ನಡೆಸಿದರು. ಆದಾಗ್ಯೂ, ದೇವಾಲಯವನ್ನು ಪುನರ್ನಿರ್ಮಾಣ ಮಾಡುವ ಅವರ ಯೋಜನೆಯು ಕಾರ್ಯರೂಪಕ್ಕೆ ಬರಲಿಲ್ಲ.

1777ರಲ್ಲಿ ಇಂದೋರ್ ರಾಣಿ ಅಹಲ್ಯಾಬಾಯಿ ಹೋಳ್ಕರ್, ಮಸೀದಿಯ ಪಕ್ಕದಲ್ಲಿ ಕಾಶಿವಿಶ್ವನಾಥ ದೇಗುಲವನ್ನು ಹೊಸದಾಗಿ ನಿರ್ಮಿಸುತ್ತಾಳೆ. ಶಿವಲಿಂಗವನ್ನು ಬೆಳ್ಳಿಯ ತೊಟ್ಟಿಯಾಕಾರದ ರಚನೆಯಲ್ಲಿ ಪ್ರತಿಷ್ಟಿಸಲಾಯಿತು. 1835ರಲ್ಲಿ ಮಹಾರಾಜ ರಂಜಿತ್ ಸಿಂಗ್ ಅವರ ಧರ್ಮಪತ್ನಿ ವಿಶ್ವನಾಥ ದೇಗುಲದ ಗೋಪುರಕ್ಕೆ ಚಿನ್ನದ ತಗಡುಗಳನ್ನು ತೊಡಿಸಲು 1 ಟನ್ ಚಿನ್ನವನ್ನು ಕೊಡಿಸಿದರು. 1841ರಲ್ಲಿ ನಾಗಪುರದ ರಘುಜಿ ಭೋಂಸ್ಲೆ ದೇಗುಲಕ್ಕೆ ಕೆಜಿಗಟ್ಟಲೆ ಬೆಳ್ಳಿಯನ್ನು ಕೊಟ್ಟರು. 1860ರಲ್ಲಿ ನೇಪಾಳದ ರಾಜ ಏಳು ಅಡಿ ಎತ್ತರದ ಕಲ್ಲಿನ ನಂದಿಯ ವಿಗ್ರಹ ಕೆತ್ತಿಸಿದರು. ಕೆಲವು ವರ್ಷಗಳು ಇಲ್ಲಿ ವಂಶಪಾರಂಪರ್ಯದಿಂದ ಪೂಜೆಗಳು ನಡೆಯುತ್ತಿದ್ದವು. 1983ರಲ್ಲಿ ಈ ಕಾಶೀ ವಿಶ್ವನಾಥ ದೇಗುಲವನ್ನು ಉತ್ತರ ಪ್ರದೇಶ ಸರ್ಕಾರ ತನ್ನ ಸುಪರ್ದಿಗೆ ತೆಗೆದು ಕೊಂಡಿತು. ನಂತರ 2017ರಲ್ಲಿ ಹೊಸ ವಿಶ್ವನಾಥ ಕಾರಿಡಾರ್ ಯೋಜನೆ ಜಾರಿಗೆ ಬಂದು ಜನಸಂದಣಿ ತಡೆ ವಿಶ್ವನಾಥ ದೇಗುಲದ ಸುತ್ತಲೂ ಇದ್ದ ಅಂಗಡಿಗಳನ್ನು ತೆರವು ಮಾಡಿ ವಿಶಾಲ ಪ್ರದೇಶವನ್ನು ನಿರ್ಮಿಸಲಾಯಿತು. ಜ್ಞಾನವಾಪಿ ಬಾವಿ ಹಾಗೂ ನಂದಿ ವಿಗ್ರಹವನ್ನು ದೇವಾಲಯದ ಆವರಣದೊಳಗೆ ತೆಗೆದುಕೊಳ್ಳಲಾಗಿದೆ.

***

ಯುದ್ಧ... ಯಾರು ಬಿದ್ದ? ಯಾರು ಗೆದ್ದ?

– ನಾಗರತ್ನ ಚಂದ್ರಶೇಖರ

ಢಂ... ಢಂ... ರಾತ್ರಿ ಆಗಾಗ ಪಟಾಕಿ ಹೊಡೆಯುವ ಶಬ್ದ ಕೇಳಿ ಮಲಗಿರುವ ಮಕ್ಕಳು ಬೆಚ್ಚಿ ಬೀಳಬಹುದು. ರಾತ್ರಿ ಪಟಾಕಿ ಹೊಡೆದು ಸಂಭ್ರಮಿಸುವ ಕ್ರಿಕೆಟ್ ಪ್ರೇಮಿಗಳಿಗೆ ಮಕ್ಕಳೇನು, ದೊಡ್ಡವರೂ ಶಪಿಸಲಾರರು. ದೀಪಾವಳಿಯ ಆಸುಪಾಸಿನಲ್ಲಿ ಹಗಲು, ರಾತ್ರಿ ಸುಡುಮದ್ದಿನ ಶಬ್ದ, ವಾಸನೆ ಹಾಗೂ ಹೊಗೆ ವಾತಾವರಣವನ್ನು ಕಲುಷಿತಗೊಳಿಸುತ್ತದೆ. ಆದರೂ ನಾವು ಪಟಾಕಿ ಹೊಡೆಯುವುದನ್ನು ಬಿಡುವುದಿಲ್ಲ. ವಿಷ್ಣುಚಕ್ರ, ರಾಮಬಾಣ, ಏರೋಪ್ಲೇನ್ ಬಾಂಬು ಒಂದೆರಡು ಅಲ್ಲ. ಈ ಮೋಜು ಮಸ್ತಿ ಎಲ್ಲ, ಸಂಭ್ರಮದ ಸಂತೋಷದ ಆಚರಣೆಗೆ.

ಈ ಮಕ್ಕಳ ಆಟ ಈಗ ಕಳೆದೆರಡು ತಿಂಗಳಿಂದ ದೊಡ್ಡವರು ದೊಡ್ಡ ಮಟ್ಟದಲ್ಲಿ ಆಡತೊಡಗಿದಾಗ ಅದು ದೀಪಾವಳಿಯಲ್ಲ! ಶೋಕಾವಳಿಯಾಗಿದೆ. ವಿಶ್ವದ ದೈತ್ಯ ರಾಷ್ಟ್ರಗಳು ಶಕ್ತಿಪ್ರದರ್ಶನಕ್ಕಾಗಿ ಆಯಾ ದೇಶಗಳ ಶಸ್ತ್ರಾಗಾರಗಳಲ್ಲಿ ತುಂಬಿ ತುಳುಕುತ್ತಿರುವ ಬ್ರಹ್ಮಾಸ್ತ್ರಗಳನ್ನೆಲ್ಲ ಸಾವಿರಾರು ಮೈಲಿಗಳ ಗುರಿಯನ್ನು ಮುಟ್ಟಲು ಶರವೇಗದಲ್ಲಿ ಸೊಯ್ ಸೊಯ್ ಎಂದು ಶತ್ರು ನೆಲೆಗಳ ಮೇಲೆ ಅಪ್ಪಳಿಸುತ್ತಿದ್ದರೆ.. ವಿಜ್ಞಾನದ ಅತಿ ವೇಗದ ಪ್ರಗತಿಯಿಂದಾಗಿ ಇಂದು ಜೆಟ್ ಯುಗದಲ್ಲಿರುವ ನಮಗೆ ಪರಮಾಣು ಬಾಂಬು ಎನ್ನುವ ಪಾಶುಪತಾಸ್ತ್ರ ಬೆರಳ ತುದಿಯಲ್ಲಿದೆ. ಮಹಾಭಾರತ ಯುದ್ದ ನಾವು ಓದಿದ್ದೆವು, ಕೇಳಿದ್ದೆವು ಅಷ್ಟೇ. ಅದಕ್ಕಿಂತ ನೂರುಪಟ್ಟು ವಿನಾಶಕಾರಿ ಶಸ್ತ್ರಾಸ್ತ್ರಗಳು ಜನನಾಯಕರ ಪೊಳ್ಳು ಪ್ರತಿಷ್ಠೆಗಾಗಿ ಅಮಾಯಕ ಜನರನ್ನು ಆಹುತಿ ಪಡೆಯುತ್ತಿವೆ. ಆದರೆ ಈ ಸ್ಟಾರ್ ವಾರ್ ಯುದ್ಧಗಳೆಲ್ಲ ಭೂಮಿ ಮೇಲಲ್ಲ, ಆಕಾಶದಲ್ಲೇ!

ಕ್ಷಣದಲ್ಲಿ ಜಗತ್ತನ್ನೇ ನಾಶಮಾಡಬಲ್ಲ ವಿನಾಶಕಾರಿ ಅಣುಬಾಂಬುಗಳನ್ನು ಇಟ್ಟುಕೊಂಡವರೆಲ್ಲ ಜಗ್ಗದೆಯೆ, ಕುಗ್ಗದೆಯೇ ನುಗ್ಗಿ ನಡೆಯುತ್ತಲೇ ಇರುವಾಗ ಅವರಿಗೆ ಸಾಮಾನ್ಯ ಜನರೆಲ್ಲ ಕ್ರಿಮಿಗಳಾಗಿ ಕಂಡರೆ ಆಶ್ಚರ್ಯವಿಲ್ಲ. ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ ಎಂಬ ಗಾದೆಯಂತೆ ಹತ್ತಾರು ವರ್ಷ ಕಟ್ಟಿ ಬೆಳೆಸಿದ ಸುಂದರ ನಗರಗಳ ಸೇತುವೆಗಳು, ಗಗನಚುಂಬಿ ಕಟ್ಟಡಗಳು, ಉದ್ಯಾನವನಗಳು, ಆಸ್ಪತ್ರೆಗಳು, ವಾಣಿಜ್ಯ ಮಳಿಗೆಗಳು, ವಿಶ್ವವಿದ್ಯಾಲಯಗಳು ಒಂದೇ ಒಂದು ಕ್ಷಿಪಣಿಯ ಹೊಡೆತಕ್ಕೆ ಬೆಂಕಿ ಪೆಟ್ಟಿಗೆಗಳಂತೆ ಉರುಳಿ ಭಸ್ಮವಾಗುತ್ತಿವೆ. ಸತ್ತವರಿಗೆ ವೀರಸ್ವರ್ಗ ಸಿಗುತ್ತದೆಯೋ ಇಲ್ಲವೋ, ಆದರೆ ಅರ್ಧಂಬರ್ಧ ಗಾಯಗೊಂಡು ಉಳಿದವರಿಗೆ ನರಕವಂತೂ ಇಲ್ಲೇ ಭೂಮಿಯ ಮೇಲೆ ಸೃಷ್ಟಿ ಆಗುತ್ತಿದೆ. ಆಹಾರ, ನೀರು, ಗಾಳಿ ಆಶ್ರಯವಿಲ್ಲದೆ ಲಕ್ಷಾಂತರ ಜನ ವಿಧಿಯ ಪಾಲಾಗುತ್ತಿದ್ದಾರೆ. ದಿನನಿತ್ಯ ಸಾವಿನ ಸಮೀಪವೇ ಬದುಕುತ್ತಿರುವ ಜನಸಾಮಾನ್ಯರು ತಮ್ಮದಲ್ಲದ ತಪ್ಪಿಗೆ ಸತ್ತವರಿಗಾಗಿ ಅಳುವುದಕ್ಕೂ ಅವರ ಕಣ್ಣೀನಲ್ಲಿ ನೀರು ಬತ್ತಿ ಹೋಗಿದೆ. ಹೆಣ್ಣು, ಹೊನ್ನು ಮಣ್ಣು, ಇವುಗಳಿಗಾಗಿ ಜಗತ್ತಿನಲ್ಲಿ ಅದೆಷ್ಟೋ ಯುದ್ಧಗಳು ನಡೆದುಹೋಗಿದೆ ನಿಜ. ಯುದ್ಧಗಳಲ್ಲಿ ನ್ಯಾಯ ನೀತಿ, ದಯೆ, ಅನುಕಂಪಗಳಿಗೆ ಸ್ಥಾನವಿಲ್ಲ. ಎಂತೆಂತಹ ಸಾಮ್ರಾಜ್ಯಗಳೇ ಅಳಿದು ಹೋಗಿವೆ.

ಯುದ್ಧ ಯಾರಿಗೆ ಬೇಕು? ಯಾರಿಗೆ ಬೇಡ? ಒಂದು ದೇಶದ ಸಮಗ್ರತೆಗೆ ಧಕ್ಕೆಬರುವ ಸಂಭವ ಬಂದಾಗ ಆಯಾ ದೇಶದ ರಕ್ಷಣೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಆಯಾ ದೇಶಗಳ ನಾಯಕರಿಗೆ ಇದ್ದೇ ಇರುತ್ತದೆ. ಎದುರಾಳಿಗಳಿಗೆ ತಕ್ಕ ಪಾಠ ಕಲಿಸುವ ನೆಪದಲ್ಲಿ ವಿನಾಶಕಾರೀ ಶಸ್ತ್ರಾಸ್ತ್ರಗಳನ್ನು ಉಪಯೋಗಿಸಿ ಇಡೀ ವಿಶ್ವವನ್ನೇ ಅಪಾಯದಂಚಿಗೆ ತಳ್ಳುವ ದುಸ್ಸಾಹಸ ಖಂಡನೀಯ. ಈಗ ಆಗಿರುವುದು ಅದೇ. ಯುದ್ಧವಾರ್ತೆಗಳನ್ನು 24 ಗಂಟೆ ಬಿತ್ತರಿಸುವ ಸುದ್ದಿಮೂಲಗಳು ತೋರಿಸುತ್ತಿರುವ ಚಿತ್ರಗಳು ಎದೇ ನಡುಗಿಸುವಂತಿದೆ. ಯುದ್ಧದ ಬಗ್ಗೆ ಸಣ್ಣ ಹುಡುಗನೊಬ್ಬ ಹೇಳುತ್ತಿದ್ದ ಮಾತು "It thrills but it kills also."

ಯುದ್ಧದ ವಿಷಯ ಕೇಳಿ ತಲೆ ಬಿಸಿಯಾಗುತ್ತಿದೆಯಲ್ಲವೇ, ತಾಳಿ ಒಂದಷ್ಟು ಯುದ್ಧಕ್ಕೆ ಸಂಬಂಧಪಟ್ಟ ನಗೆ ಬಾಂಬುಗಳನ್ನು ಹಾಕುವೆ ಈಗ.

1. ಸುಮ್ನೆ ಇರಾನ ಅಂದ್ರೆ ಇರಾಕೇ ಬಿಡಾಕಿಲ್ಲ.
2. ಗೆಳೆಯನನ್ನ ಹುಡುಕುತ್ತಾ ಬಂದ ಪ್ರಶಾಂತ, "ಅಮ್ಮ ಸತೀಶ ಎಲ್ಲಿ?'' ಎಂದ. "ಅವ ಸೌದಿಗೆ ಹೋದ.."

“ಅಯ್ಯೋ ನನಗೆ ಹೇಳ್ಳೇ ಇಲ್ವಲ್ಲ... ಪಾಸ್ಪೋರ್ಟ್ ಯಾವಾಗ ಮಾಡಿಸಿಕೊಂಡ" ಅಂತ ಕೇಳ್ತಾ ಇರಬೇಕಾದರೇ ಹೆಗಲ್ ಮೇಲೆ ಸೌದೆ ಕಟ್ಟು ಹಿಡಿದು ಬರುತ್ತಿದ್ದ ಗೆಳೆಯನನ್ನು ನೋಡಿ ಅವಕ್ಕಾದ.

3. ಶಾಲೆಯಲ್ಲಿ ಮಾಸ್ತರು ಪಾಠ ಮಾಡುತ್ತಾ "ಮಕ್ಕಳೇ ಈ ದಿನ ನಾನು ಸಂಧಿಗಳ ಬಗ್ಗೆ ಹೇಳುವೆ. ನಿಮಗೆ ಯಾರಿಗಾದರೂ ಈ ಬಗ್ಗೆ ಗೊತ್ತಿದೆಯೇ ?
   "ಸರ್ ನಂಗೆ ಗೊತ್ತು". ಮೋನ ಕೈ ಎತ್ತಿದ. “ಸರ್, ಅದೇ 'ಹೊರ್ಮುಜ್ ಜಲಸಂಧಿ' ಅಂತ ಮನೆನಲ್ಲಿ ಅಪ್ಪ ಮಾತಾಡ್ತಾ ಇದ್ರು. ಅದು ಭಾರತಕ್ಕೆ ಆಗಮ ಸಂಧಿಯಂತೆ. ಅಮೆರಿಕಕ್ಕೆ ಲೋಪ ಸಂಧಿಯಂತೆ. ಇರಾನ್‌ಗೆ ಆದೇಶ ಸಂಧಿ ಅಂತೆ". ಇನ್ನೊಬ್‌ಬ ಕೈ ಎತ್ತಿ, "ಸಾರ್... ಇವನ ಮನೆಸಂದೀಲೆ ನಮ್ಮನೆ ಇರೋದು" ಮೇಷ್ಟ್ರಿಗೆ ಮಕ್ಕಳ ಉತ್ತರ ಕೇಳಿ ಹಲ್ಲು ಸಂದೀಲಿ ಕಡಲೆ ಸಿಕ್ಕಿಕೊಂಡಂತಾಯಿತು.
4. "ಹೊಸ ಲೋಲಾಕು ಬಂದಿದೆಯೆ?” ಅಂಗಡಿಯಲ್ಲಿ ಹುಡುಗಿ ಕೇಳ್ತಾ ಇದ್ಲು.
   “ಯಾವುದಮ್ಮ?”,
   “ಅದೇ ಗ್ಯಾಸ್ ಸಿಲಿಂಡರ್ ಮಾಡೆಲ್ಲು”.
   "ಹೂಂ ಇದೆ, ಅದರ ಜೊತೆಗೆ ಅಮೆರಿಕದ ಜೆಟ್ 35ರ ಮಾಡಲ್ ಹೇರ್ ಕ್ಲಿಪ್ ಬಂದಿದೆ."
5. "ಗ್ಯಾಸ್ ಟ್ರಬಲ್‌ಗೆ ನಮ್ಮಲ್ಲಿ ಪರಿಹಾರ ಇದೆ." ಬೋರ್ಡ್ ಕೆಳಗಿದ್ದ ಡಾಕ್ಟರ್ ಹೆಸರನ್ನು ನೋಡದ ಜನ ಉದ್ದನೆಯ ಸಾಲಿನಲ್ಲಿ ಖಾಲಿ ಸಿಲಿಂಡರ್ ಹಿಡಿದು ನಿಂತರು.
6. ಮಗಳ ಮದುವೆ ಫಿಕ್ಸ್ ಆದ ಖುಷಿಯಲ್ಲಿ ಅಮ್ಮ ಹೇಳುತ್ತಿದ್ದಳು, "ಹುಡುಗ ಗ್ಯಾಸ್ ಏಜೆನ್ಸಿ ಅಂಗಡಿ ಇಟ್ಟುಕೊಂಡಿದ್ದಾನೆ. ನನ್ನ ಮಗಳು ಎರಡು ಮಾತಿಲ್ದೆ ಮದುವೆಗೆ ಒಪ್ಪಿಕೊಂಡಳು ರೀ".
7. "ಶಾಂತಕ್ಕ ಕೇಳ್ತಾ ಇದ್ಯಾ ಸೈರನ್ ಶಬ್ದ”
   “ಅಯ್ಯೋ ಆ ಇರಾನ್ ಯುದ್ಧ ಇಲ್ಲಿಗೂ ಬರ್ತಾ ಇದ್ಯಾ?"
   "ಅಯ್ಯೋ ಅದು ನಮ್ಮನೆ ಮಿಲ್ಕ ಕುಕ್ಕರ್ ಶಬ್ದ. ದಿನಾ ಬೆಳಿಗ್ಗೆ, ಸಂಜೆ ಹಾಲು ಕಾಯಿಸುವಾಗ ಅದು ಅದೇ ರೀತಿ ಸೈರನ್ ಕೂಗುತ್ತೆ."
8. ಯುದ್ದ ಸಾಕು... ಜೋಕ್ಸ್ ಬೇಕು ಅಲ್ಲವಾ??

***



ಮಂಡಲಕಲೆ – ರಚನೆ: ಶ್ರೀಮತಿ ರತ್ನಾ ಮೂರ್ತಿ

ತಾಯಿ, ಹೆತ್ತ ಮಗುವಿಗೆ ಮಾತ್ರವೇ?

– ರೇಣುಕಾ ದೇಸಾಯಿ

ದೃಶ್ಯ ಮಾಧ್ಯಮದ ಎಲ್ಲಾ ಪ್ರಸಾರಾಂಗಣಗಳಲ್ಲಿ ಒಂದೇ ಸುದ್ದಿ, ಜಿಲ್ಲಾಧಿಕಾರಿ ಪವಿತ್ರ ಆದಿತ್ಯ ನಡೆಸಿಕೊಟ್ಟ ರಾಜ್ಯೋತ್ಸವ ಕಾರ್ಯಕ್ರಮದ ಬಗ್ಗೆ ಪ್ರಶಂಸೆಯ ಸುರಿಮಳೆ. ಇದನ್ನು ವೀಕ್ಷಿಸುತ್ತಾ ಕುಳಿತ ಅವಳ ತಂದೆತಾಯಿಗಳ ಸಂತೋಷ ಮೇರೆ ಮೀರಿದೆ.

ಪವಿತ್ರ ತನ್ನ ಕಾರಿನಿಂದ ಇಳಿದವಳೇ ದಿನದಂತೆ ಒಳಗೆ ನಡೆಯದೆಯೇ ಮನೆಯ ಮುಂದಿರುವ ಹೂದೋಟದ ಹುಲ್ಲು ಹಾಸಿನ ಮೇಲೆ ನಿಡಿದಾಗಿ ಕಾಲು ಚಾಚಿ ಕುಳಿತು, ಯಾವುದೋ ಭಾವನಾಲೋಕಕ್ಕೆ ಜಾರಿದಂತೆ ಕಂಡಿತು. ಹಸನ್ಮುಖಿಯಾಗಿ, ಯಾವುದೇ ಒತ್ತಡ, ಗಡಿಬಿಡಿ ಇಲ್ಲದೆ ಕುಳಿತ ಕಮಿಷನರ್ ಮೇಡಂನನ್ನು ಕಂಡ ಆಳು–ಕಾಳುಗಳಿಗೆ ನೆಮ್ಮದಿಯ ಆಶ್ಚರ್ಯ!

ಮಂತ್ರಿ ಮಹೋದಯರಿಂದ ಕಾರ್ಯಕ್ರಮದ ಬಗೆಗೆ, ತನ್ನ ಬಗೆಗೆ ಮೂಡಿಬಂದ ಪ್ರಶಂಸೆಗಿಂತ ಅಂದಿನ ಕಾರ್ಯಕ್ರಮದ ಕೊನೆಗೆ ಜನತೆಗೋಸ್ಕರ ಏರ್ಪಡಿಸಿದ್ದ ಚರ್ಚಾಸ್ಪರ್ಧೆ '**ತಾಯಿ, ಹೆತ್ತ ಮಗುವಿಗೆ ಮಾತ್ರವೇ**?'ಎನ್ನುವ ವಿಷಯ ಅವಳನ್ನು ಬಹುದೂರ ದೂರದ ನೆನಪಿನಂಗಳಕ್ಕೆ ತೆಗೆದುಕೊಂಡು ಹೋಗಿ ಭಾವುಕಳನ್ನಾಗಿಸಿತ್ತು.

"ಅಮ್ಮಾ... ಅಮ್ಮಾ.... ಆಟೋದಲ್ಲಿ ಯಾರುಯಾರೋ ಹುಡುಗರು, ಹುಡುಗಿಯರು ಬಂದಿದ್ದಾರೆ. ಬನ್ನಿ, ನೋಡಿ".

"ಯಾರೇ ಅದು, ಗೌರಿ?" ಎನ್ನುತ್ತಾ ಹೊರಗಡೆ ಬಂದ ವಸುಂಧರೆಗೆ ಜೀವ ಬಾಯಿಗೆ ಬಂದಂತಾಯ್ತು. ನೇತ್ರಾಳನ್ನು ಅನಾಮತ್ತಾಗಿ ಹುಡುಗ ಹುಡುಗಿಯರ ಗುಂಪು ಹೊತ್ತು ತರುತ್ತಿರುವದನ್ನು ನೋಡಿ, ಮಗಳಿಗೆ ಏನಾಗಿದೆ ಎನ್ನುವದಕ್ಕಿಂತ, ಅಕ್ಕಪಕ್ಕದವರು ಯಾರಾದರೂ ಗಮನಿಸಿದರೆ? ಎನ್ನುವ ಅಳುಕೇ ದೊಡ್ಡದಾಗಿತ್ತು ಅವಳಿಗೆ. ನೇತ್ರಾಳನ್ನು ಕೋಣೆಯ ಮಂಚದ ಮೇಲೆ ಮಲಗಿಸಿದ ಸ್ನೇಹಿತರ ಗುಂಪು ಅಪರಾಧಿ ಮನೋಭಾವವುಳ್ಳವರಾಗಿ ಯಾವ ವಿವರಣೆಯನ್ನೂ ಕೊಡದೆ, ಒಂದು ಕ್ಷಣವೂ ಅಲ್ಲಿ ನಿಲ್ಲದೆ ಹೋಗಿಯೇಬಿಟ್ಟರು.

ಅಪ್ಪ ದೂರದ ಹಳ್ಳಿಗೆ ವರ್ಗಾವಣೆಗೊಂಡು, ಬ್ಯಾಂಕ್, ಮನೆ ಎನ್ನುವ ವ್ಯತ್ಯಾಸವಿಲ್ಲದೆ ದುಡಿಯುವ ಬ್ಯಾಂಕ್ ಅಧಿಕಾರಿ. ಆದಿತ್ಯನ ದುಡಿಮೆಯ ಫಲ ಅನುಭೋಗಿಸುವ ಫಲಾನುಭವಿಗಳು ನೇತ್ರ ಮತ್ತು ವಸುಂಧರೆ.

ವಸುಂಧರೆ ತನ್ನ ಮಲಗುವ ಕೋಣೆ ಸೇರಿ, ನೋವು, ಆತಂಕ ಅನುಭೋಗಿಸುತ್ತಿದ್ದರೆ, ಬಾಹ್ಯ ಪ್ರಪಂಚದ ಪರಿವೆಯೇ ಇಲ್ಲದೆ ಮಲಗಿದ್ದಾಳೆ ನೇತ್ರ. ಇವರೊಂದಿಗೆ ಇರುವ ಗೌರಿಗೆ ಮಾತ್ರ ದಿಕ್ಕುತೋಚದ ಪರಿಸ್ಥಿತಿ. ದೊಡ್ಡಮ್ಮನವರ ದುಃಖ, ನೋವಿನ ಅರಿವು ಅವಳಿಗೆ ಇದೆ. ಚಿಕ್ಕಮ್ಮನವರ ಬಿಂದಾಸ್ ಜೀವನ ಶೈಲಿಯೂ ತಿಳಿದಿದೆ.

ನೇತ್ರಾಳ ಶೂ ತೆಗೆದು, ಪ್ಯಾಂಟಿನ ಬೆಲ್ಟ್ ಸಡಿಲಗೊಳಿಸಿ, ಒದ್ದೆ ಬಟ್ಟೆಯಲ್ಲಿ ಮುಖ, ಕೈ–ಕಾಲು, ಪಾದ ಒರೆಸಿ, ತನಗೆ ತಿಳಿದ ಆರೈಕೆ ಮಾಡಿದ ಗೌರಿ, "ದೇವರೇ, ಚಿಕ್ಕಮ್ಮನವರನ್ನು ಎಚ್ಚರಗೊಳಿಸು, ಒಳ್ಳೆಯ ಬುದ್ಧಿ ಕೊಡು" ಹಾಗಂತ ಕೇಳಿಕೊಂಡು ದೇವರ ಮುಂದೆ ತುಪ್ಪದ ದೀಪ ಹಚ್ಚಿಟ್ಟು, ಒಂದು ಲೋಟಾ ಬಿಸಿ ಹಾಲಿನೊಂದಿಗೆ ವಸುಂಧರೆಯ ಕೋಣೆಗೆ ಬಂದು, "ಅಮ್ಮಾ ಎಲ್ಲಾ ಸರಿಹೋಗುತ್ತೆ, ಒಂದು ಲೋಟ ಹಾಲು ಕುಡಿಯಿರಿ" ಎಂದು ಒತ್ತಾಯದಿಂದ ಹಾಲು ಕುಡಿಸಲು ಯಶಸ್ವಿಯಾದ ಗೌರಿಯನ್ನು ಗಾಢವಾಗಿ ತಬ್ಬಿ, ಮನಃಪೂರ್ತಿ ಅತ್ತಳು ವಸುಂಧರೆ.

ವಸುಂಧರೆಯ ದುಃಖ ಶಮನವಾಗಲಿ ಎಂದು, ಅವಳ ದುಃಖಕ್ಕೆ ಭಂಗ ತರದಂತೆ ಸಂತೈಸಿದಳು ಗೌರಿ.

“ಪವಿತ್ರ..., ಏನಮ್ಮಾ ದೊಡ್ಡ ಹುದ್ದೆ ನಿರ್ವಹಿಸುವವಳು ನೀನು, ಹೀಗೆ ಯೋಚನೆ ಮಾಡುತ್ತಾ ಕುಳಿತರೆ ನಿನ್ನಮ್ಮನಿಗೆ ಎಷ್ಟು ಆತಂಕ ಗೊತ್ತಾ?” ಎನ್ನುತ್ತಾ ಅಮ್ಮ ಪಕ್ಕದಲ್ಲಿ ಕುಳಿತರೆ ಹಸನ್ಮುಖಿಯಾಗುವವಳು ಜಿಲ್ಲಾಧಿಕಾರಿ ಪವಿತ್ರ.

“ಅಮ್ಮಾ..., ಈ ದಿನ ನನ್ನ ಹುಟ್ಟುಹಬ್ಬ, ಈ ಸಂತೋಷ ಅನುಭವಿಸಲು ನನ್ನನ್ನು ಒಬ್ಬಂಟಿಯಾಗಿ ಬಿಡಮ್ಮ”

ಅಮ್ಮನಿಗೆ ಆಶ್ಚರ್ಯ, “ನವೆಂಬರ್ ೧ ನೇ ತಾರೀಖು ಇವಳ ಹುಟ್ಟುಹಬ್ಬನಾ? ಏಪ್ರಿಲ್ ೨೫ ನೇ ತಾರೀಖು ಅಲ್ವೇ?”

ಅಮ್ಮನ ಪ್ರಶ್ನೆಗೆ ಉತ್ತರ ಕೊಡುವ ಗೋಜಿಗೂ ಹೋಗದೆ ಪವಿತ್ರ ಮತ್ತೆ ತನ್ನ ಬಾಲ್ಯದ ನೆನಪುಗಳಿಗೆ ಜಾರಿದಳು.

ಪುಟ್ಟಗೌರಿ ತನ್ನ ೬ನೇ ವಯಸ್ಸಿನಲ್ಲಿ ತಂದೆ–ತಾಯಿ ಕಳೆದುಕೊಂಡ ಅನಾಥೆ. ವಸುಂಧರೆಯ ತೌರೂರಿನ ಮನೆಯೊಂದರಲ್ಲಿ ಹುಟ್ಟಿದ ನತದೃಷ್ಟೆ. ಇವಳ ಕೈ ಹಿಡಿದು ಕರೆದುಕೊಂಡು ಬಂದಿದ್ದಳು ವಸುಂಧರೆ, ಎಷ್ಟಿದ್ದರೂ ಹುಡುಗಿ, ಚಿಕ್ಕ–ಪುಟ್ಟ ಕೆಲಸಕ್ಕೆ ಆಸರೆ ಆದೀತು ಎನ್ನುವ ಭರವಸೆಯಿಂದ.

ಅನಾಥ ಮಕ್ಕಳಿಗೆ ಅತೀ ಬುದ್ಧಿವಂತಿಕೆ ಎನ್ನುವಂತೆ ಗೌರಿ ಬಲುಬೇಗ ವಸುಂಧರೆ, ಆದಿತ್ಯರ ಪ್ರೀತಿ, ವಿಶ್ವಾಸ ಗಳಿಸಿದಳು, ಚಿನ್ನಾರಿ ಮುತ್ತನಂತೆ ಮನೆಯ ಹೊರಗೆ, ಒಳಗೆ ಅಡ್ಡಾಡಿಕೊಂಡು ವಯಸ್ಸಿಗೆ ಮೀರಿದ ಸಹಾಯ ಮಾಡುತ್ತಾ, ಉತ್ಸಾಹದ ಚಿಲುಮೆಯಂತಿದ್ದವಳ ಚೂಟಿತನ ಕಂಡು ಆದಿತ್ಯ ಅವಳ ೭ನೇ ವಯಸ್ಸಿಗೆ ಸಮೀಪ ಇರುವ ಸರ್ಕಾರಿ ಶಾಲೆಗೆ ಸೇರಿಸಿದ.

“ಗೌರಿ, ಇಂದಿನಿಂದ ತಪ್ಪದೆ ಶಾಲೆಗೆ ಹೋಗು, ನಿನಗೆ ಬೇಕಾದ್ದನ್ನೆಲ್ಲಾ ಕೊಡಿಸುವೆ, ಓದುತ್ತಾ ಮೊದಲಿನಂತೆ ಅಮ್ಮನಿಗೆ ಸಹಾಯ ಮಾಡಬೇಕು ಆಯ್ತಾ?”

“ಓ!! ಆಯ್ತು” ಎಂದು ಹಿಗ್ಗಿನಿಂದ ಒಪ್ಪಿದ್ದಳು ಗೌರಿ.

ಆದಿತ್ಯ, ವಸುಂಧರೆಯರದು ಸಾತ್ವಿಕ ಜೀವನ, ಪೂಜೆ, ಪುನಸ್ಕಾರ, ಜಪ–ತಪ, ಅನುಷ್ಠಾನಗಳನ್ನು ಒಳಗೊಂಡ ಸಜ್ಜನಿಕೆಯ ಜೀವನ. ಅವರ ಬೆಳಗಿನ ದಿನಚರಿ ಪ್ರಾರಂಭವಾಗುವುದೆ ವಸುಂಧರೆಯ ಸ್ನಾನ, ತದನಂತರ ದೇವರ ನಿತ್ಯ ಪೂಜೆ ಮತ್ತು ಸಕಲ ದೇವತೆಗಳ ಸ್ತೋತ್ರ ಪಠಣದೊಂದಿಗೆ. ಇದನ್ನೆಲ್ಲಾ ಕೇಳುತ್ತಾ, ಮನನ ಮಾಡುತ್ತಾ, ಕಸಗುಡಿಸುವ, ನೆಲ ಒರೆಸುವ, ಬೀದಿ ಬಾಗಿಲಿಗೆ, ಮನೆಯ ಅಂಗಳಕ್ಕೆ ನೀರು ಹಾಕಿ, ಅಡುಗೆಮನೆಯ ಸಣ್ಣಪುಟ್ಟ ಕೆಲಸದಲ್ಲಿ ವಸುಂಧರೆಗೆ ಸಹಾಯ ಮಾಡುವುದು ಗೌರಿಯ ಕೆಲಸವಾದರೆ, ಬೀದಿಬಾಗಿಲಿಗೆ ಸುಂದರವಾದ ರಂಗವಲ್ಲಿಯಿಂದ ಸಿಂಗರಿಸಿ, ಸ್ನಾನಕ್ಕೆ ಹೋಗುವದು ನೇತ್ರಾಳ ಕೆಲಸ.

ನೇತ್ರಾ, ಆದಿತ್ಯ–ವಸುಂಧರೆಯರ ಪ್ರೀತಿಯ ದ್ಯೋತಕವಾಗಿ ಅಂಕುರಿಸಿದ ಕುಸುಮಬಾಲೆ, ಮುಗ್ಧ ಮಲ್ಲಿಗೆ.

“ಪವಿತ್ರ, ಎಷ್ಟೊತ್ತಿನಿಂದ ಹಾಗೆ ಕುಳಿತಿದ್ದೀಯಾ, ಸಂಜೆ ಹೋಗಿ ರಾತ್ರಿ ಆಯಿತು, ನಿನಗೆ ರಸಭಂಗವಾಗಬಾರದೆಂದು ನಾನು ಮತ್ತು ನಿನ್ನ ತಂದೆ ರಾತ್ರಿ ಊಟ ಮುಗಿಸಿ, ಹೀಗೆ ಒಂದು ಸುತ್ತು ನೆಡೆದುಕೊಂಡು ಬರುತ್ತೇವೆ, ನೀನು ಫ್ರೇಶ್ ಆಗು, ಊಟ ಮುಗಿಸು” ಎನ್ನುತ್ತಾ ಬೀದಿ ಬಾಗಿಲಿಗೆ ಬಂದ ಗಂಡ–ಹೆಂಡತಿಯರು, ಬಾಗಿಲಲ್ಲಿ ಇದ್ದ ಪೊಲೀಸ್ ಪೇದೆಗೆ “ಜಿಲ್ಲಾಧಿಕಾರಿಗಳು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೆ. ಮನೆಯ ಕಡೆಗೆ ಗಮನವಿರಲಿ” ಎಂದು ತಾಕೀತು ಮಾಡಿ, ಬೀದಿಗಿಳಿದರು.

ಅಪ್ಪ, ಅಮ್ಮ ಹೇಳಿದ ಮಾತು ಪವಿತ್ರಳ ಯೋಚನಾ ಲಹರಿಗೆ ಭಂಗ ತರಲಿಲ್ಲ. ಅವಳು ಅವಳದೇ ನೆನಪಿನ ಸುಳಿಯಲ್ಲಿ ತೇಲಿದ್ದಳು.

ವರ್ಷ ಕಳೆದಂತೆ ನೇತ್ರಾಳ ಗೆಳೆಯರ ಬಳಗ ದೊಡ್ಡದಾಯಿತು. ಶ್ರೀಮಂತಿಕೆಯ ಪ್ರಭಾವ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ, ಎರಡೂ ಸೇರಿ ಅಡ್ಡದಾರಿಗೆ ಎಳೆದೊಯ್ದಿತ್ತು. ಆಗಾಗ ಅವಳ ವರ್ತನೆ, ಅವಳು ಉಂಟುಮಾಡುವ ಅವಘಡಗಳು ವಸುಂಧರೆಗೆ ಚಿಂತೆ, ದುಃಖ, ಅವಮಾನ ತಂದುಒಡ್ಡುತ್ತಿತ್ತು. ಮನದ ತಳಮಳ ಯಾರಿಗೂ ಹೇಳಲಾರಳು. ಗಂಡನಿಗೆ ಬ್ಯಾಂಕ್ ನಲ್ಲಿರುವ ಕೆಲಸದ ಒತ್ತಡದೊಂದಿಗೆ ಸಂಸಾರದ ಒತ್ತಡದ ಛಾಯೆ ಕೂಡಾ ಬೀಳದಂತೆ ನೋಡಿಕೊಂಡ ಸದ್ಗುಣಿ.

ತನ್ನ ಗಂಡ ಅವನ ಕಾರ್ಯಕ್ಷೇತ್ರದಲ್ಲಿ ಉನ್ನತಿ ಹೊಂದಲಿ, ಮಗಳು ಅವಳ ವಿದ್ಯಾಭ್ಯಾಸದಲ್ಲಿ ಮೊದಲಿಗಳಾಗಲಿ ಎಂಬ ಮಹತ್ವಾಕಾಂಕ್ಷೆಯುಳ್ಳ ಹೆಣ್ಣು ಮಗಳು ವಸುಂಧರೆ. ಇದರೊಂದಿಗೆ ತಾನೂ ಕೂಡಾ ಒಳ್ಳೆಯ ಮಡದಿ, ಒಳ್ಳೆಯ ತಾಯಿ ಎಂದು ಸಮಾಜ ಗುರುತಿಸಲಿ ಎಂಬುವ ಹಂಬಲದೊಂದಿಗೆ ಎಲ್ಲರಿಗಿಂತ ಭಿನ್ನವಾಗಿ ಬಾಳಬೇಕೆಂದು ಆಸೆಪಟ್ಟವಳು. ಅದಕ್ಕಾಗಿಯೇ ಜೀವನ ಒಂದು ತಪಸ್ಸು ಎನ್ನುವಂತೆ ಬಾಳಿದವಳು.

ಅಲ್ಲೊಂದು ‘ವನಿತೆಯರ ಸಮಾಜ’. ಒಂದು ಬಹುದೊಡ್ಡ ಸಂಸ್ಥೆ, ಮಹಿಳೆಯರಿಗಾಗಿ ವಿವಿಧ ಉದ್ದೇಶ, ಯೋಜನೆ ಹೊಂದಿದ ಸಂಸ್ಥೆ. ಕರ್ನಾಟಕಕ್ಕೆ ಇದೊಂದು ಗಾಂಧೀಜಿಯವರ ಸಬರಮತಿ ಆಶ್ರಮದಂತೆ. ಕರ್ನಾಟಕದ ಹೆಣ್ಣು ಮಕ್ಕಳಿಗೆ ಸ್ವಾವಲಂಬಿ ಜೀವನ ನಡೆಸಲು, ಅವರ ಕಷ್ಟ ಕಾರ್ಪಣ್ಯ ನೀಗಿಸಲು ಹುಟ್ಟಿಕೊಂಡ ಸಂಸ್ಥೆ.

ನವೆಂಬರ್ ೧ರಂದು ರಾಜ್ಯೋತ್ಸವ ಸಮಾರಂಭ. ‘ವನಿತೆಯರ ಸಮಾಜ’ದಲ್ಲಿ ಒಂದು ಪ್ರತಿಷ್ಠಿತ ಸ್ಪರ್ಧೆ, ಅದರಲ್ಲೂ ಈ ವರ್ಷ ವಿಶೇಷವಾಗಿ ಆಯೋಜಿಸಲ್ಪಟ್ಟಿತ್ತು. ಅದು ಮಹಿಳೆಯರಲ್ಲಿ ಒಂದು ಸಂಚಲನ ಮೂಡಿಸಿತ್ತು. ‘**ಉತ್ಕೃಷ್ಟ ತಾಯಿ**’ ಎಂದು ಬಿರುದು ಪಡೆದುಕೊಳ್ಳುವ ಸ್ಪರ್ಧೆ.

ಸ್ಪರ್ಧೆಯ ನಿರ್ಣಾಯಕರು ಕೂಡಾ ಅವರವರ ಕ್ಷೇತ್ರದಲ್ಲಿ ವಿಶೇಷತೆ ಪಡೆದುಕೊಂಡವರು. ಮನೋವೈದ್ಯರು, ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡವರು, ಮತ್ತೊಬ್ಬರು ನಮ್ಮ ಹಿಂದೂ ಸಂಸ್ಕೃತಿ, ಆಚಾರ, ವಿಚಾರಗಳನ್ನು ಅರಿತ ವಿದ್ವಾಂಸರು.

ತಾಯಿ ಮತ್ತು ಮಗಳು ವೇದಿಕೆಯ ಮೇಲಿರಬೇಕು, ನಿರ್ಣಾಯಕರು ಹಾಕುವ ಪ್ರತಿ ಪ್ರಶ್ನೆಗೆ ಮಗಳು ಉತ್ತರಿಸಬೇಕು, ತಾಯಿ ಅದಕ್ಕೆ ನಾನಾ ಮಜಲುಗಳ ವಿವರಣೆ ನೀಡಬೇಕು.

ವಸುಂಧರೆ, ನೇತ್ರಾ ವೇದಿಕೆಯ ಮೇಲಿದ್ದಾರೆ, ನಿರ್ಣಾಯಕರು ಒಬ್ಬೊಬ್ಬರಾಗಿ ಪ್ರಶ್ನೆ ಕೇಳುತ್ತಿದ್ದರೆ, ನೇತ್ರಾಳ ಹತ್ತಿರ ಯಾವುದಕ್ಕೂ ಸಮರ್ಪಕ ಉತ್ತರವಿಲ್ಲ. ಪ್ರತಿಷ್ಠೆಯ ಪ್ರಶ್ನೆ ಎಂಬಂತೆ ಬಂದು ನಿಂತ ವಸುಂಧರೆಗೆ ದುಃಖ ಗಂಟಲಿಗೆ ಬಂದಿದೆ. ಅಷ್ಟರಲ್ಲಿ ಒಂದು ಕಂಚಿನ ಕಂಠ, ಒಂದು ಆತ್ಮಸ್ಥೈರ್ಯದ ಪ್ರತೀಕವಾದ ಧ್ವನಿ ಸಭೆಯನ್ನು ಬೆಕ್ಕಸ ಬೆರಗಾಗಿಸಿತು.

“ಸಭಿಕರೇ, ಆಯೋಜಕರೇ, ನಿರ್ಣಾಯಕರಾಗಿ ಬಂದಿರುವ ಮಾನ್ಯರೇ, ಸಾಕುಮಗಳು ತನ್ನ ತಾಯಿಯನ್ನು ‘**ಉತ್ಕೃಷ್ಟ ತಾಯಿ**’ ಎಂದು ಸಾಬೀತುಪಡಿಸಲು ಅರ್ಹಳೇ?” ಎಂಬ ಗೌರಿಯ ಪ್ರಶ್ನೆಗೆ ಎಲ್ಲರೂ ಒಂದು ಕ್ಷಣ ನಿರುತ್ತರರಾದರು, ಸಭಾಂಗಣ ನಿಶಬ್ದವಾಯ್ತು, ಮರುಕ್ಷಣವೇ....

ಸಭಿಕರಿಂದ “ಆಗಬಹುದು.., ಆಗಬಹುದು...” ಎನ್ನುವ ಒಕ್ಕೊರಲಿನ ಉತ್ತರ, ಆಯೋಜಕರ ಚಿಂತೆ ದೂರ ಮಾಡಿತು. ನಿರ್ಣಾಯಕರು ಕೇಳುವ ಪ್ರತಿ ಪ್ರಶ್ನೆಗೆ ಅರಳು ಹುರಿದಂತೆ ದಿಟ್ಟ, ನೇರ ಉತ್ತರ ಕೊಟ್ಟು ತನ್ನ ಸಾಕುತಾಯಿ ವಸುಂಧರೆಯ ದಿನಚರಿ, ಸ್ವಭಾವ, ಸದ್ಗುಣ, ಸಮಾಜನಿಷ್ಠೆ, ಧರ್ಮನಿಷ್ಠೆ ಮತ್ತು ಅವಳಲ್ಲಿರುವ ಮಾತೃಹೃದಯ ಎಲ್ಲರ ಮುಂದೆ ಎಳೆ ಎಳೆಯಾಗಿ ತೆರೆದಿಟ್ಟು, ನಿತ್ಯ ತನ್ನ ತಾಯಿ ತನಗೂ ನೇತ್ರಾಳಿಗೂ ಹೇಳಿಕೊಡುವ ರೀತಿ, ನೀತಿಯಿಂದ ಹಿಡಿದು, ಹಬ್ಬ ಹರಿದಿನಗಳಂದು ಆಚರಿಸುವ ಧಾರ್ಮಿಕ ರೀತಿರಿವಾಜುಗಳ ತನಕ ಎಲ್ಲವನ್ನೂ ಹೇಳಿಕೊಟ್ಟು, ತಮ್ಮನ್ನು ಉತ್ತಮ

ಪ್ರಜೆಗಳನ್ನಾಗಿ ಮಾಡಿರುವದರ ಬಗೆಗೆ ಸವಿವರವಾಗಿ ಹೇಳಿ, ಎಲ್ಲರನ್ನೂ ಮಂತ್ರಮುಗ್ದರನ್ನಾಗಿಸಿದ್ದಲ್ಲದೆ, '**ಉತ್ಕೃಷ್ಟ ತಾಯಿ**'ಯ ಪಟ್ಟ ವಸುಂಧರೆಗೆ ಲಭಿಸುವಂತೆ ನೋಡಿಕೊಂಡಳು ಗೌರಿ.

ಅಂದು ವಸುಂಧರೆಯ ಹೃದಯದಲ್ಲಿ ಮಗಳ ಸ್ಥಾನ ಅಲಂಕರಿಸಿದ್ದಳು ಗೌರಿ.

ಸರ್ಕಾರಿ ಶಾಲೆಯಲ್ಲಿ, ಮುಕ್ತ ವಾತಾವರಣದಲ್ಲಿ ಮತ್ತು ಅನಾರೋಗ್ಯಕರ ಸ್ಪರ್ಧಾ ಮನೋಭಾವವಿರದ ಪರಿಸರದಲ್ಲಿ ಅಭ್ಯಸಿಸಿದ ಗೌರಿಗೆ, ಆತ್ಮಸ್ಥೈರ್ಯ ಅವಶ್ಯಕತೆಗಿಂತ ಜಾಸ್ತಿಯೇ ಲಭಿಸಿದ್ದವು.

ಮನೆಗೆ ಬಂದ ತಕ್ಷಣ ವಸುಂಧರೆ ಮಾಡಿದ ಮೊದಲ ನಿರ್ಧಾರ, ಗೌರಿಯನ್ನು ದತ್ತು ತೆಗೆದುಕೊಂಡು ಅಧಿಕೃತವಾಗಿ ತನ್ನ ಮಗಳನ್ನಾಗಿಸುವದು. ಈ ನಿರ್ಧಾರ, ಗಂಡ–ಹೆಂಡತಿಯರಿಬ್ಬರಿಗೂ ಸಂತೋಷ ಕೊಟ್ಟಿತು. ಅಂದೇ ಎರಡನೇ ಮಗಳ ಹೆಸರು ಮೊದಲ ಮಗಳೊಂದಿಗೆ ಹೊಂದಿಕೆಯಾಗಲೆಂದು ಪವಿತ್ರಾ ಎಂದು ಕರೆದರು. ನೇತ್ರಾ–ಪವಿತ್ರಾ..

ಹಾಗಿದ್ದರೆ ಜಿಲ್ಲಾಧಿಕಾರಿ ಪವಿತ್ರಳ ಹುಟ್ಟುಹಬ್ಬ ನವೆಂಬರ್ ೧ನೇ ತಾರೀಖು ಅನ್ನುವದು ಸರಿ ತಾನೇ?

ನೆನಪಿನ ಲೋಕದಿಂದ ಈಚೆಗೆ ಬಂದ ಪವಿತ್ರ ಧಾವಂತಗೊಂಡಳು. ಅಪ್ಪ–ಅಮ್ಮ ತಮ್ಮ ವಾಕಿಂಗ್ ಮುಗಿಸಿಕೊಂಡು ಬರುವದರೊಳಗೆ ಫ್ರೆಶ್ ಆಗಿ, ಊಟ ಮುಗಿಸದಿದ್ದರೆ ಆತಂಕಪಡುತ್ತಾರೆ. ಈ ವಯಸ್ಸಿನಲ್ಲಿ ಅವರನ್ನು ಆತಂಕಕ್ಕೆ ಈಡು ಮಾಡುವದು ಸರಿಯಲ್ಲ, ಎಂದು ತನ್ನಷ್ಟಕ್ಕೆ ತಾನೇ ಅಂದುಕೊಂಡಳು. ಲಗುಬಗೆಯಿಂದ ಸ್ನಾನ ಮುಗಿಸಿ, ಊಟದ ಶಾಸ್ತ್ರ ಮಾಡಿ, ಅಪ್ಪ, ಅಮ್ಮರ ಬರುವಿಕೆಗಾಗಿ ಕಾದಿಹಳು ಗೌರಿ, ಅಲ್ಲಲ್ಲ ಪವಿತ್ರ.

***



ಮಂಡಲಕಲೆ – ರಚನೆ: ಶ್ರೀಮತಿ ರತ್ನಾ ಮೂರ್ತಿ

ನೆನಪಿನ ಸುಳಿಯಲ್ಲಿ

– ಗಾಯತ್ರಿ ಮೂರ್ತಿ

ದಶಕಗಳ ಹಿಂದಿನ ನೆನಪನ್ನು ಮೆಲುಕುಹಾಕುತ್ತಾ ನನ್ನ ಬಾಲ್ಯದಲ್ಲಿ ನಡೆದ ಈ ಮೂರು ಪ್ರಸಂಗಗಳನ್ನು ಪ್ರಸ್ತುತ ಪಡಿಸುತ್ತಿದ್ದೇನೆ.

ಚಿನ್ನದ ರಿಂಗ್

ನಾನು ಮೈಸೂರಿನಲ್ಲಿ ಎಸ್.ಎಸ್.ಎಲ್.ಸಿ. ತರಗತಿಯಲ್ಲಿ ಓದುತ್ತಿದ್ದ ಸಮಯ. ಆಶ್ವಯುಜ ಮಾಸ ಬಂತು. ಮೈಸೂರಿನಲ್ಲಿ ಜಗತ್ಪಸಿದ್ಧ ದಸರಾ ಸಂಭ್ರಮ ಆರಂಭವಾಯಿತು. ದಸರಾ ವಸ್ತುಪ್ರದರ್ಶನದಲ್ಲಿ ಒಂದು ಚೆಂದದ ಕೆಂಪು ಬಣ್ಣದ ಮಣಿ ಓಲೆ ಕೊಂಡಿದ್ದೆ. ಅದನ್ನು ಶಾಲೆಗೆ ಹಾಕಿಕೊಂಡು ಹೋಗಿ ಗೆಳತಿಯರಿಗೆ ತೋರಿಸುವ ಚಪಲ. ನಾನು ಹಾಕಿಕೊಂಡಿದ್ದ ಚಿನ್ನದ ರಿಂಗನ್ನು ತೆಗೆದು ಒಂದು ಪುಟ್ಟ ಪ್ಲಾಸ್ಟಿಕ್ ಡಬ್ಬಿಯಲ್ಲಿ ಹಾಕಿ ಮುಚ್ಚಿಟ್ಟು ಶಾಲೆಗೆ ಹೋದೆ. ನಾನು ಕಿವಿಯಲ್ಲಿ ಧರಿಸಿದ್ದ ಹೊಸ ಮಣಿ ಓಲೆಗೆ ನಿರೀಕ್ಷಿತ ಪ್ರತಿಕ್ರಿಯೆ ದೊರೆತು ಸಂತೋಷವಾಯಿತು. ಅದೇ ಸಂತೋಷದಲ್ಲಿ ಒಂದೆರಡು ದಿನ ಮಣಿ ಓಲೆ ಧರಿಸಿ ಓಡಾಡಿದೆ.

ಹೆಚ್ಚು ದಿನ ಕೃತಕ ಓಲೆ ಧರಿಸಿದರೆ ಕಿವಿಯಲ್ಲಿ ಹುಣ್ಣಾದೀತು. ಅದನ್ನು ತೆಗೆದಿರಿಸಿ ಚಿನ್ನದ ರಿಂಗ್ ಹಾಕಿಕೋ ಎಂದು ಅಮ್ಮ ಹೇಳಿದರು. ನಾನು ಅರೆಮನಸ್ಸಿನಿಂದಲೇ ಅದನ್ನು ತೆಗೆದು, ಚಿನ್ನದ ರಿಂಗ್ ಹಾಕಿಟ್ಟಿದ್ದ ಡಬ್ಬಿ ತೆಗೆದು ನೋಡ್ತೀನಿ! ಅರೆ! ಇದೇನಿದು? ಎಂದು ಅಚ್ಚರಿ, ಗೊಂದಲದಿಂದ ನನ್ನ ಕಣ್ಣು ಅರಳಿತು. ಹೊಂಬಣ್ಣದ ಚಿನ್ನದ ರಿಂಗ್ ಬೆಳ್ಳಿಯ ಬಣ್ಣ ತಾಳಿ ಕುಳಿತಿದೆ. ನನಗೆ ಏಕೆಂದು ಅರ್ಥವಾಗಲಿಲ್ಲ. ಕೈಯಲ್ಲಿ ಹಿಡಿದು ನೋಡುವಷ್ಟರಲ್ಲಿ ರಿಂಗ್‌ಗಳು ತುಂಡಾದವು. ನನಗೆ ಅಳು ಬಂತು. ಚಿನ್ನದ ರಿಂಗ್ ಹೀಗಾಯಿತಲ್ಲ ಎಂಬ ನೋವು ಒಂದಾದರೆ, ಅಮ್ಮ ಅಪ್ಪ ಬೈತಾಯುತ್ತಾರಲ್ಲ ಎಂಬ ಹೆದರಿಕೆ ಬೇರೆ. ಅಂತೂ ಅಳುತ್ತಾ ಹೋಗಿ ಅಮ್ಮನಿಗೆ ತೋರಿಸಿದೆ. ಒಂದು ರೂಪಾಯಿ ಓಲೆ ಆಸೆಗೆ ಚಿನ್ನದ ರಿಂಗ್ ಹಾಳು ಮಾಡಿದೆಯಲ್ಲ ಎಂದು ಅಮ್ಮ ಬೈದರು. ಆದರೂ ಅಂಥ ಚೆನ್ನಾಗಿದ್ದ ಚಿನ್ನದ ಓಲೆ ಹೀಗೇಕಾಯ್ತು ಎಂಬ ಪ್ರಶ್ನೆಗೆ ಉತ್ತರ ದೊರೆಯಲಿಲ್ಲ. ಏನಾಗಿರಬಹುದು? ಎಂದು ಸಮಾಧಾನವಾಗಿ ಯೋಚಿಸಿದಾಗ ಉತ್ತರವೇನೋ ಹೊಳೆಯಿತು. ಚಿನ್ನವು ಪಾದರಸದೊಂದಿಗೆ ಸೇರಿದಾಗ ಅಮಾಲ್ಗಮ್ (ಮಿಶ್ರಣ) ಆಗುತ್ತದೆಂದು ನಮ್ಮ ಟೀಚರ್ ಕಲಿಸಿದ್ದು ನೆನಪಾಯಿತು. ಆದರೆ ಡಬ್ಬಿಯಲ್ಲಿ ಪಾದರಸ ಎಲ್ಲಿಂದ ಬಂತು? ಆ ಪ್ರಶ್ನೆಗೂ ನನ್ನ ತಮ್ಮಂದಿರಿಂದ ಉತ್ತರ ಸಿಕ್ಕಿತು. ನಮ್ಮ ಮನೆಯಲ್ಲಿದ್ದ ಕ್ಲಿನಿಕಲ್ ಥರ್ಮಾಮೀಟರ್ ಒಡೆದಿತ್ತು. ಅದರಲ್ಲಿದ್ದ ಪಾದರಸವನ್ನು ನನ್ನ ತಮ್ಮಂದಿರು ಆ ಡಬ್ಬಿಯಲ್ಲಿ ಹಾಕಿಟ್ಟುಕೊಂಡು ಆಗಾಗ ಅದರೊಂದಿಗೆ ಆಡುತ್ತಿದ್ದರಂತೆ. ಯಾವಾಗಲೋ ಪಾದರಸ ಚೆಲ್ಲಿಹೋಗಿದೆ. ಅದರ ಟ್ರೇಸ್ ಉಳಿದುಕೊಂಡಿತ್ತೇನೋ. ಗ್ರಹಚಾರವಶಾತ್ ನಾನು ವಿಷಯ ತಿಳಿಯದೆ ಚಿನ್ನದ ರಿಂಗನ್ನು ಅದರಲ್ಲಿ ಜೋಪಾನ (!) ಮಾಡಿದ್ದೆ.

ನನ್ನ ತಂದೆಗೆ ವಿಷಯ ತಿಳಿಯಿತು. ಅವರೂ ಸಹ ಚಿನ್ನದ ಒಡವೆಗಳ ಬಗ್ಗೆ ಎಚ್ಚರ ವಹಿಸದಿದ್ದರೆ ಹೀಗೇ ಆಗೋದು ಎಂದು ಬೈದರು. ಆದರೂ ಅವರು ಯೋಚಿಸಿ, ಅಕ್ಕಸಾಲಿಗನ ಹತ್ತಿರ ತೋರಿಸಿದರು. ಅವನು ಚಿನ್ನವನ್ನು ಬೇರ್ಪಡಿಸಿ ಬೇರೆ ರಿಂಗ್ ಮಾಡಿಕೊಟ್ಟ. ಸ್ವಲ್ಪ ಮಟ್ಟಿನ ಚಿನ್ನ ಕಡಿಮೆಯಾದರೂ ಪೂರ್ತಿ ನಷ್ಟವಾಗಲಿಲ್ಲವಲ್ಲ ಎಂದು ಸಮಾಧಾನ ಪಟ್ಟಿದ್ದಾಯಿತು. ಜೊತೆಗೆ ಹಳೆಯ ರಿಂಗ್ ಹೋಗಿ ಹೊಸ ರಿಂಗ್ ಬಂದಿದ್ದು ನನಗೆ ಸಂತೋಷವೇ ಆಗಿತ್ತು ಅನ್ನಿ.

ಅಂದಹಾಗೆ ಕಾಲೇಜಿನಲ್ಲಿ ಅಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದಾಗ ಪ್ರಾಯೋಗಿಕ ತರಗತಿಯ ಸಮಯದಲ್ಲಿ ನನ್ನ ಸಹೋದ್ಯೋಗಿಯೊಬ್ಬರ ಚಿನ್ನದ ಬ್ರೇಸ್‌ಲೆಟ್ ಮೇಲೆ ಅಕಸ್ಮಾತ್ತಾಗಿ ಪಾದರಸ ಬಿದ್ದು ಅದು ಮುರಿದು ಹೋಯಿತು. ಅವರು 'ಮೇಡಂ ನೋಡಿ, ನನ್ನ ಬ್ರೇಸ್‌ಲೆಟ್ ಹೀಗಾಗಿದೆ. ಏನು ಮಾಡಲಿ' ಎಂದು ಕೇಳಿದರು. ಆಗ ನನ್ನ ಹಿಂದಿನ ಅನುಭವ ಅವರ ನೆರವಿಗೆ ಬಂತು.

ನೀಲಿ ಲಂಗದ ಪ್ರಸಂಗ

ಮೈಸೂರಿನಲ್ಲಿ ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ನಡೆದ ಪ್ರಸಂಗ. ನನ್ನ ಬಳಿ ಕಪ್ಪು ಬಣ್ಣದ ಚುಕ್ಕಿಗಳಿರುವ ಒಂದು ಬಿಳಿಯ ಲಂಗ ಇತ್ತು. ಆಗೆಲ್ಲ ಹೆಚ್ಚು ಬಟ್ಟೆಗಳಿರುತ್ತಿರಲಿಲ್ಲ. ನನ್ನ ಬಳಿ ಮೂರು ಲಂಗಗಳು ಇದ್ದವೇನೋ ಅಷ್ಟೆ? ಹತ್ತಿಯ ಬಟ್ಟೆಗೆ ಮನೆಯಲ್ಲೇ ಬಣ್ಣ ಹಾಕಬಹುದು ಎಂದು ಯಾರು ಹೇಳಿದರೋ ನನಗೆ ನೆನಪಿಲ್ಲ. ಆದರೂ ವಿಷಯ ತಿಳಿದಾಗಿನಿಂದ ನನ್ನ ಬಿಳಿಯ ಲಂಗಕ್ಕೆ ಬಣ್ಣ ಹಾಕಬೇಕೆಂಬ ಅದಮ್ಯವಾದ ಆಸೆ ಹುಟ್ಟಿತು. ಸರಿ, ಅಂಗಡಿಗೆ ಹೋಗಿ ಕೇಳಿದೆ. ಒಂದು ಸೋಪು ತೋರಿಸಿದ. 'ಸಧ್ಯಕ್ಕೆ ನನ್ನ ಬಳಿ ನೀಲಿ ಬಣ್ಣದ ಸೋಪು ಮಾತ್ರ ಇದೆ' ಎಂದ. ನನ್ನ ಬಿಳಿಯ ಲಂಗಕ್ಕೆ ಯಾವುದೋ ಒಂದು ಬಣ್ಣ ಹಾಕಿಬಿಡುವ ಆತುರ ನನಗೆ. 'ಅದೇ ಕೊಡಿ ಪರವಾಗಿಲ್ಲ' ಎಂದು ಹೇಳಿ, ಅವನು ಕೊಟ್ಟ ಸೋಪನ್ನು ಪರಮ ಸಂತೋಷದಿಂದ ಮನೆಗೆ ತಂದೆ. ಮರುದಿನದವರೆಗೆ ತಡೆಯುವ ಸಹನೆ ಇರಲಿಲ್ಲ. ಸಂಜೆಯ ಸಮಯ, ಅಮ್ಮ ಪಕ್ಕದ ಮನೆಯವರೊಂದಿಗೆ ಜಗಲಿಯ ಮೇಲೆ ಕುಳಿತು ಹರಟುತ್ತಿದ್ದರು. ಅಪ್ಪ ಹೈಸ್ಕೂಲ್ ಟೀಚರ್. ಟ್ಯೂಷನ್ ಮುಗಿಸಿ ಮನೆಗೆ ಬರುವುದು ತಡವೇ. ತಮ್ಮಂದಿರು ಇನ್ನೂ ಆಟ ಮುಗಿಸಿ ಮನಗೆ ಬಂದಿರಲಿಲ್ಲ. ಅಕ್ಕ ಗೆಳತಿಯ ಮನೆಗೆ ಹೋಗಿದ್ದಳು. ತಂಗಿಯರು ಇನ್ನೂ ಚಿಕ್ಕವರು. ಅಮ್ಮನ ಬಳಿ ಪಕ್ಕದ ಮನೆಯ ಮಕ್ಕಳೊಂದಿಗೆ ಆಡುತ್ತಿದ್ದರು. ಆಹಾ, ಮನೆಯಲ್ಲಿ ನಾನೇ ನಾನು. ಸರ್ರನೆ ಕಾರ್ಯನಿರತಳಾದೆ.

ಸೋಪಿನ ಕವರ್ ಮೇಲೆ ಕೊಟ್ಟಿದ್ದ ಆದೇಶದ ಪ್ರಕಾರ ದೊಡ್ಡ ಪಾತ್ರೆಯಲ್ಲಿ ನೀರು ಕಾಯಿಸಿ, ಸೋಪು ತುರಿದು ಹಾಕಿದೆ. ಅದು ಕುದಿಯತೊಡಗಿದಾಗ ನನ್ನ ಬಿಳಿಯ ಲಂಗವನ್ನು ಅದರೊಳಗೆ ಅದ್ದಿ, ಸ್ವಲ್ಪ ಕಾಲ ಬಿಟ್ಟು ಹೊರತೆಗೆದೆ.

ನನ್ನ ನಿರೀಕ್ಷೆಯ ಪ್ರಕಾರ ಆ ಬಿಳಿಯ ಲಂಗ ನೀಲಿ ಬಣ್ಣದ್ದಾಗಿ ಕಂಗೊಳಿಸಬೇಕಿತ್ತು. ಲಂಗವನ್ನು ಹೊರತೆಗೆದು ನೋಡಿದ ತಕ್ಷಣ ನನ್ನ ಮುಖ ಇಂಗು ತಿಂದ ಮಂಗನಂತಾಯಿತು. ನನ್ನಿಂದ ಅದೇನು ತಪ್ಪಾಯಿತೋ, ನೀಲಿ ಬಣ್ಣವು ಲಂಗದ ಮೇಲೆ ಒಂದೇಸಮ ಹರಡುವ ಬದಲು, ಅಲ್ಲಲ್ಲಿ ಕಡುನೀಲಿ ಪಟ್ಟೆಗಳು ವಿಕಾರವಾಗಿ ಕಾಣುತ್ತಿತ್ತು. ಅಯ್ಯೋ, ಹೀಗೇಕಾಯ್ತು? ಎಂದು ದುಃಖ, ಅದಕ್ಕಿಂತ ಹೆಚ್ಚಾಗಿ ಅಪ್ಪ ಅಮ್ಮ ಬೈತಾರಲ್ಲ ಎಂಬ ಹೆದರಿಕೆ ಬೇರೆ! ಮೊದಲೇ ಹೇಳಿದರೆ ಖಂಡಿತ ಒಪ್ಪಲ್ಲ, ಯಶಸ್ವಿಯಾಗಿ ನೀಲಿ ಬಣ್ಣ ಹಾಕಿ ಶಹಭಾಸ್‌ಗಿರಿ ಪಡೆಯಬೇಕೆಂದಿದ್ದ ನನಗೆ ತೀವ್ರ ನಿರಾಸೆಯ ಜೊತೆಗೆ ಈಗ ಬೈಗಳ ಹೆದರಿಕೆ ಕಾಡತೊಡಗಿತು. ಅಂದುಕೊಂಡಂತೆ ಅಮ್ಮ ಬಂದು ನೋಡಿ ಚೆನ್ನಾಗಿ ಬೈದರು.

'ನಿಮ್ಮಪ್ಪ ಬರಲಿ, ಸರಿಯಾಗಿ ಪೂಜೆ ಆಗತ್ತೆ'' ಎಂದು ಹೆದರಿಸಿದರು. ಆ ಹೆದರಿಕೆಯಿಂದಲೇ ಅಳತೊಡಗಿದೆ.

'ಬಣ್ಣ ಹಾಕಿದ್ರೆ ಹೊಸ ಲಂಗ ತರಹ ಆಗತ್ತೆ ಅಂತ ಮಾಡಿದೆ. ನನಗೇನು ಗೊತ್ತು ಹೀಗೆ ಆಗತ್ತೆ ಅಂತ' ಎಂದು ಅಳುತ್ತಲೇ ಹೇಳಿದೆ.

ಅಪ್ಪ ಬಂದರು. 'ನಿಮ್ಮ ಮಗಳು ಮಾಡಿರೋ ಘನಂದಾರಿ ಕೆಲಸ ನೋಡಿ' ಎಂದು ಅಮ್ಮ ನನ್ನ ಕೇಸನ್ನು ಸಾಕ್ಷಿಸಮೇತ ಅಪ್ಪನ ಮುಂದೆ ಇಟ್ಟರು.
ಲಂಗವನ್ನು ನೋಡಿ ಕೋಪ ಮಾಡಿಕೊಂಡು ಅಪ್ಪ ನನ್ನನ್ನು ಚೆನ್ನಾಗಿ ಬೈತಾರೆ ಎಂದು ಅಪರಾಧಿಯಂತೆ ನಾನು ತಲೆ ತಗ್ಗಿಸಿ ನಿಂತಿದ್ದೆ. ಅಪ್ಪ ಕೋಪಿಸಿಕೊಳ್ಳುವ ಬದಲು ಅದನ್ನು ನೋಡಿ ಜೋರಾಗಿ ನಕ್ಕರು. ಅಪ್ಪ ಯಾಕೆ ನಗ್ತಾರೆ ಎಂದು ನಾನು ಆಶ್ಚರ್ಯದಿಂದ ಅವರೆಡೆಗೆ ನೋಡಿದೆ.

'ಪಂಚತಂತ್ರದ ನೀಲಿ ನರಿ ಕತೆ ಆಯ್ತಲ್ಲೆ. ಇದನ್ನು ಹಾಕಿಕೊಂಡು, ನೀಲಿನರಿ ಹಾಗೆ ನೀನೂ ಮಹಾರಾಣಿ ಅಂತ ಓಡಾಡಬಹುದು,' ಎಂದು ನುಡಿದಾಗ, ನೀಲಿ ನರಿ ಕತೆ ನೆನೆಪಿಗೆ ಬಂದು ನಾನೂ ಸಹ ಪೆಚ್ಚಾಗಿ ನಕ್ಕೆ.

‘ಹಳೆ ಲಂಗಾನ ಹೊಸ ಲಂಗದ ತರಹ ಮಾಡ್ಬೇಕು ಅಂತ ಹೀಗೆ ಬಣ್ಣ ಹಾಕಿದೆ. ನನಗೇನು ಗೊತ್ತು ಹೀಗಾಗತ್ತೆ ಅಂತ” ಎಂದು ಹೇಳುವಷ್ಟರಲ್ಲಿ ಅಳು ಉಕ್ಕಿ ಬಂತು.

’ಯಾವ ಕೆಲಸ ಮಾಡಬೇಕಾದ್ರೂ ಸರಿಯಾಗಿ ತಿಳ್ಕೊಂಡು ಮಾಡಬೇಕು. ಅರ್ಧಂಬರ್ಧ ಜ್ಞಾನ ಅನಾಹುತಕ್ಕೆಡೆಕೊಡತ್ತೆ. ಇನ್ಮೇಲೆ ಹೀಗೆಲ್ಲ ಮಾಡಬೇಡ. ಅಷ್ಟೆ ಅಲ್ಲ, ಈ ಲಂಗ ಹಾಕ್ಕೋಬೇಡ’ ಎಂತಲೂ ಹೇಳಿದರು.

ಈಗಲೂ, ಆ ಲಂಗ, ಅದರ ಮೊದಲಿನ ವಿನ್ಯಾಸ, ನಂತರದ ಅವಾಂತರ ನನ್ನ ಮನದಲ್ಲಿ ಅಚ್ಚೊತ್ತಿದಂತಿದೆ. ಈ ಪ್ರಸಂಗ ಬರೆಯುವಾಗ ಸಹ ಮನಸ್ಸು ಆ ಕಾಲಕ್ಕೆ ಸರಿದಿತ್ತು.

ಕೊಕ್ಕೊಕ್ಕೋ ಕೋಳಿ

ನನ್ನ ತಂದೆ ಸರ್ಕಾರಿ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿ ಕೆಲಸ ನಿರ್ವಹಿಸುತ್ತಿದ್ದರು. ಕುಣಿಗಲ್‌ನಿಂದ ಅವರಿಗೆ ಶಿವಮೊಗ್ಗಕ್ಕೆ ವರ್ಗವಾಯಿತು. ನನಗೆ ಆಗ ಒಂಬತ್ತು ವರ್ಷ ವಯಸ್ಸು. ಮಾಮೂಲಿನಂತೆ ಅಕ್ಕಪಕ್ಕದವರ ಪರಿಚಯ ಆಯಿತು. ಒಂದು ಭಾನುವಾರ ಪಕ್ಕದ ಮನೆಯಾಕೆ, ’ಗಾಯತ್ರಿ, ಬಾರೆ, ನಮ್ಮ ಗೆಳತಿ ಮನೆಗೆ ಹೋಗೋಣ. ಒಬ್ಬಳಿಗೇ ಹೋಗೋಕೆ ಬೇಜಾರು’ ಎಂದರು. ಸರಿ, ನಾನು ಅವರೊಂದಿಗೆ ಹೋದೆ. ದೊಡ್ಡವರ ಮಾತುಕತೆಯ ತಲೆಬುಡ ಅರ್ಥವಾಗಲಿಲ್ಲ. ನಾನು ಆಚೆಕಡೆ ಇರತೀನಿ ಎಂದು ಹೇಳಿ ಹೊರಗಡೆ ಬಂದು ನಿಂತೆ.

ಸನಿಹದಲ್ಲಿ ಕೋಳಿಗಳು ಆಡುತ್ತಿದ್ದವು. ನನಗೆ ಕೋಳಿಗಳು ಹಾಗೂ ಕೋಳಿ ಮರಿಗಳೆಂದರೆ ತುಂಬಾ ಇಷ್ಟ. ಹಾಂ, ತಿನ್ನುವುದಕ್ಕೆ ಖಂಡಿತ ಅಲ್ಲ. ತಪ್ಪು ತಿಳಿಯಬೇಡಿ. ನಾನು ಪಕ್ಕಾ ಸಸ್ಯಾಹಾರಿ. ಅವು ಗತ್ತಿನಿಂದ, ಜಂಬದಿಂದ ಕೊಕ್ಕನ್ನು ತಿರುಗಿಸಿ ಅತ್ತಿತ್ತ ನೋಡುವುದು ನನಗೆ ಇಷ್ಟ ಅಷ್ಟೆ. ಅವುಗಳನ್ನು ನೋಡುವುದರಲ್ಲಿ ತಲ್ಲೀನಳಾಗಿದ್ದೆ. ಅಷ್ಟರಲ್ಲಿ ಒಬ್ಬ ಹೆಂಗಸು ಕೈಯಲ್ಲಿ ಒಂದು ಚೆಂಬು ಹಿಡಿದು ಬಂದಳು. ಅವಳು ಒಂದು ಕೋಳಿಯನ್ನು ಹಿಡಿದು ಅದಕ್ಕೆ ಸ್ನಾನ ಮಾಡಿಸಿದಳು. ಓ, ಕೋಳಿಗಳಿಗೂ ಸ್ನಾನ ಮಾಡಿಸ್ತಾರಾ? ನನಗೆ ಗೊತ್ತೇ ಇರಲಿಲ್ಲ ಎಂದು ಕುತೂಹಲದಿಂದ ನೋಡುತ್ತ ನಿಂತೆ. ಸ್ನಾನವಾದ ನಂತರ ಅದರ ಹಣೆಗೆ ಅರಿಶಿಣ, ಕುಂಕುಮ ಇಟ್ಟು ಪೂಜೆ ಬೇರೆ ಮಾಡಿದಳು. ಕೋಳಿಗೆ ಪೂಜೆ ಬೇರೆ ಮಾಡ್ತಾರಾ? ಇದುವರೆಗೆ ಇಂತಹುದನ್ನು ನೋಡೇ ಇಲ್ಲವಲ್ಲಾ? ಎಂದು ನನ್ನ ಕುತೂಹಲ ಇಮ್ಮಡಿಸಿತು. ಆಕೆ ಅದಕ್ಕೆ ನಮಸ್ಕರಿಸಿದಳು. ಮರುಕ್ಷಣವೇ, ಕೋಳಿಯನ್ನು ಹಿಡಿದು ಒಂದು ಹರಿತವಾದ ಚಾಕುವಿನಿಂದ ಅದರ ಕುತ್ತಿಗೆಯನ್ನು ಕಚಕ್ ಎಂದು ಕುಯ್ದೇಬಿಟ್ಟಳು. ಅನಿರೀಕ್ಷಿತವಾದ ಇದನ್ನು ಕಂಡು ನನಗೆ ಜೋರಾಗಿ ಕಿರುಚುವಂತಾಯಿತು. ಮುಂದಿನ ದೃಶ್ಯ ಹೃದಯ ವಿದ್ರಾವಕವಾಗಿತ್ತು. ರುಂಡವಿಲ್ಲದ ಕೋಳಿಯ ದೇಹ ಕೊಕ್ಕೊಕ್ಕೋ ಎಂದು ಕೂಗುತ್ತ ರಸ್ತೆಯ ಮಧ್ಯಕ್ಕೆ ಓಡಿತು. ಅದನ್ನು ಕಂಡು ತಲ್ಲಣಗೊಂಡ ನಾನು ಒಂದೇ ಉಸುರಿಗೆ ಮನೆಗೆ ಓಡೋಡಿ ಬಂದೆ. ಆ ಕೋಳಿಯ ಅಮೂಲ್ಯವಾದ ಜೀವ ಅಂದು ಆ ಮನೆಯವರ ಆಹಾರಕ್ಕಾಗಿ ಬಲಿಯಾಗಿತ್ತು. ದಶಕಗಳ ನಂತರವೂ ಆ ಕೋಳಿಯ ರುಂಡವಿಲ್ಲದ ದೇಹ ರಸ್ತೆಯಲ್ಲಿ ಓಡಿದ್ದು ಮನದ ಮೂಲೆಯಲ್ಲಿ ಅಚ್ಚೊತ್ತಿದಂತಿದೆ. ಅದರ ಬಗ್ಗೆ ಬರೆಯುತ್ತಿರುವಾಗ ಸಹ ಆ ಕೋಳಿ ಅನುಭವಿಸಿದ ಹಿಂಸೆಯ ನೆನಪು ಮನ ಕಲಕಿದೆ.

***

"ಅನಾಥರು!!??"

– ಸುಷುಮಾ ಸುರೇಶ್, ಕುಣಿಗಲ್

"ಪಾತಜ್ಜಿ... ಪಾತಜ್ಜಿ."

ಯಾರೋ ಕರೆದದ್ದು ಕೇಳಿ, ದೇವರಿಗೆ ದೀಪ ಹಚ್ಚಿದ್ದ ಪಾತಜ್ಜಿ ದಾಪುಗಾಲು ಹಾಕಿ ಬಾಗಿಲ ಬಳಿ ಬಂತು! ಬಾಗಿಲಲ್ಲಿ ಗಾಬರಿಯಿಂದ ನಿಂತಿದ್ದ ವೃದ್ಧೆಯನ್ನು ಕಂಡು, "ಏನಾಯ್ತು ತಾಯಿ??? ಒಳಗ್ ಬನ್ನೀಮ್ಮ" ಅಂತು.

"ಪಾತಜ್ಜಿ, ಸ್ವಲ್ಪ ಬರ್ತೀರಾ?? ಕೈ ಕಾಲೇ ಆಡ್ತಿಲ್ಲ. ಅವ್ರು ಕಣ್ಣೇ ಬಿಡ್ತಿಲ್ಲ"

"ನಡೀರಿ... ನಡೀರಿ... ಗಾಬರಿ ಆಗೋಂಥಾದ್ದು ಏನಿಲ್ಲ, ಹೋಗೋ ಸಮಯ ಬಂತು ಅಂತ ಕಾಣುತ್ತೆ" ಬೀಗ ಹಾಕುವ ಅಭ್ಯಾಸವೇ ಇರದ ಪಾತಜ್ಜಿ, ಬಾಗಿಲು ಮುಂದೆ ಮಾಡಿ, ಆಕೆಯ ಜೊತೆ ಅವರ ಮನೆಯ ಕಡೆ ನಡೀತು.

ಸಾಕಷ್ಟು ದೊಡ್ಡದೇ ಆಗಿದ್ದ ಹಳೇ ಕಾಲದ ಮನೆ. ಹಾಲಿನ ಮಧ್ಯ ಮಂಚ! ನಿಸ್ತೇಜವಾಗಿ ಮಲಗಿದ್ದ ಒಬ್ಬರು ವೃದ್ಧರು!! ಸುತ್ತ ಔಷಧಿ, ಅರ್ಧ ಕುಡಿದು ಬಿಟ್ಟಿದ್ದ ಗಂಜಿಯ ಲೋಟ, ಟವಲ್ಲು, ಮಂಚದ ಕೆಳಗೆ, ಟಾಯ್ಲೆಟ್ ಇತ್ಯಾದಿಗಳಿಗೆ ಅನುಕೂಲ ವಾಗುವಂಥ ಪ್ಲಾಸ್ಟಿಕ್ ಟಬ್‌ಗಳು, ಡೈಪರ್ ಬಂಡಲ್‌ಗಳು. ಪಾತಜ್ಜಿ ನೇರವಾಗಿ ಬಂದದ್ದೇ ಆ ವೃದ್ಧರ ಹತ್ತಿರ ಸಾಗಿ, ಪ್ರಾಣವಾಯು ಇದೆಯೋ? ಇಲ್ಲವೋ? ಪರೀಕ್ಷಿಸಿತು! ನಿಟ್ಟುಸಿರು ಬಿಟ್ಟು " ದೇವರು ದೊಡ್ಡೋನು" ಅಂತು!

"ಪಾತಜ್ಜಿ, ಅವ್ರಿಗೇನೂ ಆಗಿಲ್ಲ ತಾನೇ!!???" ಅಂತ ಸಂಕಟದಿಂದ ಕೇಳಿದರು ಆಕೆ. "ಅದನ್ನೇ ತಾಯಿ ನಾನು ಹೇಳಿದ್ದು ದೇವ್ರು ದೊಡ್ಡೋನೂ... ಅವ್ರ ಸಂಕಟಕ್ಕೆ ಮುಕ್ತಿಕೊಟ್ಟ, ನಿಮ್ಮ ಕಷ್ಟಕ್ಕೆ... ಕೊನೆ ಹಾಡ್ದ ಅಂತ"

"ಪಾತಜ್ಜೀ...." ಆಕೆ ಪಾತಜ್ಜಿಯನ್ನು ಗಟ್ಟಿಯಾಗಿ ಅಪ್ಪಿ, ಬಿಕ್ಕಿ ಬಿಕ್ಕಿ ಅತ್ತರು!! "ಇಲ್ಲ... ಇಲ್ಲ.. ಅಳ್ಬಾರ್ದು.. ಅಳ್ಬಾರ್ದು ಸಮಾಧಾನ ಮಾಡ್ಕ ನನ್ನಮ್ಮಾ" ಅವರನ್ನು ಸಂತೈಸಿದ ಪಾತಜ್ಜಿ, " ನಿಮ್ಮ ಮಕ್ಕಳೆಲ್ಲಮ್ಮಾ...??? ಬಂದ್ರು ಅಂದ್ರಲ್ಲಾ??? "

ಆಕೆ ನೋವಿನಿಂದ ಮುಖ ಹಿಂಡಿ ಹೇಳಿದರು, ''ಬಂದ್ರು ಅಜ್ಜಿ, ಹೊರದೇಶದಲ್ಲಿದ್ದೋರು ನೋಡಿ, ಈ ಮನೇಲಿ ಅನುಕೂಲ ಇಲ್ಲ ಅಂತ ಹೋಟ್ಲಲ್ಲಿ ಉಳ್ಕಂಡಿದಾರಂತೆ ಪಾಪ. ಇವ್ರನ್ನ ನೋಡ್ಕೊಂಡೂ... ಹೋಟೆಲಿಗೇ... ಹೊರಟೋದ್ರು".

ಪಾತಜ್ಜಿ ಏನೂ ಮಾತಾಡದೆ, ಆಕೆಯನ್ನ ನಿಧಾನವಾಗಿ ಕುರ್ಚಿಯ ಮೇಲೆ ಕೂಡಿಸಿ, ಬಾಗಿಲ ಬಳಿ ಬಂದು, 'ಮುಕುಂದಾ...' ಅಂತ ಜೋರಾಗಿ ಒಮ್ಮೆ ಕೂಗ್ತು. ಪಕ್ಕದ ಮನೆಯ ಮುಕುಂದಾ ದಡಬಡಿಸಿ ಓಡಿ ಬಂದ.

"ಏನ್ ಪಾತಜ್ಜಿ ??? ಏನಾಯ್ತು ತಾತಂಗೆ?? "

"ಆಗ್ಹೋಗಿದೆ ಮುಕುಂದ, ಹೋಗಿ ಡಾಕ್ಟ್ರನ್ನ ಕರ್ಕೊಂಡ್ ಬಾ, ಅವರೊಂದ್ ಮಾತು ಹೇಳ್ಲಿ, ಹಾಗೇ ಆಕೆ ಮಕ್ಳಿಗೆ ವಿಷಯ ತಿಳ್ಸು" ಅಂತು.

ತಕ್ಷಣ ಮುಕುಂದ ಗಾಡಿ ತೆಗೆದು ಹೊರಟ. ದೊಡ್ಡ ದೊಡ್ಡ ಕಾರುಗಳಲ್ಲಿ ಬಂದಿಳಿದ ಆಕೆಯ ಮಕ್ಕಳು, ಮನೆಯತ್ತ ಧಾವಿಸಿ ಬಂದರು. ಪಕ್ಕದ ಮನೆಯಾಕೆ ತಂದು ಕೊಟ್ಟಿದ್ದ ಕಾಫಿಯನ್ನ ನಿಧಾನವಾಗಿ ಬಗ್ಗಿಸಿ ಆಕೆಗೆ ಕುಡಿಯಲು ಕೊಡುತ್ತಿದ್ದ ಪಾತಜ್ಜಿಯತ್ತ

ನೋಡಿದ ಆಕೆಯ ಮಗ, "ಹಲೋ, ಎಷ್ಟು ಹೊತ್ತಿಗೆ ಡೆತ್ ಆಗಿದ್ದು?? ಡಿಕ್ಲೇರ್ ಮಾಡಿದ್ದು ಯಾರು??" ಅನ್ನುತ್ತಾ ತಾಯಿಯತ್ತ ನೋಡಿ, "ಡಾಕ್ಟ್ರಿಗೆ ಹೇಳ್ದೇನಮ್ಮ, ಫೋನ್ ಮಾಡೋದ್ ತಾನೆ!???" ಅಂದ. ಪಾತಜ್ಜಿಯ ಮುಖ ಕೋಪದಿಂದ ಕೆಂಪಾಯ್ತು. ಅಷ್ಟರಲ್ಲಿ ಡಾಕ್ಟ್ರನ್ನ ಕರೆತಂದ ಮುಕುಂದ.

"ಹಲೋ ಡಾಕ್ಟರ್, ನಾನು ಅವರ ಮಗ, ಈಗಿನ್ನೂ ಹೇಳ್ತಿದ್ದೆ, ಡಾಕ್ಟರ್‌ಗೆ ಹೇಳೋದಲ್ವಾ ಅಂತ. ಇವ್ರಿವ್ರೇ ಡಿಸೈಡ್ ಮಾಡ್ಬುಟ್ಟಿದಾರೆ''.

ಡಾಕ್ಟರ್ ಪಾತಜ್ಜಿಯತ್ತ ನೋಡಿ ಮಾರ್ಮಿಕವಾಗಿ ನಕ್ಕರು. ವೃದ್ಧರ ದೇಹವಿದ್ದತ್ತ ಹೋಗಿ ಪರೀಕ್ಷಿಸಿ, "ಸುಮಾರು ನಲವತ್ತು ನಿಮಿಷ ಆಗಿದೆ, ಹೋಗಿ" ಅಂತ ಹೇಳಿ, ಪಾತಜ್ಜಿಗೆ ನಮಸ್ಕರಿಸಿ ಹೊರಟರು.

"ರಜ ಎಕ್ಸ್‌ಟೆಂಡ್ ಮಾಡ್ಕೋಬೇಕಾಗತ್ತೇನೋ ಅನ್ಕೊಂಡಿದ್ದೆ.. ಸಧ್ಯ ಹಾಗಾಗ್ಲಿಲ್ಲ" ಅಂದ ಮಗ.

"ಮುಂದೆ.. ನೀನೇನ್ ಮಾಡ್ತ್ಯಮ್ಮಾ?" ಅಂದ್ಲು ಮಗಳು. ಆಕೆ ಪಾತಜ್ಜಿ ಕಡೆ ದಯನೀಯವಾಗಿ ನೋಡುದ್ರು. ಸುಮ್ಮನಿರುವಂತೆ ಸನ್ನೆ ಮಾಡ್ತು ಪಾತಜ್ಜಿ. ಆಕೆ ಗೋಡೆಗೆ ತಲೆ ಆನಿಸಿ, ಮುಖ ಮುಚ್ಚಿ ಬಿಕ್ಕಿದರು.

ಸ್ಥಳೀಯರ ಸಹಕಾರದಿಂದ ಅಂತ್ಯಕ್ರಿಯೆ ಮುಗೀತು. ಊಟದ ವ್ಯವಸ್ಥೆಯೂ ಆಯ್ತು. ಮನೆಗೆ ಹೋಗಿ ಸ್ನಾನ, ಊಟ ಮುಗಿಸಿ, ಕೈಯಲ್ಲಿ ಮುಚ್ಚಿದ್ದ ಎರಡು ಬಟ್ಟಲು ಹಿಡಿದು ಬಂತು ಪಾತಜ್ಜಿ. ಎಲ್ಲರೂ ಮೊಬೈಲು ಕೈಲಿ ಹಿಡಿದು ಕೂತಿರುವುದನ್ನ ಗಮನಿಸಿ, ''ನಿಮ್ಮಮ್ಮ ಉಂಡ್ರೇನಮ್ಮಾ??" ಅಂತ ಮಗಳನ್ನ ಕೇಳ್ತು.

"ಇಲ್ಲ.. ಬೇಡ ಅಂದ್ರು, ಅವ್ರಿಗೆ ಸಂಕ್ಟ ಇರುತ್ತಲ್ವಾ???" ಪೋನ್ ನೋಡುತ್ತಲೇ, ಕತ್ತೆತ್ತದೆ ಉತ್ತರಿಸಿದಳು.

" ನೀನೂ ...??? ನೀನು ಉಂಡ್ಯಾ???" ಪಾತಜ್ಜಿಯ ಖಾರವಾದ ಪ್ರಶ್ನೆ.

"ನಂದಾಯ್ತು"

"ನಿಂಗೇನು ಸಂಕ್ಟ ಇಲ್ವಲ್ಲಾ....!!!" ವ್ಯಂಗ್ಯವಾಗಿ ನುಡಿಯಿತು ಪಾತಜ್ಜಿ.

"ಏನ್ ಹಿಂಗ್ ಮಾತಾಡ್ತೀರಾ??? ಸ್ವಲ್ಪ ಪ್ರಜ್ಞೆ ಇಟ್ಕೊಂಡು ಮಾತಾಡಿ"

"ಪ್ರಜ್ಞೆ ನಿಮ್ಮಿಬ್ಬರಲ್ಲಿ ಒಬ್ಬರಿಗಾದ್ರೂ ಇದ್ದಿದ್ದರೆ ಇವತ್ತು ನಿಮ್ಮಪ್ಪ ಅಮ್ಮ ಹಿಂಗ್ ಅನಾಥರಾಗಿ ಇರ್ತಿರ್ಲಿಲ್ಲ".

ಮಗ ಕೆಂಡಾಮಂಡಲವಾದ. "ಬಾಯಿಗ್ ಬಂದ ಹಾಗೆ ಮಾತಾಡ್ಬೇಡಿ, ಏನೋ ಹೆಲ್ಪ್ ಮಾಡಿದ್ರಿ ಅಂತ್ ಮರ್ಯಾದೆ ಕೊಟ್ರೆ..."

"ನಿನ್ ಮರ್ಯಾದೆ ಯಾರಿಗ್ ಬೇಕೋ ಮುಠ್ಠಾಳ!! ನೀನೇ ಇಟ್ಕ." ಸಿಡಿಲಿನಂತೆ ಬಂತು ಉತ್ತರ!

ಪಾತಜ್ಜಿಯ ದಾರ್ಷ್ಟ್ಯ ಕಂಡು, ಸೊಸೆ, ಮಗಳು, ಮಕ್ಕಳು ಅವಾಕ್ಕಾದರು. ಪಾತಜ್ಜಿ ಮುಲಾಜೇ ಇಲ್ಲದೆ ಮುಂದುವರೆಸ್ತು... "ಅವ್ರಿಬ್ರು ರಕ್ತ ಬಸ್ದು ಓದ್ಸಿ, ಕೈಲಿದ್ದೆಲ್ಲಾ ಖರ್ಚು ಮಾಡ್ಕಂಡು ಮದ್ವೆ ಮಾಡಿ, ಇಲ್ಲಿರಲ್ಲ ಹೊರದೇಶಕ್ಕ್ ಹೋಗಿ ದಬ್ಹಾಕ್ತೀವಿ

ಅಂದಾಗ್ಲೂ ಏನೂ ಮಾತಾಡದೇ ಕಳ್ಸಿ, ನಿಮ್ಮಿಂದ ಏನೂ ನಿರೀಕ್ಷೆ ಮಾಡ್ದೆ, ನಿಂಗ್ ನಾನು, ನಂಗ್ ನೀನು ಅಂತ್ ಬದ್ಕುದ್ರಲ್ಲಾ... ನಿಮ್ ಯೋಗ್ತಿಗೆ ಈ ಮೂರು ವರ್ಷ ಇತ್ತಗ್ ತಲೆ ಹಾಕ್ದೆ, ನಿಮ್ಮ ಲೋಕ್ದಗ್ ನೀವಿದ್ರಲ್ಲಾ... ಆಯಮ್ಮ ಪಟ್ಟ ಪಾಡು ನಿಮುಗ್ ಗೊತ್ತೇನೂ....???"

"ನಮ್ ಲೋಕ್ದಲ್ಲೇನೂ ನಾವಿರ್ಲಿಲ್ಲ, ಫೋನ್ ಮಾಡ್ತಿದ್ವಿ"

"ಮಾಡ್ತಿದ್ರಿ... ಮಾಡ್ತಿದ್ರಿ.... ಆಯಪ್ಪ ಮಾತಾಡದ್ ನಿಲ್ಸಿ ಒಂದ್ ವರ್ಷ ಆಯ್ತು. ಗೊತ್ತೇನ್ ನಿಮ್ಗೆ?? ಹೇಳಿದ್ರೇನ್ ಆಕೆ? ಅಪ್ಪುಂಗ್ ಫೋನ್ ಕೊಡು ಅಂತ್ ಕೇಳಿದ್ದೀರೇನ್ ನೀವು???" ಒಬ್ಬರ ಮುಖ ಒಬ್ಬರು ನೋಡಿಕೊಂಡರು ಮಕ್ಕಳು,

"ಆಯಪ್ಪನ ವಾಂತಿ ಬಳಿಯುವಾಗ್ಲೋ.. ಗಂಜಿ ಕುಡ್ಸವಾಗ್ಲೋ... ಬಡ್ಕೋತಿದ್ದ್ ನಿಮ್ಮ ಫೋನ್ ಎತ್ತಕ್ಕೆ ಆಕೆ ದಡಬಡಿಸಿ ಬರ್ತಿದ್ರು... ಅಷ್ಟರಮೇಲೆ ನಿಮ್ಮ ವಿಚಾರಣೆ ಬೇರೆ.. ವಿಚಾರುಸ್ಕೊಂಡ್‌ಬಿಟ್ವಿ ಬಿಟ್ವಿ ಅನ್ನೋ ದೊಡ್ಡಸ್ತಿಕೆ....!!! ಎಲ್ಲೋ ಕುಕ್ಕರಿಸ್ಕೊಂಡು 'ಹೆಂಗಿದೀರಿ?? ಹೆಂಗಿದೀರಿ??' ಅಂದ್ಬುಟ್ಟು..., ಒಂದಷ್ಟು ದುಡ್ಡು ಬಿಸಾಕ್ಬುಟ್ರೆ... ಆಗ್ಹೋಯ್ತು ಅನ್ಕೊಂಡ್ರೇನೂ...??? ಆಯಮ್ಮ ನಿಧಾನಸ್ತೆ..., ತನ್ನ ನೋವು ತಾನೇ ನುಂಕತಾಳೆ!!! ಸಂಕಟ ಹೇಳ್ಕೊಳೋರಿಲ್ದೆ, ಮಾತಾಡೋರೇ ಇಲ್ದೆ, ಆಯಪ್ಪನ್ನ ಎತ್ತಿ ಇಳ್ಸಿ, ಕೈ ಮೂಳೇನೇ ಸವೆದಿದೆ. ಮಗಳು ನೀನು... ನೋಡಿದ್ದೀಯಾ ನಿಮ್ಮಮ್ಮನ ಕೈನಾ??? ಸಂಕ್ಟ ಸೇರಲ್ಲಾ ಅಂದ್ಬುಟ್ಟು, ನೀನ್ ತಿಂದ್ ಕೂತಿದ್ದೀಯಲ್ಲ.. ಆಕೆ ಹೊಟ್ಟೆ ತುಂಬಾ ಉಂಡು ಎಷ್ಟು ದಿನಾ ಆಗಿದೆ ಕೇಳಿದ್ದೀರೇನೂ??? ಕಕ್ಕಸ್ಸು,, ವಾಂತಿ ಬಳ್ದೂ ಬಳ್ದೂ... ಅಸಹ್ಯಕ್ಕೆ ತಿನ್ನೋ ಆಸೇನೇ ಸತ್ಹೋಗಿದೆ ಆಕೆಗೆ". ಮೊಮ್ಮಕ್ಕಳು ತಮ್ಮ ಅಜ್ಜಿಯತ್ತ ಕರುಣೆಯಿಂದ ನೋಡಿದವು.

ಆಕೆಯನ್ನು ಕೂಡಿಸಿ, ಬಟ್ಟಲಲ್ಲಿ ತಂದಿದ್ದ ಬಿಸಿ ಮುದ್ದೆ, ಸಾರು ನೀಡಿ, "ಇ....ವ..ತ್ತು ನಿರಾಳವಾಗಿ ಊಟ ಮಾಡೀಮ್ಮ" ಅಂತು ಪಾತಜ್ಜಿ. ಹಸಿದಿದ್ದ ಆಕೆ, ಕಣ್ಣೀರು ಒರೆಸುತ್ತಾ...ಗಬಗಬ ಊಟ ಮಾಡತೊಡಗಿದರು!

ಮಕ್ಕಳ ಕಡೆ ತಿರುಗಿದ ಪಾತಜ್ಜಿ, "ಮಾತೇ ಆಡ್ದೆ ಮಲಗಿದ್ರೂ ಪರವಾಗಿಲ್ಲ..., ಅವರಿರಬೇಕಿತ್ತು ಅಂತ ಕಣ್ಣೀರ್ ಹಾಕ್ತಿದಾರೆ ಆಕೆ. ಯಾಕ್ಹೇಳಿ..., ತನ್ನವರೂಂತ ಯಾರಿದಾರೆ ಆಕೆಗೆ???" ಪಾತಜ್ಜಿಯ ಗಂಟಲು ಗದ್ಗದಿತವಾಯ್ತು

"ತಬ್ಬಲಿತನ ತುಂಬಾ ಕ್ರೂರ ಕಣ್ರಪ್ಪಾ...." ಪಾತಜ್ಜಿಯ ಮಾತಿನಿಂದ, ಆಕೆಯ ಬಿಕ್ಕಳಿಕೆ ಜೋರಾಯ್ತು. ಮೊಮ್ಮಗನೊಬ್ಬ ಓಡಿ ಬಂದು ಅಜ್ಜಿಯನ್ನು ಬಿಗಿಯಾಗಿ ತಬ್ಬಿಕೊಂಡ!!!

"ಸಂಕ್ಟದಲ್ಲೂ ಆಸರೆಯಾಗದೆ, ನಿಮ್ಮವರು ಅನ್ನೋರ್ನೆಲ್ಲಾ ಬಿಟ್ಟು ಅಲ್ಲಿದ್ಕೊಂಡು ಅದೇನ್ ದಬ್ಬಾಕ್ತೀರೋ ನಾ ಕಾಣೆ... ಇಷ್ಟು ದಿನ ಗಂಡ, ಮನೆ, ಮಕ್ಳು ಅಂತ್ ಒದ್ದಾಡಿರೋ ವಯಸ್ಸಾದ ಆಕೇನಾ ಉಸ್ರು ಹೋಗೋ ಹೊತ್ತಲ್ಲಾದ್ರೂ ಅಕ್ಕರೆಯಿಂದ ನೋಡ್ಕಳ್ಳಿದ್ರೆ... ನಿಮ್ಮ ವಿದ್ಯೆ, ನಿಮ್ಮ ಸಂಪಾದನೆ, ನಿಮ್ಮ ಸಾಧನೆ, ಎಲ್ಲ ಮಣ್ಣೇ... ತಲೆಮೇಲೆ ಸುರ್ಕಳಿ"

ಯಾರೊಬ್ಬರೂ ಮಾತಾಡಲಿಲ್ಲ. ಎಷ್ಟೋ ಹೊತ್ತಿನ ಮೇಲೆ ಮೌನ ಮುರಿದು, ನಿರ್ಧಾರದ ಧ್ವನಿಯಲ್ಲಿ ಮಗ ಹೇಳಿದ, "ನಾನು ಕರ್ಕೊಂಡ್ ಹೋಗ್ತೀನಿ ಅಮ್ಮನ್ನ".

"ನಮ್ಮ ಮನೇಲಿರ್ತಾರೆ ಬಿಡಣ್ಣ" ಮಗಳಂದ್ಲು.

ಆಕೆ ಪಾತಜ್ಜಿಯ ಕೈಯನ್ನು ಗಟ್ಟಿಯಾಗಿ ಹಿಡಿದರು. ಪಾತಜ್ಜಿ ನಿಷ್ಠುರವಾಗಿಯೇ ಹೇಳ್ತು, " ಭಾಷೆ ಬರ್ದಿರೋ ದೇಶಕ್ಕೆ ಕರ್ಕೊಂಡ್ ಹೋಗಿ ಆಕೇನ ಕೊಳೆಹಾಕದ್ರು ಬದ್ಲು... ಸ್ವಲ್ಪ ದಿವಸ ಅಲ್ಲಿಟ್ಕಂಡೂ, ವ್ಯವಸ್ಥೆ ಮಾಡ್ಕಂಡು, ಇಲ್ಲೇ ಬರೋ ನಿರ್ಧಾರ ಮಾಡಿ, ಅಲ್ಲಿ

ದುಡ್ಯದ್ರಗೆ ಅರ್ಧ ದುಡುದ್ರೂ.... ಇಲ್ಲಿ ಸಂತೋಷ್ವಾಗಿರ್ತೀರಿ, ಊಚ್ಕಟ್ಟ ದುಡುಸ್ಕೊಂಡು, ಯಾವಾಗಬೇಕೋ ಆವಾಗ, ಕತ್ತೊದ್ಹಾಗೆ ಒದ್ದು ಒಗೀತಾರೆ ಅಂತ ಕೇಳಿದೀನಿ. ಇಲ್ಲೇ ಬಂದ್ರೆ ನೀವೂ ಅಭಿಮಾನ್ವಾಗಿ ಬದುಕ್ತೀರಿ. ಆಕೇನೂ ನೆಮ್ಮದಿಯಾಗಿ ಪ್ರಾಣ ಬಿಡ್ತಾರೆ" .

ಮಗ ಕಣ್ಣರಳಿಸಿ ಪಾತಜ್ಜಿಯತ್ತ ನೋಡುತ್ತಲೇ ಇದ್ದ! ಪಾತಜ್ಜಿಯ ಲೋಕ ಜ್ಞಾನ ಅವನ ಬಾಯಿ ಕಟ್ಟಿತ್ತು.

ಪಾತಜ್ಜಿ ಆಕೆಯ ಭುಜ ಹಿಡಿದು, ತಲೆ ಸವರಿ, ಮೇಲೇಳ್ತು. "ಹ್ಞೂಂ!! ನೀವೆಲ್ಲಾ ಹೋಟ್ಲುಗ್ ಹೋಗ್ತಿರೇನೋ..., ಆಯಮ್ಮನ ಜೊತೆ ನಾನಿರ್ತೀನಿ, ಕತ್ತಲಾಯ್ತು ನೀವ್ ಹೊರ್ಡಿ" .

ಮೊಮ್ಮಗ ಹಟದ ಧ್ವನಿಯಲ್ಲಿ ಹೇಳಿದ, "ಇಲ್ಲ ನಾವೆಲ್ಲ ಅಜ್ಜಿ ಜೊತೆ ಇಲ್ಲೇ ಇರ್ತೀವಿ".

ಪಾತಜ್ಜಿ ಮುಗುಳ್ನಕ್ಕು, "ಸರಿ ಕಣಪ್ಪ" ಅಂದು ನಿಟ್ಟುಸಿರಿಟ್ಟು ಆಕೆಯನ್ನೊಮ್ಮೆ ದಿಟ್ಟಿಸಿ ತನ್ನ ಮನೆಯತ್ತ ಹೊರಡ್ತು!!!

ಭಾರವಾದ ಹೆಜ್ಜೆ ಇಡ್ತಾ... ಬಂದು, ಆಯಾಸದಿಂದ ಮನೆ ಬಾಗಿಲಲ್ಲೇ ಕೂಡ್ತು ಪಾತಜ್ಜಿ!!!

"ನಮಗಾಗಿ ರಕ್ತ ಬಸ್ಗೋರ್ನೆಲ್ಲಾ ಕಳ್ಕಂಡೂ... ಕಾಣ್ದಿರೋ ದೇಶದಲ್ಲಿ ಅರಮನೆ ಕಟ್ಟಿದೀನಿ, ಕೋಟಿ ಆಸ್ತಿ ಮಾಡಿ ೀನಿ, ಅಂತ ಮೆರುದ್ರೆ... ಅದುಕ್ಕೆ ಸುಖ ಅಂತಾರೇನೂ..!!??? ಪಾತಜ್ಜಿಯ ಬಿಗಿದ ಹುಬ್ಬು ಪ್ರಶ್ನಿಸುತ್ತಿತ್ತು!!!

***



ಮಂಡಲಕಲೆ – ರಚನೆ: ಶ್ರೀಮತಿ ರತ್ನಾ ಮೂರ್ತಿ

"ಇದು ಇವರು ಬರೆದಿದ್ದೆ... ಅಥವಾ... AIನೇ?"

– ಎನ್.ವಿ. ರಘುರಾಂ

ನಾನು ಸೂರ್ಯವಂಶದವನು ಅಂದರೆ ಸೂರ್ಯ ಹುಟ್ಟಿದ ಮೇಲೆ ಏಳುವವನು. ಆದರೆ ಈ ದಿನ ಬೆಳಿಗ್ಗೆ ಬೇಗ ಎಚ್ಚರ ವಾಯಿತು. ಇದಕ್ಕೆ ಎ.ಐ. ಇಟ್ಟಿದ್ದ ಅಲಾರಾಂ ಕಾರಣ!

"ಅರ್ಲಿ ಟು ಬೆಡ್, ಅರ್ಲಿ ಟು ರೈಸ್ ಮೇಕ್ಸ್ ದ ಮ್ಯಾನ್ ಹೆಲ್ದೀ, ವೆಲ್ತಿ ಆಂಡ್ ವೈಸ್" ಎಂದು ಬೆಂಜಮಿನ್ ಫ್ರಾಂಕ್ಲಿನ್ ಹೇಳಿ ಎಷ್ಟೋ ವರ್ಷಗಳಾಗಿವೆ. ಇಂಗ್ಲಿಷ್ ಬರದ ಅಮ್ಮನೂ ಇದನ್ನೇ ಐದು ದಶಕದ ಹಿಂದೆಯೇ ಕನ್ನಡದಲ್ಲಿ ಹೇಳಿ, ಹೇಳಿ ಸಾಕಾಗಿ ಸುಮ್ಮನಾಗಿದ್ದರು. ನನ್ನಾಕೆ ನನ್ನನ್ನು ಈ ವಿಷಯದಲ್ಲಿ ಬದಲಾಯಿಸಲು ಸಾಧ್ಯವೇ ಇಲ್ಲವೆಂದು ತಿಳಿದು ಕೈ ಚೆಲ್ಲಿ ವರುಷಗಳೇ ಕಳೆದಿವೆ. ಯಾರ ಕೈಯಲ್ಲಿ ಮಾಡಿಸಲು ಆಗದ ಕೆಲಸ ಈ ದಿನ ಎ.ಐ. ಮಾಡಿಸಿತ್ತು. ಬೆಳಿಗ್ಗೆ ಬೇಗ ಎದ್ದರೆ ಆಗುವ ಅನುಕೂಲದಲ್ಲಿ ಅದು ಹೇಳಿದ ಒಂದು ವಿಷಯ ಮಾತ್ರ ನನ್ನ ಗಮನ ಸೆಳೆದಿದ್ದು ನಿಜ. ಹೌದು, ಬೇಗ ಎದ್ದರೆ ದೇಹದ ಗಡಿಯಾರ ಸರಿಯಾಗಿ ಕೆಲಸ ಮಾಡುತ್ತದೆ. ಆಗ ಹೊಟ್ಟೆ ಸರಿಯಾಗಿ ಖಾಲಿ ಮಾಡಲು ಬೋವೆಲ್ಸ್ ಸರಿಯಾದ ಸಹಕಾರ ಕೊಡುತ್ತದೆ. ವಯಸ್ಸಾದ ಮೇಲೆ ಬೆಳಿಗ್ಗೆ ಸರಿಯಾಗಿ ಹೊಟ್ಟೆ ಖಾಲಿಯಾದರೆ ಆಗುವ ಸಮಾಧಾನ ಇನ್ಯಾವುದಕ್ಕೂ ಸಮನಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ ಬಿಡಿ. ಸರಿ ಈ ದಿನ ಪರೀಕ್ಷೆ ಮಾಡಿಯೇಬಿಡೋಣ ಎಂದು ಎದ್ದೆ. ಅದೂ ಎ.ಐ. ಹೇಳಿದ ತರಹವೇ ಆಗಬೇಕೆ? ಈಗ ಎ.ಐ. ಮೇಲೆ ನಂಬಿಕೆ ಬಂತು.

ನಾನು ಬೇಗ ಎದ್ದು ಬಾತ್ ರೂಮಿಗೆ ಹೋಗಿದ್ದು ನೋಡಿದ ಮನದನ್ನೆ "ಯಾಕೆ, ಏನಾಯ್ತು? ಹೊಟ್ಟೆ ಸರಿ ಇದೆ ತಾನೇ?" ಎಂದು ಕಾಳಜಿಯಿಂದ ಕೇಳಿದಳು. "ಚಾಟ್ ಜಿಪಿಟಿ ಹೇಳಿದನ್ನು ಪರೀಕ್ಷೆ ಮಾಡುತ್ತಿದ್ದೆ..." ಎಂದು ಹೇಳುತ್ತಿದ್ದಾಗ ಆಕೆಯ ಕುತೂಹಲ ಜಾಸ್ತಿ ಆಯಿತು. ವಿಷಯ ತಿಳಿದಮೇಲೆ "ಮೂವತ್ತು ವರ್ಷ ಹಿಂದೆಯೇ ಈ ಚಾಟ್ ಜಿಪಿಟಿ ಬಂದಿದ್ದರೆ ನನಗೆ ಬೆಳಿಗ್ಗೆ ಏಳಿಸುವ ತೊಂದರೆ ಆದ್ರೂ ತಪ್ಪುತ್ತಿತ್ತು. ಎ.ಐ. ನಿನಗೆ ದೊಡ್ಡ ನಮಸ್ಕಾರ" ಎನ್ನುತ್ತಾ ನಾಟಕೀಯವಾಗಿ ಟ್ಯಾಬ್ ಗೆ ಕೈ ಮುಗಿದು ಅಡುಗೆಮನೆಗೆ ಹೋದಳು.

ದಿನಪತ್ರಿಕೆ ಹಿಡಿದು ಕೂತಿದ್ದ ನನಗೆ ಎಂದಿನಂತೆ ಗಮಗಮ ಕಾಫೀ ತಂದುಕೊಟ್ಟಳು. ಆಕೆಯ ಕಡೆಗೆ ಮೆಚ್ಚುಗೆಯ ನೋಟ ಬೀರುತ್ತಾ ಇನ್ನೇನು ಕಾಫೀ ಬಟ್ಟಲು ಬಾಯಿಗೆ ಇಡವುದರಲ್ಲಿ ಮತ್ತೆ ಅಲಾರಾಂ ಹೊಡೆಯಿತು. 'ಈಗ ಒಂದು ನೂರು ಎಂ.ಎಲ್. ಉಗುರು ಬೆಚ್ಚಗಿನ ನೀರು ಕುಡಿದು, ಕುಳಿತು ಧ್ಯಾನ ಮಾಡಬೇಕು' ಎಂಬ ಸಂದೇಶ ಎ.ಐ.ನಿಂದ ಬಂದಿತ್ತು. ಆಗ "ಸ್ವಲ್ಪ ಹೊತ್ತು ಬಿಟ್ಟು ಕಾಫೀ ಕುಡಿಯುತ್ತೇನೆ, ಈಗ ನೀರು ಕುಡಿದು ಧ್ಯಾನ ಮಾಡುತ್ತೇನೆ, ಕಣೆ" ಎಂದಾಗ ಆಕೆಗೆ ಏನು ಹೇಳಬೇಕೆಂದು ಗೊತ್ತಾಗಲಿಲ್ಲ. 'ಇವರಿಗೆ ಏನೋ ಆಗಿದೆ ಇವತ್ತು. ಇರಲಿ, ಇವೆಲ್ಲಾ ಮೂರು ದಿನದ ಶೋಕಿ ಅಷ್ಟೇ. ನನಗೆ ಗೊತ್ತಿಲ್ಲವೇ ನನ್ನ ದೇವರ ಸತ್ಯ' ಎನ್ನುವ ಮಾತು ಆಕೆಯ ಬಾಯಿಂದ ಬರದೇ ಇದ್ದರೂ, ನನಗಂತೂ ಹಾಗೆ ಕೇಳಿಸಿದ್ದು ನಿಜ!

ಎದುರುಗಡೆ ಆಪ್‌ನಲ್ಲಿರುವ ಕ್ಯಾಮೆರಾ ತೆರೆದಿಟ್ಟು ಧ್ಯಾನಕ್ಕೆ ಕುಳಿತುಕೊಂಡೆ. ಕುತ್ತಿಗೆ ನೆಟ್ಟಗಿರಲಿ, ಕೈಚಾಚು.., ಹೀಗೆ ಅದು ಒಂದಾದರ ಮೇಲೆ ಒಂದು ಹೇಳುತ್ತಾ ಸಾಗಿತ್ತು. ಮನ ಅದನ್ನು ಮಾಡಲು ಬಯಸಿದರೂ ದೇಹ ಅದಕ್ಕೆ ಸಹಕರಿಸಲಿಲ್ಲ. 'ಬೇಜಾರು ಬೇಡ, ನಿಧಾನವಾಗಿ ಸರಿಯಾಗುತ್ತದೆ... ಈಗ ಮುಂದುವರಿಸಿ' ಎಂಬ ಸಂದೇಶ ಬಂದಿತು. ಅಂತೂ ಅದು ಹೇಳಿದಂತೆ ಮಾಡಲು ಪ್ರಯತ್ನಪಟ್ಟು ಮಂಡಿ ನೋವು ಮತ್ತೆ ಪ್ರಾರಂಭವಾದಾಗ, ಅಲ್ಲಿಗೆ ನಿಲ್ಲಿಸಿ ಮತ್ತೆ ಬಂದು ಸೋಫಾದ ಮೇಲೆ ಕುಳಿತುಕೊಂಡೆ.

ನನ್ನಾಕೆ ಆ ವೇಳೆಗೆ ಸ್ನಾನ ಮುಗಿಸಿಕೊಂಡು, ದೇವರಿಗೆ ದೀಪ ಹಚ್ಚಿ, ಅಡುಗೆಮನೆಗೆ ಹೋಗಿದ್ದಳು. ಮತ್ತೆ ಹೊಸದಾಗಿ ಕಾಫೀ ಮಾಡಿಕೊಂಡು ಬಂದು ಕೊಟ್ಟಳು. ಈ ದಿನ ಕಾಫೀ ಎಂದಿಗಿಂತ ರುಚಿಯಾಗಿದೆ ಅನ್ನಿಸಿದ್ದು ನಿಜ. ಅದನ್ನು ಬಾಯಿಬಿಟ್ಟು ಹೇಳಿದೆ.

"ಏನ್ರೀ, ಇದನ್ನು ಹೇಳು ಎಂದು ಎ.ಐ. ಹೇಳಿಕೊಟ್ಟಿದ್ದಾ?" ಎಂದಾಗ ನಾನು ಒಂದು ಕ್ಷಣ ಕಕ್ಕಾಬಿಕ್ಕಿಯಾಗಿದ್ದು ನಿಜ. "ಇಲ್ಲ ಕಣೆ, ನಾನೇ ಹೇಳಿದ್ದು... ಐ ಸ್ವೇರ್" ಎಂದರೂ ಆಕೆಗೆ ನಂಬಿಕೆ ಬರಲಿಲ್ಲ. 'ಈ ಗಂಡಸರೇ ಹೀಗೆ, ಹೋಟೆಲಿನಲ್ಲಿ ಕೊಡುವ ಕೆಟ್ಟ ಕಾಫೀ ಕುಡಿದು, ಚೆನ್ನಾಗಿದೆ ಎಂದು ಹೇಳುತ್ತಾ ಹತ್ತು ರೂಪಾಯಿ ಕಾಫೀಗೆ ಹತ್ತು ರೂಪಾಯಿ ಟಿಪ್ಸ್ ಕೊಟ್ಟು ಬರುವವರು, ಮನೆಯಲ್ಲಿ ಕಾಫೀ ಚೆನ್ನಾಗಿದೆ ಎಂದು ಹೇಳಲು ಎ.ಐ.ಬರಬೇಕಾಯಿತು' ಎಂದು ಗೊಣಗಿಕೊಂಡು ಎದ್ದು ಅಡುಗೆಮನೆಗೆ ಹೋದಳು.

ನಾನು ಸ್ನಾನ ಮಾಡಿ ಬರುವಷ್ಟರಲ್ಲಿ ಅಡುಗೆಮನೆಯಿಂದ ಗಮಗಮ ಉಪ್ಪಿಟ್ಟಿನ ಸುವಾಸನೆ ಬರಲು ಪ್ರಾರಂಭವಾಗಿತ್ತು. ಅಡುಗೆ ವಿಷಯದಲ್ಲಿ ನನ್ನಾಕೆ ಸಾಕ್ಷಾತ್ ಅನ್ನಪೂರ್ಣೇಶ್ವರಿ ದೇವಿಯೇ ಸರಿ. "ಈ ದಿನ ನಿಮ್ಮ ಎ.ಐ. ಏನ್ನನ್ನು ತಿನ್ನಲು ಹೇಳಿದೆ? ಹೇಳುವಂತವರಾಗಿ ಯಜಮಾನರೇ" ಎಂದಾಗ, ಒಂದು ಕ್ಷಣ ಎ.ಐ.ಕಡೆಯಿಂದ ಬಂದ ಸಂದೇಶವನ್ನು ನೋಡಿದೆ. "ಅರೇ ಇದೇನಿದು? ನೋಡೆ ಇಲ್ಲಿ, ೨೫೦ ಗ್ರಾಂ ಉಪ್ಪಿಟ್ಟು ಎಂದು ಬರೆದಿದೆ ಕಣೆ" ಎಂದು ಆಶ್ಚರ್ಯದಿಂದ ಹೇಳಿದಾಗ, ಆಕೆ ನನಗೂ ಉಪ್ಪಿಟ್ಟು ಕೊಟ್ಟಳು! 'ಎ.ಐ. ಕೂಡ ಉಪ್ಪಿಟ್ಟಿನ ಸುವಾಸನೆ ಕಂಡುಹಿಡಿಯುತ್ತದೆಯೇ?' ಎಂದು ಅನಿಸಿದ್ದು ನಿಜ.

ಗಂಟೆ ಹತ್ತಾಗುತ್ತಾ ಬಂದಿತ್ತು. ಯುದ್ಧದ ಗಲಾಟೆಯ ಮಧ್ಯದಲ್ಲಿ ಷೇರುಗಳ ಬೆಲೆ ಏನಾಯಿತು? ನೋಡೋಣ ಎಂದು ಗಣಕಯಂತ್ರ ತೆರೆದೆ. 'ಈ ದಿನ ಪೆಟ್ರೋಲ್ ಬೆಲೆ ಕಡಿಮೆ ಆದಂತೆ, ಬ್ಯಾಂಕು, ವಾಹನ ತಯಾರಿಕಾ ಕಂಪನಿಗಳ ಷೇರು ಏರಿಕೆ ಆಗುತ್ತದೆ. ತಾಳ್ಮೆ ಇರಲಿ. ಹೋಲ್ಡ್ ಮಾಡಿ' ಎನ್ನುವ ಉಪದೇಶ ಎ.ಐ.ಕೊಟ್ಟಿತು. ಅದು ಹೇಳಿದ ಹಾಗೆ ನನ್ನ ಮನೆಯವರು ಕೆಲಸ ಮಾಡುತ್ತಿದ್ದ ಬ್ಯಾಂಕಿನ ಷೇರು ಮತ್ತು ಇತರ ಷೇರುಗಳ ಬೆಲೆ ಜಾಸ್ತಿಯಾಗಿ ಮಧ್ಯಾಹ್ನದ ಹೊತ್ತಿಗೆ ಈ ಸಾರಿ ಅಕ್ಷಯ ತೃತೀಯದಲ್ಲಿ ಎರಡು ಗ್ರಾಂ ಬಂಗಾರ ತೆಗೆದುಕೊಳ್ಳುವಷ್ಟು ಲಾಭ ಒಂದೇ ದಿನ ಆಯಿತು.

ಆ ಸಮಯದಲ್ಲೇ ಚೆಡ್ಡಿ ದೋಸ್ತ್ ರಾಮಣ್ಣನ ಕರೆ ಬಂತು. "ಏನೋ, ನೀನ್ನಿನ್ನು ಹಳೇ ಡಿ.ಪಿ. ಹಾಕಿಕೊಂಡಿದ್ದೀಯಾ? ಎಲ್ಲರೂ ಎ.ಐ.ಮಾಡಿದ ಫೋಟೋ ಹಾಕಿಕೊಳ್ಳೋದು ಲೇಟೆಸ್ಟ್ ಟ್ರೆಂಡ್ ಕಣೋ..." ಎನ್ನುತ್ತಾ ಹೇಳುತ್ತಾ ಹೋದ. ಸರಿ ನಾನು ಎ.ಐ. ತೆರೆದೆ. ಇದೇನಿದು ಆಶ್ಚರ್ಯ! ನಾನು ಮತ್ತು ನನ್ನಾಕೆ ಇದ್ದ ಫೋಟೋವನ್ನು ಎ.ಐ.ತಯಾರು ಮಾಡಿ ಇಟ್ಟಿದೆ. ಡಿ.ಪಿ.ಯಲ್ಲಿ ನನ್ನ ಇಪ್ಪತ್ತು ವರ್ಷಗಳ ಹಿಂದಿನ ಫೋಟೋ ಸುಮಾರು ದಿನಗಳಿಂದ ಹಾಕಿಕೊಂಡಿದ್ದೆ. ಆ ಫೋಟೋದಲ್ಲಿ ತಲೆ ತುಂಬ ಕಪ್ಪು ಕೂದಲು ಇದ್ದಿದ್ದೆ ಅದನ್ನು ಡಿ.ಪಿ.ಯಲ್ಲಿ ಹಾಕಲು ಮುಖ್ಯ ಕಾರಣವಾಗಿತ್ತು. ಎಷ್ಟೆಲ್ಲಾ ಲೇಖನಗಳನ್ನು ಬರೆದರೂ, ಇನ್ನೂ 'ಉದಯೋನ್ಮುಖ ಕವಿ' ಪಟ್ಟದಿಂದ ಮೇಲೆ ಹೋಗಲೇ ಇಲ್ಲ ಎಂದು ಅನಿಸಲು ಪ್ರಾರಂಭವಾಗಿತ್ತು. ಅದಕ್ಕೆ ಮುಖ್ಯ ಕಾರಣ ಈ ಡಿ.ಪಿ.ಯಲ್ಲಿರುವ ಫೋಟೋ ಇರಬಹುದೇ? ಎಂಬ ಅನಿಸಿಕೆ ಪ್ರಾರಂಭವಾದಾಗ, ಒಂದಿಷ್ಟು ಬೆಳ್ಳಿಕೂದಲು ಕಾಣುವ ಗಂಭೀರ ಮುಖಭಾವದ ಫೋಟೋ ಡಿ.ಪಿ.ಗೆ ಇತ್ತೀಚೆಗೆ ಹಾಕಿಕೊಂಡೆ. ಅದಾದ ಮೇಲೆ ಬರೆದ ಲೇಖನಕ್ಕೆ ಅನೇಕರು ಪ್ರೌಢ ಪ್ರಬಂಧ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಹಾಗಾಗಿ ಈಗ ಆ ಫೋಟೋ ಬದಲಾವಣೆ ಮಾಡಲು ಮನಸ್ಸಿಲ್ಲದಿದ್ದರೂ ಎ.ಐ. ಹೇಳಿದ ಫೋಟೋ ಡಿ.ಪಿ.ಆಯಿತು. ನನ್ನ ಡಿ.ಪಿ.ಯಲ್ಲಿ ಆಕೆಯ ಜೊತೆ ಇರುವ ಫೋಟೋ ಮೊದಲಬಾರಿಗೆ ಕಂಡು ಖುಷಿಯಾದ ನನ್ನಾಕೆ ಬೆಳಿಗ್ಗೆ ದೇವರಿಗೆ ನೈವೇದ್ಯ ಮಾಡಿ ಇಟ್ಟಿದ್ದ ನಂದಿನಿ ಪೇಡಾವನ್ನು ತಂದು, "ಪ್ರಸಾದ, ಪರವಾಗಿಲ್ಲ ತಿನ್ನಬಹುದು" ಎನ್ನುತ್ತಾ ಕೊಟ್ಟಳು.


ಅಷ್ಟರಲ್ಲಿ ಮಗಳಿಂದ ಫೋನ್ ಬಂತು. "ಅಪ್ಪ, ಡಿ.ಪಿ. ಚೆನ್ನಾಗಿದೆ. ಆದರೆ ಇವತ್ತಿನ ಟ್ರೆಂಡ್ ಅದಲ್ಲ ಅಪ್ಪ, ಎ.ಐ.ಗೆ ನಿನ್ನ ಬಗ್ಗೆ ಏನು ಅನಿಸುತ್ತದೆ ಎಂದು ಕೇಳು, ಅದು ಹೇಳಿದ್ದನ್ನು ಸ್ಟೇಟಸ್ ಗೆ ಹಾಕು" ಎಂದಳು.

"ನಾನು ಯಾವ ರೀತಿಯ ಮನೋಭಾವದವನು ಎಂದು ತಮಗೆ ಗೊತ್ತೆ?" ಎಂಬ ಪ್ರಶ್ನೆಗೆ ಎ.ಐ. ಕ್ಷಣ ಮಾತ್ರದಲ್ಲಿ ಉತ್ತರ ಕೊಡಲಿಲ್ಲ. "ಯೋಚಿಸುತ್ತಿದ್ದೇನೆ" ಎಂದು ಫ್ಲಾಶ್ ಆಗುತ್ತಿತ್ತು. ನನಗೆ ಕೂಡ ಈಗ ಏನು ಹೇಳಬಹುದೆಂದು ಕುತೂಹಲ ಮೂಡಿತ್ತು. 'ಮೃದುವಾದ ಮಗುವಿನಂತ ಮನಸ್ಸು, ಪ್ರೀತಿಗೆ ಮನಸೋಲುವವನು,...' ಹೀಗೆ ಹೇಳಬಹುದೇ ಎಂದು ಮನಸ್ಸು ಓಡುತ್ತಿತ್ತು. ಆಗ ಟಿನ್ ಎನ್ನುತ್ತಾ ಸಂದೇಶ ಬಂದಿತು. "ತಾವು ಕೆ. ಕೀಟ್ಸ್ ತರಹ ಮನಸ್ಥಿತಿ ಉಳ್ಳವರು" ಎಂದಿತ್ತು. "ನೋಡೇ...

ನಾನು ಪ್ರಸಿದ್ಧ ಇಂಗ್ಲಿಷ್ ಕವಿ ಕೀಟ್ಸ್ ತರಹ ಇದ್ದೀನಂತೆ" ಎಂದು ಕೂಗಿ ಹೇಳಿದಾಗ, ಆಕೆಯೂ ಬಂದು ಸಂದೇಶವನ್ನು ನೋಡಿದಳು ಮತ್ತು ನನ್ನ ಮುಖವನ್ನು ನೋಡಿ, ಬರುತ್ತಿದ್ದ ನಗುವನ್ನು ಕಷ್ಟಪಟ್ಟು ತಡೆಹಿಡಿದುಕೊಂಡು. "ಇವರು ಜಾನ್ ಕೀಟ್ಸ್ ಅಲ್ಲ, ಕೆ.ಕೀಟ್ಸ್. ಕೆ ಅಂದರೆ ಕುಮಾರ್ ಎಂದು" ಎಂದಳು. "ನಾನು ವರ್ಡ್ಸ್‌ವರ್ತ್, ಜಾನ್ ಕೀಟ್ಸ್, ರಾಬರ್ಟ್ ಫ್ರಾಸ್ಟ್, ಇಲಿಯಟ್ ಎಲ್ಲರ ಬಗ್ಗೆಯೂ ಕೇಳಿದ್ದೇನೆ. ಆದರೆ ಯಾರು ಈ ಕುಮಾರ್ ಕೀಟ್ಸ್ ಗೊತ್ತಾಗಲಿಲ್ಲ" ಎಂದೆ. "ಅವರು ಜಾನ್ ಕೀಟ್ಸ್ ಕವನಗಳ ಲೈಕ್ ಮಾಡುವ ಕನ್ನಡದ ಕುಮಾರ" ಎಂದಾಗ ನನಗೂ ನಗು ಬಂತು. ಹೈಸ್ಕೂಲಿನ ಇಂಗ್ಲಿಷ್ ಪಾಠದಲ್ಲಿ ಇದ್ದ ಕೀಟ್ಸ್ ಕವನವೊಂದನ್ನು ಓದಿದ್ದು ಬಿಟ್ಟರೆ ನಾನು ಅವರು ಬರೆದಿದ್ದ ಬೇರೆ ಏನ್ನನ್ನೂ ಓದಿಲ್ಲ. ಅದು ಎ.ಐ.ಗೆ ಗೊತ್ತಿರುವುದಿಲ್ಲ ಬಿಡಿ.

ಈಗ ನನ್ನಾಕೆ "ಏನ್ರೀ, ಎರಡು ದಿನದಿಂದ ಏನೂ ಬರೆದೇ ಇಲ್ಲ" ಎಂದಾಗ, "ಹೌದು ಕಣೆ. ಎರಡು ದಿನದಿಂದ ತಲೆ ಓಡುತ್ತಾ ಇಲ್ಲ. ಅದಕ್ಕೆ ಸುಮ್ಮನೆ ಎ.ಐ.ಯಲ್ಲಿ ಫಿಟ್ ನೆಸ್ ರಿಜೀಮ್ ನೋಡುತ್ತಾ ಕಾಲ ಕಳೆಯುತ್ತೀದ್ದೇನೆ" ಎಂದೆ. "ಅಯ್ಯೋ, ಅದಕ್ಯಾಕೆ ತಲೆ ಕೆಡಿಸಿಕೊಳ್ಳುತ್ತೀರಿ. ಈಗ ಆಗಿದ್ದನ್ನೇ ಬರೆಯಿರಿ" ಎಂದಾಗ, "ಅಯ್ಯೋ ಹೌದಲ್ಲ!, ನಾನು ಯಾಕೆ ಬರೆಯಬಾರದು" ಎನ್ನುತ್ತಾ ಮತ್ತೆ ಟ್ಯಾಬ್ ತೆರೆದೆ. ಬರೆದಾದ ಮೇಲೆ ಓದಿದ ನನ್ನಾಕೆ, "ಅಲ್ಲಾ ರೀ..., ಬರಹದಲ್ಲಿ ಎ.ಐ. ಪದವೇ ತುಂಬಿ ತುಳುಕುತ್ತಿದೆ. ಸರ್ವಂ ಎ.ಐ.ಮಯವೇ ಆಗಿದೆ. ಓದಿದವರು ಇದು ಇವರೇ ಬರೆದಿದ್ದೇ... ಅಥವಾ ಎ.ಐ.ನೇ... ಎಂದು ಅನುಮಾನ ಪಟ್ಟುಕೊಳ್ಳುವುದಿಲ್ಲವೇ" ಎಂದಳು. ನನ್ನ ಬಳಿ ಅದಕ್ಕೆ ಉತ್ತರವಿರಲಿಲ್ಲ.

***



ಮಂಡಲಕಲೆ – ರಚನೆ: ಶ್ರೀಮತಿ ರತ್ನಾ ಮೂರ್ತಿ

ಹರಿಕಥಾರತ್ನ ಆರ್. ಗುರುರಾಜುಲು ನಾಯ್ಡು

– ಮಹಾಬಲ



ಬ್ಯಾಂಕಿನಲ್ಲಿ ಒಂದು ದಿನ ನಗದು ಮುಂಗಟ್ಟೆಯ ಸಹೋದ್ಯೋಗಿ ಮಂಜುಳಾ ಅವರು, ‘‘ಸರ್ ಇಲ್ಲಿ ಬನ್ನಿ ಬೇಗ’’ ಎಂದು ನನ್ನ ಕರೆದರು.

ನಾನು "ಏನು ಮಂಜುಳಾ, ಕಂಪ್ಯೂಟರ್ ಕೆಟ್ಟಿತಾ? ಪಾಸ್‌ವರ್ಡ್ ಬೇಕಾ? ಎಂದೆಲ್ಲಾ ಕೇಳಿದಾಗ” ಅವೆಲ್ಲಾ ವಿಷಯ ಅಲ್ಲ, ಬೇರೆಯದು, ಬನ್ನಿ" ಎಂದಾಗ ಹೋದೆ

ಕೌಂಟರಿನ ಬಳಿ ಕೃಷ್ಣವರ್ಣದ ದೃಢಕಾಯದ ವಯಸ್ಸಾದವರೊಬ್ಬರು ನಿಂತಿದ್ದರು. ಮಂಜಳಾ ಅವರನ್ನು ಪರಿಚಯ ಮಾಡಿಕೊಡುತ್ತ, "ಇವರು ಲಕ್ಷ್ಮಣದಾಸ್ ಅಂತ. ಶಿಕ್ಷಣ ಇಲಾಖೆಯ ನಿವೃತ್ತರು. ನಮ್ಮ ಬ್ಯಾಂಕ್ ಪಿಂಚಣಿದಾರರು. ಪ್ರಸಿದ್ಧ ರಂಗನಟ, ಜತೆಗೆ ಹರಿಕಥಾರತ್ನ ಗುರುರಾಜಲು ನಾಯ್ದು ಅವರ ಶಿಷ್ಯರು" ಎಂದರು.

ನಾನು ತುಮಕೂರಿಗೆ ಪ್ರಯಾಣ ಮಾಡುವಾಗಲೆಲ್ಲ ರಾಜಾಜಿನಗರದ ನವರಂಗ್ ಚಿತ್ರಮಂದಿರದ ಎದುರು ‘‘ಹರಿಕಥಾರತ್ನ ಆರ್. ಗುರುರಾಜಲು ನಾಯ್ಡು ವೃತ್ತ" ಎಂಬ ಫಲಕ ನೋಡಿ ಪುಲಕಿತನಾಗುತ್ತಿದ್ದೆ. ಅಷ್ಟರಮಟ್ಟಿಗೆ ನಾನು ಅವರ ಅಭಿಮಾನಿ. ಲಕ್ಷ್ಮಣದಾಸರಿಗೆ ನಾನು ವಂದಿಸುತ್ತ ನನ್ನ ಸೀಟಿನತ್ತ ಅವರನ್ನು ಕರೆದೊಯ್ದೆ.

ನಾನು ಬಾಲ್ಯದಿಂದ ಹಲವಾರು ವಿದ್ವಾಂಸರ ಹರಿಕಥೆಗಳನ್ನು ಆಲಿಸಿದ್ದರೂ ಅದೇಕೋ ಗುರುರಾಜುಲು ನಾಯ್ಡು ಅವರ ಹರಿಕಥೆಗೆ ದಾಸನಾಗಿಬಿಟ್ಟಿದ್ದೆ. ದಿನಪತ್ರಿಕೆಯ 'ನಗರದಲ್ಲಿ ಇಂದು' ಅಂಕಣದಲ್ಲಿ ಅವರ ಹರಿಕಥೆಯ ಕಾರ್ಯಕ್ರಮ ಇರುವ ಸುದ್ಧಿ ಕಣ್ಣಿಗೆ ಬಿದ್ದದ್ದೇ ಸಾಕು ನನ್ನ ಮನಸ್ಸು ಸಾಯಂಕಾಲಕ್ಕಾಗಿ ಚಡಪಡಿಸುತ್ತಿತ್ತು. ನಮ್ಮ ಮನೆಯಿದ್ದ ಜಯನಗರ ಒಂದನೇ ಬ್ಲಾಕ್‌ನಿಂದ ಬಸವನಗುಡಿ, ಶಂಕರಪುರ, ಚಾಮರಾಜಪೇಟೆ ಇಂಥಕಡೆ ನಡೆದೇಹೋಗುತ್ತಿದ್ದೆ. ತಡವಾಗಿ ಮನೆಗೆ ವಾಪಸು ಬಂದಾಗ ಮನೆಯವರೆಲ್ಲರ ಹತ್ತಿರ ಬೈಸಿಕೊಳ್ಳುವುದು ಸರ್ವೆ ಸಾಧಾರಣವಾಗಿತ್ತು.

ಹರಿಕಥೆಯ ಆರಂಭದ ಹೊತ್ತಿನಲ್ಲೇ ಅಲ್ಲಿಗೆ ತಲುಪುವ ಗುರಿಯನ್ನಂತೂ ನಾನು ಎಂದೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಏಕೆಂದರೆ ಸಹ ವಾದ್ಯಗಾರರು, ಹಾರ್ಮೋನಿಯಂ ತಬಲಾಗಳನ್ನು ಶ್ರುತಿ ಮಾಡಿಕೊಳ್ಳುತ್ತಿರುವಾಗ ನಾಯ್ಡು ಅವರು ತಮ್ಮ ಬಟ್ಟೆಯ ಚೀಲದಿಂದ ಒಂದು ಕೇಸರಿ ಬಣ್ಣದ ಉದ್ದನೆಯ ಶಲ್ಯವನ್ನು ಹೊರಗೆಳೆದು, ಕೈಬೆರಳುಗಳಿಂದ ಅದನ್ನು ನೆರಿಗೆಮಾಡಿ, ತಲೆಗೆ ರುಮಾಲು ಸುತ್ತಿಕೊಂಡು ಅದೇ ಚೀಲದಲ್ಲಿದ್ದ ಚಿಕ್ಕ ಕನ್ನಡಿಯಲ್ಲಿ ಒಮ್ಮೆ ನೋಡಿಕೊಂಡು, ಥಟ್ಟನೆ ಕೈತಟ್ಟಿ ತಾಳಹಾಕುತ್‌ತ ಎದ್ದು ನಿಂತರೆಂದರೆ ಜನರಿಗೆ ರೋಮಾಂಚನ. ಆಕರ್ಷಕ ಮುಖಭಾವ, ಭವ್ಯವಾದ ಆಳು.. ಸ್ವಾಮಿ ವಿವೇಕಾನಂದರೇ ಕಣ್ಣೆದುರು ನಿಂತಿದ್ದಾರೇನೋ ಎಂದೂ ಭಾವಿಸುವಂತಿತ್ತು.

ನೆರೆವ ಪುರದೊಳಗೆ ಎಂಬ ಪೀಠಿಕೆಯ ಹಾಡು, "ವಿನಾಯಕ ನಿನು ವಿನಾ..." ಅಥವಾ "ಗಾಯಿಯೆ ಗಣಪತಿ ಜಗವಂದನ" ಅಥವಾ "ಧಿಮಿಕಿಟ ಧಿಮಿಕಿಟ ತಾಲಮೃದಂಗ" ಇಂಥ ಗಣಪತಿ ಸ್ತುತಿಯಿಂದ ಆರಂಭಿಸುತ್ತ ಅಂದಿನ ಕಥೆಯ ಮಹತ್ವವನ್ನು ಚುಟುಕಾಗಿ ವಿವರಿಸಿ, 'ಹರ ನಮಃ ಪಾರ್ವತೀಪತಯೇ...' ಇತ್ಯಾದಿ ಘೋಷ ಅವರಿಂದ ಮೊಳಗಿತೆಂದರೆ ಹರಿಕಥೆ ಆರಂಭವಾಯಿತೆಂದೇ ಲೆಕ್ಕ.

ಗುರುರಾಜುಲು ನಾಯ್ಡು ಅವರು ನಾಟಕ ಮತ್ತು ಸಿನಿಮಾರಂಗಗಳಲ್ಲಿ ತಮ್ಮ ಪ್ರತಿಭೆ ಮತ್ತು ರೂಪಗಳಿಂದ ಹೆಸರಾಗಿದ್ದರು. ಹರಿಕಥೆಗೇ ಹೆಚ್ಚಾಗಿ ಅಂಟಿಕೊಂಡ ಅವರಿಗೆ ಅವರ ತಂದೆಯವರಾದ ರಾಮಸ್ವಾಮಿ ನಾಯ್ಡು ಅವರೇ ಸ್ಫೂರ್ತಿ. ಮೈಸೂರಿನ ಪ್ರಾಥಮಿಕ ಶಾಲೆಯೊಂದರ ಅಧ್ಯಾಪಕರಾಗಿದ್ದ ರಾಮಸ್ವಾಮಿ ನಾಯ್ಡು ಆನುವಂಶೀಯವಾಗಿ ಬಂದ ಹರಿಕಥಾ ಕಲೆಯನ್ನು ರೂಢಿಸಿಕೊಂಡು ಮೈಸೂರಿನ ಪ್ರಮುಖ ಹರಿಕಥಾ ವಿದ್ವಾಂಸರಾಗಿದ್ದರು.

ಗುರುರಾಜುಲು ನಾಯ್ಡು ಅವರು 1934ರಲ್ಲಿ ಮೈಸೂರಿನಲ್ಲಿ ಜನಿಸಿದರು. ತಂದೆ ರಾಮಸ್ವಾಮಿ ನಾಯ್ಡು ತಮ್ಮ ಮಗನಿಗೆ ಬಿ. ದೇವೇಂದ್ರಪ್ಪನವರ ಶಿಷ್ಯ ಎಂ.ಎನ್.ಗೋವಿಂದಸ್ವಾಮಿ ಅವರ ಬಳಿ ಸಂಗೀತ ಕಲಿಯಲು ಏರ್ಪಾಡು ಮಾಡಿದರು. ಜೊತೆಗೆ ತಾವೇ ಹರಿಕಥಾ ಶಿಕ್ಷಣವನ್ನು ನೀಡಿದರು. ಈ ಎರಡೂ ಉತ್ತಮ ಶಿಕ್ಷಣದ ದೆಸೆಯಿಂದ ಗುರುರಾಜ ತನ್ನ ಐದನೆಯ ವಯಸ್ಸಿಗೇ ಹರಿಕಥೆ ಮಾಡುವ ಸಾಮರ್ಥ್ಯಪಡೆದು 'ಬಾಲಹರಿದಾಸ' ಎನಿಸಿದ. ತಂದೆ ರಾಮಸ್ವಾಮಿ ನಾಯ್ಡುರವರ ಕಥಾ–ಕೀರ್ತನ ಕಾರ್ಯಕ್ರಮದಲ್ಲೆಲ್ಲ ಪಾಲ್ಗೊಳ್ಳುತ್ತಿದ್ದ ಗುರುರಾಜ, ಅವರ ಅನಾರೋಗ್ಯದ ಸಂದರ್ಭದಲ್ಲಿ ತಾನೇ ಸ್ವತಂತ್ರವಾಗಿ ಕಥೆ ನೀಡುತ್ತಿದ್ದ. ಹೀಗಾಗಿ ಲೌಕಿಕ ವಿದ್ಯಾಭ್ಯಾಸ ಕುಂಠಿತವಾಗಿ ಮಾಧ್ಯಮಿಕ (ಎಲ್.ಎಸ್.) ಶಾಲಾ ಶಿಕ್ಷಣಕ್ಕೇ ಸೀಮಿತವಾಯಿತು.

ತಂದೆಯವರ ನಿಧನಾನಂತರ ಮೈಸೂರಿನಿಂದ ಬೆಂಗಳೂರಿಗೆ ಬಂದ ಗುರುರಾಜರು ಭಾರತೀಯ ವಿಮಾನ ಕಾರ್ಖಾನೆಯಲ್ಲಿ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದರು. ಅವಕಾಶ ದೊರೆತಾಗಲೆಲ್ಲ ಹರಿಕಥಾ ಕಾರ್ಯಕ್ರಮ ನೀಡುತ್ತಿದ್ದರು. ಇವರ ಒಳ್ಳೆಯ ಕಂಠಶ್ರೀ, ಮಧುರವಾದ ಲಯಬದ್ಧ ಗಾಯನ, ಅಭಿನಯದ ಪ್ರಾವೀಣ್ಯತೆಯನ್ನು ಕಂಡುಕೊಂಡ ವಿಮಾನ ಕಾರ್ಖಾನೆಯ ಲಲಿತ ಕಲಾ ಸಂಘದವರು ತಮ್ಮ ನಾಟಕವೊಂದರಲ್ಲಿ ಗುರುರಾಜುಲು ನಾಯ್ಡುರವರಿಗೆ ಸ್ವಾಮಿ ವಿವೇಕಾನಂದರ ಪಾತ್ರ ನೀಡಿದಾಗ ಅದನ್ನು ಪ್ರೇಕ್ಷಕರ ಮನಮುಟ್ಟುವಂತೆ ಅಭಿನಯಿಸಿದರು. ಅಂದು ನಾಟಕಕ್ಕೆ ಮುಖ್ಯ ಅತಿಥಿಗಳಾಗಿ ಬಂದಿದ್ದ ಸುಬ್ಬಯ್ಯ ನಾಯ್ಡುರವರಿಗೆ ಗುರುರಾಜುಲು ನಾಯ್ಡುರವರ ವಿವೇಕಾನಂದರ ಪಾತ್ರ ನಿರ್ವಹಣೆ ಬಹು ಮೆಚ್ಚುಗೆಯಾಗಿ ಆತನನ್ನು ತಮ್ಮ ಕಂಪೆನಿಗೆ ಸೇರುವಂತೆ ಆಹ್ವಾನ ನೀಡಿದರು. ಸರಿ, ಅಭಿನಯ–ಸಂಗೀತ–ಹರಿಕಥೆಗಳನ್ನೇ ಮೈಗೂಡಿಸಿಕೊಂಡಿದ್ದ ಗುರುರಾಜುಲು ನಾಯ್ಡು ತಮ್ಮ ಕೆಲಸಕ್ಕೆ ವಿದಾಯ ಹೇಳಿ ನಾಯ್ಡುರವರ ಕಂಪೆನಿ ಸೇರಿದರು. ಗುರುರಾಜುಲು ನಾಯ್ಡು ಅವರು ಅಭಿನಯಿಸುತ್ತಿದ್ದ ಎಚ್ಚಮನಾಯಕ ನಾಟಕದ ಚಾಂದ್‌ಖಾನ್ ಪಾತ್ರ ಮತ್ತು ಭೂಕೈಲಾಸದ ರಾವಣನ ಪಾತ್ರ ಆ ಕಾಲಕ್ಕೆ ಮನೆಮಾತಾಗಿತ್ತು. ಇಷ್ಟಾದರೂ ಪಾರಂಪರ್ಯವಾಗಿ ಬಂದ ಹರಿಕಥಾಕಲೆಯನ್ನು ಉಪೇಕ್ಷೆ ಮಾಡದೆ, ಅವಕಾಶ ದೊರೆತಾಗಲೆಲ್ಲ ಅದನ್ನು ನಡೆಸುತ್ತಾ ಬಂದರು . ಮುಂದೆ ಸುಬ್ಬಯ್ಯ ನಾಯ್ಡು ಅವರ ನಿಧನಾನಂತರ ನಾಟಕ ಕಂಪೆನಿ ಮುಚ್ಚಿ ಇವರಿಗೆ ಹರಿಕಥಾ ಕಲೆಯೇ ಮುಖ್ಯ ಕಸುಬಾಯಿತು.

ಅಂದಿನ ದಿನಗಳಲ್ಲಿ ಸುಬ್ಬಯ್ಯ ನಾಯ್ಡು ಅವರೊಡನೆ ಪಾಲುದಾರರಾಗಿದ್ದ ಆರ್.ನಾಗೇಂದ್ರರಾಯರು ತಮ್ಮ 'ಆನಂದಬಾಷ್ಪ' ಚಲನಚಿತ್ರದ ಮೂವರ ನಾಯಕರುಗಳ ಪೈಕಿ ಒಬ್ಬ ನಾಯಕನ ಪಾತ್ರಕ್ಕೆ ಗುರುರಾಜುಲು ನಾಯ್ಡು ಅವರನ್ನು ಆಯ್ಕೆ ಮಾಡಿ, ಅವರಿಗೆ ತಾವೇ ಅರುಣ್‌ಕುಮಾರ್ ಎಂದು ನಾಮಕರಣ ಮಾಡಿದರು. ಮುಂದೆ ನಕ್ಕರೆ ಅದೇ ಸ್ವರ್ಗ, ಮಿಸ್ ಲೀಲಾವತಿ, ಹಣ್ಣೆಲೆ ಚಿಗುರಿದಾಗ, ಮುಂತಾದ ಚಿತ್ರಗಳಲ್ಲಿನ ಇವರ ಅಭಿನಯ ಪ್ರಸಿದ್ಧಿ ಪಡೆಯಿತು. ಹೀಗೆ 'ಅರುಣ್ ಕುಮಾರ್' ಎಂಬ ಹೆಸರು ಪ್ರಸಿದ್ಧಿಯಾಗಿ 'ಗುರುರಾಜುಲು ನಾಯ್ಡು' ಹೆಸರು ಮರೆಯಾಯ್ತು ಎಂದು ಜನ ಭಾವಿಸುತ್ತಿದ್ದ ಸಮಯದಲ್ಲಿ ನಾಯ್ಡುರವರು ಮತ್ತೆ ಗುರುರಾಜುಲು ನಾಯ್ಡು ಆಗಿ ಕೀರ್ತನ ರಂಗಕ್ಕೆ ಮರುಪ್ರವೇಶ ಮಾಡಿದರು.

ಗುರುರಾಜುಲು ನಾಯ್ಡು ಅವರು ನಾಟಕ –ಸಿನಿಮಾ ಎರಡೂ ವೈಶಿಷ್ಟ್ಯಗಳನ್ನೂ ಹರಿಕಥೆಯಲ್ಲಿ ಸೇರಿಸಿ ತಮ್ಮ ಉಚ್ಛ ಕಂಠಶ್ರೀ–ವಾಕ್ಚಾತುರ್ಯಗಳ ಮೂಲಕ ಮತ್ತು ವಿಡಂಬನಾತ್ಮಕ ಉಪಕಥೆಗಳ ಮೂಲಕ ಈ ಕಲೆಯನ್ನು ಜನರಂಜನೀಯವಾಗಿ ಮೂಡಿಸುವುದರಲ್ಲಿ ಯಶಸ್ವಿಯಾದರು. ಹಲವು ಸಂಪ್ರದಾಯವಾದಿ ಹರಿಕಥಾ ವಿದ್ವಾಂಸರು, ಗುರುರಾಜುಲು ನಾಯ್ದು ಅವರು ಹರಿಕಥೆಯನ್ನು ಅತಿ ರಂಜಿಸಿ ಜನಪ್ರಿಯಗೊಳಿಸುತ್ತಾರೆ ಎಂದು ಟೀಕಿಸಿದ್ದರು. ಆದರೆ ನಾಯ್ದು ಅವರ ಪ್ರತಿಭೆ ಹಾಗೂ ಅಧ್ಯಯನಶೀಲತೆ ಅಪರೂಪದಲ್ಲಿ ಅಪರೂಪವಾದುದು. ಸಮಯೋಚಿತವಾಗಿ ಮಧ್ಯೆಮಧ್ಯೆ ಅವರು ತಿಳಿಸುತ್ತಿದ್ದ ಉಪಕತೆಗಳಲ್ಲಿ ಒಂಬತ್ತರ ಮಗ್ಗಿ, ಅಧ್ಯಾತ್ಮ ರಾಮಾಯಣ, ಗಾಂಧೀಜಿ ಕುರಿತ ಹಾಡು ಮರೆಯಲಾರದವು.

ಗುರುರಾಜುಲು ನಾಯ್ಡು ಅವರ ಹರಿಕಥೆ ರಾಮೋತ್ಸವ, ಗಣೇಶೋತ್ಸವ, ಅಣ್ಣಮ್ಮದೇವೀ ಉತ್ಸವಗಳಲ್ಲಿ ಕಾರ್ಯಕ್ರಮ ಆಯೋಜಕರ ಮೊದಲ ಆಯ್ಕೆಯಾಗಿರುತ್ತಿತ್ತು. ಹಲವಾರು ರೇಡಿಯೋ ನಾಟಕಗಳಲ್ಲೂ ಪಾತ್ರವಹಿಸಿ ಅವಿಸ್ಮರಣೀಯ ಅಭಿನಯ ನೀಡಿದ್ದಾರೆ.


ವ್ಯಕ್ತಿಶಃ ಗುರುರಾಜುಲು ನಾಯ್ಡು ಅತ್ಯಂತ ಸ್ನೇಹಜೀವಿ, ಸದಾ ಹಸನ್ಮುಖಿ, ಅಜಾತಶತ್ರು ಎನಿಸಿದ್ದರು. ಇವರ ಶಿಷ್ಯಪರಂಪರೆಯೂ ಅತಿ ದೊಡ್ಡದು. ಬಿ.ಪಿ.ರಾಜಮ್ಮ, ಕನಕದಾಸರು, ಮೈಸೂರು ಸೂರ್ಯನಾರಾಯಣದಾಸರು, ಹಿನ್ನೆಲೆಗಾಯಕಿ ಸಿ.ಕೆ.ರಮಾ, ಅಶ್ವತ್ಥನಾರಾಯಣದಾಸ್, ಡಾ. ಕಿರಣ್‌ಕುಮಾರ್, ನಂಜುಂಡಸ್ವಾಮಿ, ವಿಮಲಾನಂದ ದಾಸ್, ತುಮಕೂರು ಲಕ್ಷ್ಮಣದಾಸ್ ಅಲ್ಲದೆ ನಾಯ್ಡು ಅವರ ಹೆಣ್ಣುಮಕ್ಕಳಾದ ಶೋಭಾನಾಯ್ಡು, ಶೀಲಾನಾಯ್ಡು ಎಲ್ಲರೂ ಹೆಸರುವಾಸಿಯಾದವರು.

ಗುರುರಾಜುಲು ನಾಯ್ಡು ಅವರಿಗೆ ಕೀರ್ತನ ಕೇಸರಿ, ಕೀರ್ತನ ಸಾಮ್ರಾಟ್, ಕೀರ್ತನ ಕಲಾವಿಚಕ್ಷಣ, ಕೀರ್ತನ ಕಲಾವಸಂತ, ಹರಿಕಥಾಕಲಾಭೂಷಣ ಮುಂತಾದ ಅನೇಕ ಗೌರವಗಳು ಸಂದಿದ್ದವು.

ಗುರುರಾಜುಲು ನಾಯ್ಡು ಅವರು ಅಖಿಲ ಕರ್ನಾಟಕ ಕೀರ್ತನ ಕಲಾಪರಿಷತ್ತಿನ ಕಾರ್ಯದರ್ಶಿಯಾಗಿದ್ದರು. ದಾಸವರೇಣ್ಯ ಪುರಂದರದಾಸರ ಆರಾಧನಾ ಸಮಿತಿಯ ಸಕ್ರಿಯ ಸದಸ್ಯರಾಗಿದ್ದ ಅವರು ಬದುಕಿರುವತನಕ ಹಂಪಿಯ ಪುರಂದರೋತ್ಸವದಲ್ಲಿ ತಮ್ಮ ಸೇವೆಯನ್ನು ಒಮ್ಮೆಯೂ ತಪ್ಪಿಸಿದವರಲ್ಲ.

ಗುರುರಾಜುಲು ನಾಯ್ಡು ಅವರು ತಮ್ಮ ಅತೀವ ಕಾರ್ಯಕ್ರಮಗಳಿಂದ ಬಳಲಿದರು. ಪ್ರತಿ ವರ್ಷ ಜಯನಗರದ ರಾಗಿಗುಡ್ಡದ ಹನುಮಜ್ಜಯಂತಿಯ ಕೊನೆಯ ದಿನ ಒಂದೇ ದಿನ ಎರಡು ಹರಿಕಥೆ ನಡೆಸುತ್ತಿದ್ದರು. 1985ರಲ್ಲಿ ಮಂಡ್ಯದ ಉತ್ಸವವೊಂದರಲ್ಲಿ ಕಥೆ ಮಾಡುತ್ತಿದ್ದಂತೆಯೇ ತೀವ್ರ ಮಿದುಳು ರಕ್ತಸ್ರಾವದಿಂದ ಕುಸಿದು ಬಿದ್ದರು. ಮತ್ತೆ ಚೇತರಿಸಿಕೊಳ್ಳಲಿಲ್ಲ. ಕೇವಲ 51ನೇ ವಯಸ್ಸಿನಲ್ಲಿ ತಮ್ಮ ಇಹಲೋಕದ ಪಯಣವನ್ನು ಮುಗಿಸಿದರು. ನಿಜಕ್ಕೂ ಇನ್ನೂ ಹಲವಾರು ವರ್ಷ ಬಾಳಿ ಬೆಳಗಬೇಕಾಗಿದ್ದ ಕಲಾ ತಪಸ್ಸಿ ಅವರು.

***



ಮಂಡಲಕಲೆ – ರಚನೆ: ಶ್ರೀಮತಿ ರತ್ನಾ ಮೂರ್ತಿ

ಹರಟೆ ಚೂರು...

– ವೆಂಕಟೇಶ್ ಕಾಮತ, ಉಡುಪಿ

ಚೂರು 1

ಅಮ್ಮನ ಸೇಫ್ಟಿ ಪಿನ್ ಮತ್ತು ಚಿಕ್ಕಮ್ಮನ ಚಪ್ಪಲಿ

ಅರವತ್ತರ ದಶಕದಲ್ಲಿ ಬೆಂಗಳೂರು ರಾಜದಾನಿಯೇ ಆಗಿದ್ದರೂ ಅದೊಂದು ಪುಟ್ಟ ನಗರ. ಆಟೋ ಸಾಮ್ರಾಜ್ಯ ಶುರು ಆಗಿತ್ತು ಅಷ್ಟೇ. ಎಲ್ಲರೂ ಓಡಾಡುತ್ತಿದ್ದದ್ದು ಬಸ್ಸುಗಳಲ್ಲೇ, ಕೆಂಪು ಬಸ್ಸುಗಳಲ್ಲಿ ದರ ಕೇವಲ 5 ಪೈಸೆಯಿಂದ ಶುರು. ಆಗ ಈ ಐದು ಪೈಸೆಗೂ ಒಂದು ಬೆಲೆ ಇತ್ತು.

ಇಂದಿನ ಬೆಂಗಳೂರು ಹೇಗೋ ನನಗೆ ಸರಿಯಾದ ಪರಿವೆ ಇಲ್ಲಾ. ಐವತ್ತು ವರುಷಗಳ ಹಿಂದೆ ಪೋಲಿ ಜನರ ಕಾಟ ಬಹಳವೇ ಇತ್ತು. ಇವರಲ್ಲಿ ಸೈಕಲ್‌ನಲ್ಲಿ ಹಿಂಬಾಲಿಸಿ ಖುಷಿಪಡುವ ಹೈಸ್ಕೂಲ್, ಕಾಲೇಜು ಎಳೆಯರಿಂದ ಹಿಡಿದು ಧೋತಿ ಟೋಪಿ ಕೋಲು ಹಿಡಿದ ಮುದುಕರೂ ಇದ್ದದ್ದು ಸತ್ಯ. ಜನ ಆಡಿಕೊಳ್ಳುತ್ತಿದ್ದರು– ಮುಂಬೈ ಜನ ಹೀಗೆ ಮೈ ತಾಗಿಸಿ ಅಲ್ಲಿ ಇಲ್ಲಿ ಮುಟ್ಟುವವರನ್ನು ಗುಂಪು ಗುಂಪೇ ಹಿಡಿದು ಹೊಡೆದು ಪೂಜೆ ಮಾಡಿ ಬುದ್ಧಿಕಲಿಸುತ್ತಾರೆ, ಹಾಗೆ ಹೀಗೆ ಎನ್ನುತ್ತಿದ್ದರು. ಬಸ್ಸನಲ್ಲಿ ಬಸ್ ಕಂಡಕ್ಟರ್ ಸ್ವತಃ ಈ ಬುದ್ಧಿಯವನಾದರೆ ದೂರು ಯಾರಲ್ಲಿ.

ಅಮ್ಮ ಮೂರು ಮಕ್ಕಳ ತಾಯಿಯಾದರೂ ಸುಂದರಿ ಮತ್ತು ಧೈರ್ಯವಂತೆ. ಇವರಿಗೆ ಕುಸ್ತಿ–ಕರಾಟೆ ಕಲಿಸಿದ್ದಿದ್ದರೇ ಚೆನ್ನಾಗಿತ್ತು. ವಯಸ್ಸಾದಮೇಲೆ ಒಬ್ಬರೇ ರೈಲು ಪ್ರವಾಸ ಮಾಡುವಾಗ ನಾನು ಹೇಳಿದ್ದೆ. 'ಅಮ್ಮ, ಮನುಷ್ಯನಲ್ಲಿ ತಾನು ಸಾಯಬಹುದು, ಇವರು ನನ್ನನ್ನು ಸಾಯಿಸುತ್ತಾರೆ ಎಂದು ಮನವರಿಕೆಯಾದಾಗಲೂ ಎದುರಾಳಿಯನ್ನು ತೀವ್ರವಾಗಿ ತಿವಿಯಲು, ಒಮ್ಮೊಮ್ಮೆ ಒಂದಿಬ್ಬರನ್ನು ಸಾಯಿಸಲು ಸಾಧ್ಯವಿದೆ. ನೀ ಪಕ್ಕನೆ ಸತ್ತರೂ ಹೋರಾಡಿ ಸಾಯಬೇಕು' ಎಂದು ನಾ ಹೇಳಿದ್ದಕ್ಕೆ ಅಮ್ಮ ಒಂದು ದೊಡ್ಡ ಚಾಕುವನ್ನು ತಲೆದಿಂಬಿನ ಕೆಳಗಿಟ್ಟೇ ಪ್ರಯಾಣ ಮಾಡುತ್ತಿದ್ದರು. ಅವರಿಗೆ ನನ್ನ ಮಾತಿನ ನೆನಪು ಕೂಡ ಇಷ್ಟದ ವಿಷಯ,

ಮತ್ತೆ ಹಿಂದಿನ ಪೋಲಿಜನರ ಕಾಟಕ್ಕೆ ಅಮ್ಮ ಒಂದು ಉಪಾಯ ಕಂಡುಹಿಡಿದಿದ್ದರು. ಅವರು ಎಲ್ಲ ಇತರ ಹೆಂಗಸರಂತೆ ರವಿಕೆಗೆ, ಕುತ್ತಿಗೆಯ ಸರಕ್ಕೆ 5–6 ಸೇಫ್ಟಿ ಪಿನ್ನುಗಳನ್ನು ಇಟ್ಟುಕೊಂಡು, ಮಕ್ಕಳ ಕೈಕಾಲುಗಳಿಗೆ ಹೊಕ್ಕ ಮುಳ್ಳುಗಳನ್ನು ತೆಗೆಯುವುದು, ಸಣ್ಣಪುಟ್ಟ ಆಪರೇಷನ್ ಮಾಡುವುದು, ಬಟನ್ ಇಲ್ಲದ ಅಂಗಿ ಪ್ಯಾಂಟ್‌ಗೆ ಗುಂಡಿ ಹಾಕುವುದು, ಕಿತ್ತ ಹವಾಯಿ ರಬ್ಬರ ಚಪ್ಪಲಿಯ ಬಾರನ್ನು ತಾತ್ಕಾಲಿಕ ಜೋಡಿಸುವುದು ಒಂದೇ ಎರಡೇ...

ಅಮ್ಮನ ಸೇಫ್ಟಿ ಪಿನ್ ಇವೆಲ್ಲದರ ಜೊತೆ, ಬಸ್ ಪೋಲಿ ಸೈನ್ಯದ ಎದುರು ಒಂದು ಆಯುಧವಾಯಿತು. ಒಂದೆರಡು ಸಲ ಏನೋ ಅಕಸ್ಮಾತ್ ತಗುಲಿಸಿರಬಹುದು ಎಂದು ಸರಿದು ತಪ್ಪಿಸಿಕೊಂಡರೂ, ಮತ್ತೆ ಯಾರಿಗೂ ಗೊತ್ತಾಗದು ಅಥವಾ ಗೊತ್ತಾದರೂ ಪರವಾಗಿಲ್ಲಾ ಎಂದು ಮರ್ಯಾದೆ ಬಿಟ್ಟವರು ಇನ್ನೊಮ್ಮೆ ಕೈ ತಗಲಿಸಿದೊಡನೆ ಅಮ್ಮ ಒಬ್ಬ ನಿಪುಣೆ ಕರಾಟೆ ಪಟುವಿನಂತೆ ಒಂದೇ ಸಲಕ್ಕೆ ಸೇಫ್ಟಿ ಪಿನ್ನಿನ ಒಂದು ಇಂಜೆಕ್ಷನ್ ಆತನ ಕೈಗೊ ಭುಜಕ್ಕೊ ಚುಚ್ಚಿದೊಡನೆ ಆತ ಕೂಗಲೂ ಕೂಡಾ ಆಗದೆ ತನ್ನ ಸ್ಟಾಪ್ ದೂರ ಇದ್ದರೂ ಕೂಡಲೇ ಇಳಿದೂ ಓಡಿಹೋದ ಘಟನೆಗಳು ಇವೆ. ಅಮ್ಮನ ಸೇಫ್ಟಿ ಪಿನ್ ನೆನಪು ಆಗಾಗ ಬರುತ್ತದೆ.

ಅಮ್ಮ ಮತ್ತು ಚಿಕ್ಕಮ್ಮ ಒಟ್ಟಿಗೆ ಸಿನಿಮಾಗೆ ಹೋಗುತ್ತಿದ್ದರು ಆಗ ಈಗಿನಂತೆ ಟಿವಿ ಮೊಬೈಲ್ ಏನೂ ಇಲ್ಲದ ಕಾಲ. ಸಿನಿಮಾ ಒಂದೇ ಮನರಂಜನೆ. ಅವು ಕೂಡ ಬಹಳ ಕಡಿಮೆ ಜನರು. ಕನ್ನಡಕ್ಕಿಂತ ತಮಿಳು ಹಿಂದಿ ಹೆಚ್ಚಿಗೆ ನೋಡುತ್ತಿದ್ದರು. ಅಮ್ಮ ಚಿಕ್ಕಮ್ಮನೊಂದಿಗೆ ಒಂದು ಸಿನಿಮಾಗೆ ಹೋದಾಗ ತುಂಬಿದ ಚಿತ್ರಮಂದಿರದಲ್ಲಿ ಚಿಕ್ಕಮ್ಮನ ಪಕ್ಕದ ಸೀಟಲ್ಲಿ ಒಬ್ಬ ಮೈತಾಪೋ (ಮೈ ತಾಗಿಸುವ ಪೋಲಿ), ಕತ್ತಲಲ್ಲಿ ಚಿಕ್ಕಮ್ಮ ಒಂದೆರಡು ಸಲ ಮೊಣಕೈಯಿಂದ ದೂಡಿ ನೋಡಿದರು. ಪ್ರಯೋಜನವಿಲ್ಲಾ ಮತ್ತೆ ಶುರು ವಾಲುವಿಕೆ.

ಚಿಕ್ಕಮ್ಮ ಕತ್ತಲಲ್ಲಿ ಬಗ್ಗಿ ಮೆತ್ತನೆ ತನ್ನ ಕಾಲಿನ ಚಪ್ಪಲಿಯನ್ನು ತೆಗೆದು ಚಪ್ಪಲ್ಲಿಯಿಂದಲೇ ಆತನ ವಾಲಿದ ಭುಜವನ್ನು ತಳ್ಳಿದರು. ಕತ್ತಲಲ್ಲಿ ಸಿನಿಮಾ ನೋಡುತ್ತಿದ್ದ ಪ್ರೇಕ್ಷಕರಾರಿಗೂ ತಿಳಿಯಲಿಲ್ಲ ಆದರೆ ಮೈತಾಮೋ ಕತ್ತಲಲ್ಲೇ ಇಂಟರ್ವಲ್ ಬೆಳಕಲ್ಲಿ ಜನರು ಗುರುತಿಸಿದರೆ ಕಷ್ಟವೆಂದು ಓಡಿಹೋದ.

ಚೂರು 2

ನನ್ನತ್ತೆ ಸಾವಿತ್ರಿ

ಇಂದಿನ ಸ್ಟಾಂಡ್ ಅಪ ಕಮೇಡಿಯನ್, ನಿಂತೆಡೆ ನಗಿಸುವವರು. ನಿಂತಲ್ಲೇ ಹಂಗ ಹಿಂಗ್ ಓಡಾಡಿ ಮಾತಾಡ್ತಾ ಕುಂತವರನ್ನ ಹೊಟ್ಟೆ ಬಿರಿಯುವಂತೆ ಬಿದ್ದು ಬಿದ್ದು ನಗಿಸುವವರನ್ನು ನೋಡಿದಾಗ ನೆನಪಿಗೆ ಬರ್ತಾಳೆ ನಮ್ಮತ್ತೆ ಸಾವಿತ್ರಿ, ನನ್ನ ಸೋದರಮಾವ ವಾಮನರ ಮಡದಿ ಈಗ ಇಬ್ಬರೂ ಆ ಸ್ವರ್ಗದಲ್ಲಿ ಇದ್ದಾರೆ.

ಸಾವಿತ್ರಿ ಅತ್ತೆ ನಮಗೆಲ್ಲಾ ದೊಡ್ಡತ್ತೆ. ಮದುವೆ ಆಗಿ ಗಂಡನ ಮನೆ ಸೇರಿದಾಗ ಗಂಡನ ಮದುವೆಯಾದ ಇಬ್ಬರು ಅಕ್ಕಂದಿರು, ಒಬ್ಬ ತಂಗಿ, ಮದುವೆಗೆ ಬೆಳೆದ ಒಬ್ಬಳು ತಂಗಿ ಹಾಗೂ ಶಾಲೆಯಲ್ಲಿ ಓದುತ್ತಿರುವ ಮೂವರು ಮೈದುನರು ಮತ್ತು ವಿಧವೆ ಅತ್ತೆ ತುಂಬಿದ ಸಂಸಾರ. ಊರ ಹತ್ತು ಸಮಸ್ತರಲ್ಲಿ ಒಬ್ಬರಿದ್ದ ಮಾವ ತೀರಿಹೋಗಿ ಸಂಪೂರ್ಣ ಜವಾಬ್ದಾರಿ ಹೆಗಲಮೇಲೆ ಹೇರಿಕೊಂಡಿರುವ ದೊಡ್ಡಣ್ಣನ ಹೆಂಡತಿ ಆಗಿ ಇವರು ಚಿಕ್ಕ ವಯಸ್ಸಿನಲ್ಲೇ ಒಮ್ಮೆಗೆ ಬಹಳಷ್ಟು ಅತ್ತೆ ನಾದಿನಿಯರಿಂದ ಕಲಿತು, ಬೇಗನೆ ಮೈದುನರ ತಾಯಿಯಂತೆ ಹಿರಿಯ ಸ್ಥಾನವಹಿಸಿ ಎತ್ತರ ಬೆಳೆದರು.

ಇವರು ಮಾತಿನ ಚಕಮುಕಿಯಲ್ಲಿ ಯಾವುದೇ ಓದಿನ ಹವ್ಯಾಸ, ಆಸಕ್ತಿ ಹೊಂದಿದ್ದ ಅರಿವು ನನಗಿಲ್ಲ. ಆದರೆ ಇವರು ಕ್ವಿಕ್ ವಿಟ್ ಅನ್ನುವ ಜನರಂತೆ ತಟ್ಟನೆ ಬಿಟ್ಟ ಕೆಲವು ಮಾತಿನ ಬಾಣಗಳು ಇಂದಿಗೂ ನಾವೆಲ್ಲಾ ಮರೆತಿಲ್ಲಾ...

ಆ 5-6-7-8 ಮಕ್ಕಳನ್ನು ಹೆಡೆಯುತ್ತಿದ್ದ ಕಾಲದಲ್ಲಿ ಯಾರದೋ ಮನೆಯಲ್ಲಿ ಹಿಂದ್ದಿಂದೆ ಹುಟ್ಟಿದ ಹೆಣ್ಣುಮಕ್ಕಳನ್ನು ಜಯಂತಿ, ಆರತಿ, ಭಾರತಿ ಎಂದು ಹೆಸರು ಎಂದಾಗ ಇನ್ನು ಒಂದೆರಡು ಹುಟ್ಟಿದ್ದರೆ ಕೊಯಿತಿ, ಪೆಸ್ಕಾತಿ (ಕೊಂಕಣಿಯಲ್ಲಿ ಮಚ್ಚುಗತ್ತಿ ಚಾಕು) ಇಡುತ್ತಿದ್ದರೋ ಏನೋ ಎಂದು ಜೋರಾಗಿ ನಗಬೇಕೇ.

ಸೋದರಮಾವ ತುಂಬೆಯ 4-5 ಎಕರೆ ತೋಟದಲ್ಲಿ ಒಂದು ಮನೆ ಕಟ್ಟಿ ಬ್ಯಾಂಕು, ರೋಟರಿ, ಸಮಾಜಸೇವೆ ಎಂದು ದಿನವಿಡೀ ತಿರುಗಾಡುತ್ತಿದ್ದರೆ, ಅತ್ತೆ ಮೊದಮೊದಲು ಬೆಕ್ಕೆಂದರೆ ದೂರ ಓಡಿಸುವವರು, ಕ್ರಮೇಣ ಬೆಕ್ಕಿನ ಸಂಸಾರವನ್ನು ಮನೆಯ ಜನರಂತೆ ನೋಡಿಕೊಳ್ಳುತ್ತಾ ಬೆಕ್ಕಿನದೊಡನೆ ಮಾತನಾಡುತ್ತ ದಿನ ಕಳೆಯುತ್ತಿದ್ದರು. ತೋಟಕ್ಕೆ 'ತುಂಬೆ ಗಾರ್ಡನ್' ಎಂದು ಹೆಸರಿಟ್ಟು ಯಾರೋ ಮನೆಗೆ ಏನೂ ಹೆಸರಿಲ್ಲವೇ ಎಂದಾಗ ಸೋದರಮಾವ, 'ಅದಕ್ಕೇನಂತೆ, ಅತ್ತೆಯ ಹೆಸರು ಸಾವಿತ್ರಿ. ಅದನ್ನೇ ಮನೆಯನ್ನು "ಸಾವಿತ್ರಿ ಸದನ" ಎಂದು ಕರೆಯಬಹುದು' ಎಂದು ತಮ್ಮದೇ ಜೋಕ್ ಎಂದು ನಗುವುದರೊಳಗೆ... ಅತ್ತೆ "ಸಾವಿತ್ರಿ ಸದನ" ಏಕೆ, ಸಾವಿತ್ರಿ ಸದ, ಆಸ್ಸ್ ವಾಮನ ಜಾಲ್ಲೇರಿ ಸದನ.. ನ್ಹವೇ" ಅಂದಾಗ ಆರ್ಥಾತ್ ಕೊಂಕಣಿಯಲ್ಲಿ ಸಾವಿತ್ರಿ ಸದ ನಾ ದಿನ ಇಲ್ಲದಿರುವುದು ಏಕೆ ಸಾವಿತ್ರಿ ಇಲ್ಲಿ ಯಾವಾಗಲೂ ಮನೆಯಲ್ಲೇ ಇರ್ತಾರೆ ಸದ ಆಸ್ಸ ವಾಮನ ಆದ್ರೆ ಸದ ನಾ ನಿತ್ಯ ಮನೆಯಲ್ಲಿ ಇಲ್ಲಾ ಎಂದು ತಿರುಗುಬಾಣ ಬಿಡಬೇಕೆ.

ಅತ್ತೆಯ ದೊಡ್ಡ ನಾದಿನಿಯ ಮಗಳನ್ನು ಮುಂಬಾಯಿಯ ಐಶ್ವರ್ಯವಂತ ಕುಟುಂಬದ ಹುಡುಗನಿಗೆ ಕೊಟ್ಟು ಮದುವೆ ಮಾಡಿ ಒಂದಾದ ಮೇಲೆ ಒಂದು ಮುದ್ದಾದ ಮೂರು ಹೆಣ್ಣು ಮಕ್ಕಳನ್ನು ಹೆತ್ತಾಗ ಮೊದಲ ಚೆಂದದ ಮಗುವಿಗೆ ಪೂನಂ ಎಂದು ಇಟ್ಟಾಗ, ಇದೇನು ಹೆಸರೋ ಸೊನ್ನೆಯ ಹಾಗೆ ಅರ್ಥವಿಲ್ಲಾ ಅನ್ನುತ್ತಾ, ಮುಂದೆ ಎರಡನೇ ಹೆಣ್ಣುಮಗುವಿಗೆ "ಭಾವನಾ" ಎಂದು ಹೆಸರಿಡಲು. ಛೆ ಇದೇನು ಹೆಸರು ಮೊದಲೇ ಗಂಡು ಮಗು ಬೇಕುಬೇಕು ಅನ್ನುತ್ತಾರೆ. ಮಗುವಿಗೆ. "ಬಾವನಾ" ಭಾವು ನಾ, ಭಾವು ತಮ್ಮ ಇಲ್ಲಾ ಇದು ಒಳ್ಳೆ ಚೆನ್ನಾಗಿದೆ ಅನ್ನಬೇಕೆ... ಇನ್ನೆರಡು ವರುಷದಲ್ಲಿ ಮೂರನೆಯ ಹೆಣ್ಣು ಮಗು ಹುಟ್ಟಿದಾಗ ಅದನ್ನು

ಚೆಂದದ ಹೆಸರೆಂದು "ಸುನಯನಾ" ಎಂದು ಹೆಸರಿಟ್ಟರು. ನಮಗೆಲ್ಲರಿಗೂ ಹೆಸರು ಚೆಂದ ಕಂಡಿತು. ಸಾವಿತ್ರಿ ಅತ್ತೆ ಮಾತ್ರ. "ಸುನಯನಾ" ಹೆಸರು ಕೇಳಿದೊಡನೆ ತಮ್ಮದೇ ಮಾತಿನ ಶೈಲಿಯಲ್ಲಿ "ಶೇ... ಇಸ್ಸಪ್ಪಾ ಮೊದಲು ಭಾವನಾ ತಮ್ಮ ಇಲ್ಲಾ ಆಯಿತು ಈಗ ಸುನಯನಾ... ಸುನ ಯೆನಾ ಸುನ ಕೊಂಕಣಿಯಲ್ಲಿ ಸೊಸೆ.. ಯೆನಾ ಕೊಂಕಣಿಯಲ್ಲಿ ಬರುವುದಿಲ್ಲಾ... ಸೊಸೆ ಬರುವುದಿಲ್ಲಾ.. ಇದು ಒಳ್ಳೆ ಹೆಸರಿಟ್ಟಿದ್ದಾರೆ, ಬೇರೆ ಹೆಸರೇ ಇರಲಿಲ್ಲವೇ ಇವರಿಗೆ ಅನ್ನಬೇಕೆ. ಯಾರೂ ಮಗುವನ್ನು ಸುನಯನ ಎಂದು ಕರೆಯಲಿಲ್ಲಾ... ಇನ್ನೊಂದು ಹೆಸರು ಅರ್ಚನಾ ಎಂದು ಇಟ್ಟಿದ್ದನ್ನೇ ಕರೆದರು. .

***

ಹನುಮಂತ ಭಾಗ್ಯವಂತ

– ಎಂ.ಆರ್. ರಘುನಾಥ್

ಹನುಮಂತಾ ನೀ
ಬಲು ಭಾಗ್ಯವಂತ
ಹೃದಯಾಂತರಾಳದಲ್ಲಿ
ರಾಮನ ಹೊಂದಿದ ಸಂತ
ಹನುಮಂತ ನೀ.

ಅಂಜನಿಸುತನಾಗಿ
ಆಂಜನೇಯನೆನಿಸಿದೆ
ಸಂಜೀವಿನಿ ಗಿರಿ
ನೀ ಹೊತ್ತು ತಂದೆ
ಮಂಜಿನಂತೆ ದುರಿತಗಳ
ಕರಗಿಸೆ ಬಂದೇ
ಭಜಿಸುವ ಮನಕೆಲ್ಲ
ಕರುಣೆಯ ತೋರಿದೆ
ಹನುಮಂತ ನೀ..

ಮಾತು ಧಾತುಗಳಿಂದ
ಮನಗಳ ಗೆಲಿದೆ
ಭೀತಿಯ ಹರಿಸಿ
ಸೇವೆಯ ಸಲಿಸಿದೆ
ಸೀತಾಮಾತೆಗೆ
ಮುದ್ರೆಯುಂಗುರವಿತ್ತೆ
ಸೇತುವೆ ನಿರ್ಮಿಸಿ
ರಾಮರಿಗನುವಾದೆ
ಹನುಮಂತ ನೀ....

ಗುಂಡಕ್ರಿಯ ರಾಗವ
ನೀ ಹಾಡಿ ನಲಿದೆ
ಕಡು ಬಂಡೆಯನೇ
ಕರಗಿಸಿದೇ
ದಂಡು ದಂಡುಗಳಾ
ಬಡಿದು ಹಾಕಿದೆ
ಕೊಂಡಾಡುವಂತೇ
ರಘುರಾಮ ಸೇವೆಗೈದೆ
ಹನುಮಂತ ನೀ....

ಕದಳೀ ವನದೊಳು
ಭೀಮಗೆ ಕಂಡೆ
ಮೋದದಿ ಅವನ
ಬರಮಾಡಿಕೊಂಡೆ
ಮದ ತುಂಬಿದವಗೆ
ನಿಜ ರೂಪ ತೋರಿದೆ
ಹಾದಿಯ ತೋರೀ
ಕಾರ್ಯದಿ ನೆರವಾದೆ
ಹನುಮಂತ ನೀ ....

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ - 248

ಅಧ್ಯಕ್ಷರ ಅನಿಸಿಕೆಗಳು



– ಟಿ.ಎಸ್. ಶ್ರವಣ ಕುಮಾರಿ

ಶನಿವಾರ 11.04.2026ರ ಮಧ್ಯಾಹ್ನ 3.30ಕ್ಕೆ ನಡೆದ 248ನೆಯ ಸಾಹಿತ್ಯ ದಾಸೋಹದಲ್ಲಿ 21 ಲೇಖಕರು ಭಾಗವಹಿಸಿ ತಮ್ಮ ವಿವಿಧ ಪ್ರಸ್ತುತಿಗಳನ್ನು ನಮ್ಮ ಮುಂದಿಟ್ಟು ಎರಡು ಗಂಟೆಗಳಿಗೂ ಮಿಕ್ಕು ನಮ್ಮೆಲ್ಲರನ್ನೂ ಒಂದು ಸಾಹಿತ್ಯಕ ವಾತಾವರಣದಲ್ಲಿ ಇರಿಸಿದರು. ಈ ದಾಸೋಹಕ್ಕೆ ನನ್ನನ್ನು ಅಧ್ಯಕ್ಷಳನ್ನಾಗಿ ಮಾಡಿ, ಎಲ್ಲರ ಪ್ರಸ್ತುತಿಗಳನ್ನೂ ಎರೆಡೆರೆಡು ಬಾರಿ– ಒಂದು ಬಾರಿ ಪಠಣ, ಮತ್ತೊಂದು ಬಾರಿ ಶ್ರವಣದಿಂದ– ಮನನ ಮಾಡಿಕೊಳ್ಳುವುದಕ್ಕೆ ಅವಕಾಶ ನೀಡಿದ ಸಮನ್ವಯ ಸಮಿತಿ ಕನ್ನಡವೇ ಸತ್ಯ ವಾಟ್ಸಾಪ್ ವೇದಿಕೆಯ ಸಂಚಾಲಕರೆಲ್ಲರಿಗೂ ಹೃತ್ಪೂರ್ವಕ ವಂದನೆಗಳು.

ಈ ದಾಸೋಹದಲ್ಲಿ ವ್ಯಾಕರಣ ಪಾಠವೂ ಸೇರಿದಂತೆ 8 ವಿವಿಧ ಬಗೆಯ ಲೇಖನಗಳು, 4 ಕತೆಗಳು, ಒಬ್ಬರು ಮೂರು, ಒಬ್ಬರು ಎರಡು ಸೇರಿದಂತೆ ಒಟ್ಟು 7 ಲಘುಹರಟೆಗೆ ಸೇರಬಹುದಾದ ಪ್ರಸ್ತುತಿಗಳು ಮತ್ತು ಕವಿತೆಗಳನ್ನು ಪ್ರಸ್ತುತಿಪಡಿಸಿದ ಆರು ಜನರಲ್ಲಿ ಇಬ್ಬರು ಎರಡೆರೆಡು ಕವಿತೆಗಳನ್ನು ವಾಚಿಸಿದ್ದನ್ನು ಸೇರಿಸಿ ಒಟ್ಟು 8 ಕವಿತೆಗಳಿದ್ದವು. ಒಟ್ಟಾರೆಯಾಗಿ ಎಲ್ಲವೂ ಉತ್ತಮ ಪ್ರಸ್ತುತಿಗಳಾಗಿದ್ದವೆನ್ನುವುದನ್ನು ನೀವೆಲ್ಲರೂ ಕೇಳಿದ್ದೀರಿ. ನಾನಂತೂ ಎಲ್ಲವನ್ನೂ ವಿರಾಮವಾಗಿ ಓದಿ ಆಸ್ವಾದಿಸಿದೆ. ನನಗನ್ನಿಸಿದ್ದನ್ನು ನಾವು ಕೇಳಿದ ಕ್ರಮದಲ್ಲಿಯೇ ಕಾಲಮಿತಿಯಿಂದಾಗಿ ಕೆಲವೇ ಕೆಲವು ವಾಕ್ಯಗಳಲ್ಲಿ ಇಲ್ಲಿ ನಿಮ್ಮ ಮುಂದಿಡುತ್ತಿದ್ದೇನೆ.

1	ಗಣಪತಿ ಹೆಗಡೆ	ಸಕರ್ಮಕ ಅಕರ್ಮಕ ಧಾತುಗಳು
ಶ್ರೀಯುತ ಗಣಪತಿ ಹೆಗಡೆಯವರು ಎಂದಿನಂತೆ ವ್ಯಾಕರಣದ ಬಗೆಗಿನ ತಮ್ಮ ಪ್ರಸ್ತುತಿಯನ್ನು ಮಂಡಿಸಿ ಈ ದಾಸೋಹಕ್ಕೆ ಶುಭಾರಂಭವನ್ನು ಮಾಡಿದರು. ಈ ಗುಂಪಿನಲ್ಲಿರುವ ನಾವೆಲ್ಲರೂ ಒಂದಲ್ಲಾ ಒಂದು ರೀತಿಯ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವವರೇ. ಎಲ್ಲರೂ ನಮ್ಮ ಶಾಲೆಯ ದಿನಗಳಲ್ಲಿ ವ್ಯಾಕರಣವನ್ನು ಕಲಿತಿದ್ದರೂ ಅದನ್ನು ನೆನಪಿಟ್ಟುಕೊಂಡು ನಮ್ಮ ಬರವಣಿಗೆಯಲ್ಲಿ ಶಿಸ್ತಾಗಿ ಬಳಸುತ್ತಿದ್ದೇವೆಯೇ ಎನ್ನುವ ಪ್ರಶ್ನೆಯನ್ನು ಹಾಕಿಕೊಂಡರೆ ನನ್ನನ್ನೂ ಸೇರಿ ಹಲವರು "ಇಲ್ಲ" ಎನ್ನುವ ಉತ್ತರವನ್ನೇ ನೀಡಬೇಕಾಗುತ್ತದೆ. ಗಣಪತಿ ಹೆಗಡೆಯವರು ಕೇವಲ ಬರಹಗಾರರಷ್ಟೇ ಅಲ್ಲ; ಭಾಷಾ ಕೋವಿದರೂ ಸಹಾ. ವ್ಯಾಕರಣವನ್ನು ತಮ್ಮ ಬರವಣಿಗೆಯಲ್ಲಿ ರೂಢಿಸಿಕೊಂಡು ಬಂದವರು. ಇಂದಿನ ತಮ್ಮ ಪ್ರಸ್ತುತಿಯಲ್ಲಿ ಕ್ರಿಯಾಧಾತುಗಳ ಬಗ್ಗೆ, ಹಾಗೆಯೇ ಮುಂದುವರೆಯುತ್ತಾ ಸಕರ್ಮಕ ಮತ್ತು ಅಕರ್ಮಕ ಧಾತುಗಳ ಬಗ್ಗೆಯೂ ಸೋದಾಹರಣವಾಗಿ ವಿವರಣೆ ನೀಡಿದ್ದಾರೆ. ಪ್ರತಿಬಾರಿಯೂ ಇವರು ಪ್ರಸ್ತುತಪಡಿಸುವ ಲೇಖನಗಳನ್ನು ಸಂಗ್ರಹಿಸಿ ಇಟ್ಟುಕೊಂಡರೆ ಅದೊಂದು ಉತ್ತಮ ವ್ಯಾಕರಣ ಶಿಕ್ಷಣ ನೀಡುವ ಹೊತ್ತಿಗೆಯಾಗುವುದರಲ್ಲಿ ಸಂಶಯವಿಲ್ಲ. ನಾನು ಇವರ ಹಲವು ಲೇಖನಗಳನ್ನು ನನ್ನ ಗಣಕ ಯಂತ್ರದಲ್ಲಿ ರಕ್ಷಿಸಿ ಇಟ್ಟುಕೊಂಡಿದ್ದೇನೆ.		
2	ವಿಠಲ ಇಜೇರಿ	ಮಾರ್ತಾ ಬ್ರೌನ್ ಪಿಂಕೇ
ಸಸಕಸ ಗುಂಪಿನ ಪ್ರತಿಯೊಬ್ಬರ ಲೇಖನಕ್ಕೂ ಪ್ರತಿಕ್ರಿಯೆ ನೀಡುವ ಶ್ರೀಯುತ ಇಜೇರಿಯವರು ಈ ಗುಂಪಿನ ಎಲ್ಲರಿಗೂ ಚಿರಪರಿಚಿತರು. ಹಲವು ಹತ್ತು ರೀತಿಯಲ್ಲಿ ಕ್ರಿಯಾತ್ಮಕವಾಗಿ ತಮ್ಮನ್ನು ತೊಡಗಿಸಿಕೊಳ್ಳುವ ಇಜೇರಿಯವರ ಆಸಕ್ತಿಯ		

ಟಿ.ಎಸ್. ಶ್ರವಣಕುಮಾರಿ

ಹುಟ್ಟೂರು ಶಿವಮೊಗ್ಗ. ಪ್ರಸ್ತುತ ನೆಲೆಸಿರುವುದು ಬೆಂಗಳೂರಿನಲ್ಲಿ. ಬಿಬಿಎಂ ಪದವಿ ಪಡೆದ ನಂತರ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಉದ್ಯೋಗ. 38 ವರ್ಷಗಳ ಕಾಲ ಸೇವೆ ಸಲ್ಲಿಸಿ ನಂತರ ನಿವೃತ್ತಿ.

ಖ್ಯಾತ ಸಾಹಿತಿ, ಕಾದಂಬರಿಕಾರ ತ.ರಾ.ಸು. ಅವರು ಶ್ರವಣಕುಮಾರಿಯವರ ಸೋದರ ಮಾವನಾದರೆ, ಟಿ.ಎಸ್. ವೆಂಕಣ್ಣಯ್ಯ ಹಾಗೂ ತ.ಸು.ಶಾಮರಾಯರು ಇವರ ದೊಡ್ಡ ಮತ್ತು ಚಿಕ್ಕ ತಾತಂದಿರು.

ಶ್ರವಣಕುಮಾರಿಯವರಿಗೆ ಬಾಲ್ಯದಿಂದಲೇ ಸಾಹಿತ್ಯದಲ್ಲಿ ಆಸಕ್ತಿ. ಬ್ಯಾಂಕ್ ವೃತ್ತಿಯಿಂದ ನಿವೃತ್ತರಾದ ನಂತರ ಸಾಹಿತ್ಯ ರಚನೆಯೇ ಇವರ ಪ್ರವೃತ್ತಿ.

ಎರಡು ಕಥಾ ಸಂಕಲನಗಳು (ಅಸ್ಪಷ್ಟ ತಲ್ಲಣಗಳು, ಬೆಳಕು ಹರಿವ ಮುನ್ನ), ಒಂದು ಪ್ರವಾಸ ಕಥನ (ಅಮೆರಿಕಾ, ಬೊಗಸೆಯಲ್ಲಿ ಕಂಡಷ್ಟು...) ಹಾಗೂ ಒಂದು ಲಲಿತ ಪ್ರಬಂಧಗಳ ಸಂಕಲನ (ಸಂಜೆಯ ಮಳೆ) ಪ್ರಕಟವಾಗಿವೆ. ಇನ್ನೆರಡು ಕಥಾ ಸಂಕಲನಗಳು ಹಾಗೂ ಒಂದು ಅನುಭವ ಕಥನ ಬಿಡುಗಡೆಯ ಹಂತದಲ್ಲಿವೆ. ಇವರ ಅನೇಕ ಬರಹಗಳು ನಾಡಿನ ವಿವಿಧ ಪತ್ರಿಕೆಗಳು, ನಿಯಕಾಲಿಕಗಳಲ್ಲಿ ಬೆಳಕು ಕಂಡಿವೆ.

ಶ್ರವಣಕುಮಾರಿಯವರು ಕನ್ನಡ ಸಾಹಿತ್ಯ ಲೋಕಕ್ಕೆ ಸಂಬಂಧಿಸಿದಂತೆ ಹಲವು ಬಹುಮಾನ, ಪ್ರಶಸ್ತಿ, ಪುಸ್ಕಾರಗಳಿಗೆ ಭಾಜನರಾಗಿದ್ದಾರೆ. ಅದರಲ್ಲಿ ಇವರ 'ಬೆಳಕು ಹರಿವ ಮುನ್ನ' ಕಥಾ ಸಂಕಲನಕ್ಕೆ ದೊರೆತ ಕನ್ನಡ ಸಾಹಿತ್ಯ ಪರಿಷತ್ತಿನ ವಸುದೇವ ಭೂಪಾಲಂ ಪ್ರಶಸ್ತಿ, ಕರ್ನಾಟಕ ಲೇಖಕಿಯರ ಸಂಘದ ನಿರುಪಮಾ ಸಣ್ಣ ಕತೆಗಳ ಪ್ರಶಸ್ತಿ ಹಾಗೂ ವಿಜಯಾ ಸುಬ್ಬರಾಜ್ ಗಣ್ಯ ಲೇಖಕಿ ಪ್ರಶಸ್ತಿ ಮುಖ್ಯವಾದುವು.

ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯಲ್ಲಿ ಆರಂಭದಿಂದಲೂ ಸಕ್ರಿಯರಾಗಿರುವ ಶ್ರವಣಕುಮಾರಿಯವರು, ಸಾಹಿತ್ಯ ದಾಸೋಹದಲ್ಲಿ ನಿರಂತರವಾಗಿ ಭಾಗವಹಿಸಿ ತಮ್ಮ ವಸ್ತುನಿಷ್ಠ ಹಾಗೂ ವೈವಿಧ್ಯಮಯ ಬರಹಗಳನ್ನು ಪ್ರಸ್ತುತಪಡಿಸಿದವರು. ವೇದಿಕೆಯ ವೈವಿಧ್ಯಮಯ ಚಟುವಟಿಕೆಗಳನ್ನು ಕೈಗೊಂಡು ಮುನ್ನಡೆಯುವಲ್ಲಿ ಇವರ ಸಲಹೆಗಳು ಅತ್ಯಮೂಲ್ಯವಾಗಿರುತ್ತವೆ.

ವಿಷಯಗಳಲ್ಲಿ ರಾಮಕೃಷ್ಣ ಆಶ್ರಮವು ಮುಖ್ಯವಾದದ್ದು. ದಾಸೋಹಗಳಲ್ಲಿ ಅವರು ಈ ಬಗೆಗಿನ ಸರಣಿ ಲೇಖನಗಳನ್ನು ಪ್ರಸ್ತುತಪಡಿಸುತ್ತಿರುತ್ತಾರೆ. ಈ ಬಾರಿಯ ಅವರ ಲೇಖನ ಮಾತ್ರಾ ಬ್ರೌನ್ ಪಿಂಕೇಯ ಬಗೆಗಿನದ್ದು.

ಅಮೇರಿಕಾದ ನಾರ್ತ್ ಆಂಪ್ಟನ್‌ನ ಸ್ಮಿತ್ ಕಾಲೇಜಿನ ವಿದ್ಯಾರ್ಥಿನಿ ಮಾರ್ತಾ ಬ್ರೌನ್ ಪಿಂಕೇ 1893ರಲ್ಲಿ ಕಾಲೇಜಿನಲ್ಲಿ ಉಪನ್ಯಾಸ ನೀಡಲು ಬಂದಿದ್ದ ಸ್ವಾಮಿ ವಿವೇಕಾನಂದರನ್ನು ಭೇಟಿಯಾಗುತ್ತಾಳೆ. 42 ವರ್ಷಗಳ ನಂತರ 1935ರಲ್ಲಿ ಕೊಲ್ಕತ್ತಾದ ಬೇಲೂರು ಮಠಕ್ಕೆ ಬಂದ ಪಿಂಕೇ ಹೇಳುವ ಈ ಮಾತುಗಳು ಇಡೀ ಲೇಖನದ ಸಾರವನ್ನು ಎತ್ತಿತೋರುತ್ತವೆ.

1. ಭಾರತದ ಭೇಟಿ ನನಗೆ ತೀರ್ಥಯಾತ್ರೆ, ಉಳಿದ ದೇಶಗಳ ಭೇಟಿ ಬರೀ ಪ್ರವಾಸ.
2. ನಾನೂ ದಿನವೂ ಬೆಳಿಗ್ಗೆ ಪ್ರಾರ್ಥಿಸುತ್ತಿದ್ದೆ ಮೊದಲು ನನಗಾಗಿ, ನಂತರ ನನ್ನ ಕುಟುಂಬಕ್ಕಾಗಿ, ಇಡೀ ಮಾನವ ಕುಲಕ್ಕಾಗಿ ಪ್ರಾರ್ಥಿಸಬೇಕೆನ್ನುವುದು ನನಗಿಲ್ಲಿಯೇ ಹೊಳೆದದ್ದು.
3. ಈಜಿಪ್ಟಿನ ಕಲ್ಲಿನ ಶವಪೆಟ್ಟಿಗೆಯಲ್ಲಿ ಇರಿಸಿದ ಬೀಜಗಳು ಇಂದು ಬಿತ್ತಿದರೂ ಮೊಳಕೆ ಒಡೆಯುವ ಶಕ್ತಿ ಉಳಿಸಿ ಕೊಂಡಿರುತ್ತವೆಯಂತೆ. ಭಾರತದ ಆ ಪುಣ್ಯ ಪುರುಷನ ಸ್ಮೃತಿಯ ಬೀಜ ನನ್ನಲ್ಲಿ ಮೊಳೆತು ಮರವಾಗುತ್ತಿದೆ ಮತ್ತು ನನ್ನನ್ನು ಇಲ್ಲಿಗೆ ಕರೆತಂದಿದೆ.

3	ಶ್ರೀನಿವಾಸ ಎಂ. ಜಿ. ಪಾಣಿಭಾತೆ	ಲಾಸ್ಟ್ ವರ್ಕಿಂಗ್ ಡೇ

ವೇದಿಕೆಗೆ ಹೊಸತಾಗಿ ಬಂದಿರುವ ಶ್ರೀಯುತ ಶ್ರೀನಿವಾಸ ಎಂ ಪಾಣಿಭಾತೆಯವರು ಭರವಸೆ ಹುಟ್ಟಿಸುವ ಕತೆಗಾರರಾಗಿ ತೋರುತ್ತಿದ್ದಾರೆ. ಅವರೇ ಹೇಳುವ ಪ್ರಕಾರ ನಗರದ ಕಾರ್ಪೊರೇಟ್ ಜೀವನದ ಮಧ್ಯೆ ಸಾಗುವ ಈ ಕಥೆ, ಒಂದು ಸಾಮಾನ್ಯ ದಿನದಲ್ಲಿ ನಡೆದ ಎರಡು ಅನಿರೀಕ್ಷಿತ ಘಟನೆಗಳ ಮೂಲಕ ಜೀವನದ ಅನಿಶ್ಚಿತತೆಯನ್ನು ಪ್ರಶ್ನಿಸುತ್ತದೆ. ಹತ್ತಿರದ ಸ್ನೇಹಿತನ ಅಕಸ್ಮಿಕ ಸಾವು ಮತ್ತು ಸಹೋದ್ಯೋಗಿಯ ಏಕಾಏಕಿ ಕೆಲಸ ಕಳೆದುಕೊಳ್ಳುವ ಘಟನೆ ಬದುಕಿನ ಅರ್ಥ, ಭದ್ರತೆ ಮತ್ತು ನಾಳೆಯ ಬಗ್ಗೆ ಇರುವ ನಂಬಿಕೆಗಳನ್ನು ಮೌನವಾಗಿ ಕದಡುತ್ತದೆ. ಸಾವೇ ಆಗಲಿ, ಕೆಲಸ ಕಳೆದುಕೊಳ್ಳುವುದೇ ಆಗಲಿ, ಯಾವುದೂ ಬದುಕಿನ ಅಂತ್ಯವಲ್ಲ; ಮನುಷ್ಯನು ಕುಗ್ಗದೆ, ತನ್ನೊಳಗಿನ ಧೈರ್ಯವನ್ನು ಹುಡುಕಿ, ಹೊಸ ದಾರಿಯನ್ನು ಕಂಡುಕೊಳ್ಳಬೇಕೆಂಬ ಚಿಂತನೆ ಕಥೆಯೊಳಗೆ ಮೂಡುತ್ತದೆ. ಕತೆಯ ನಿರೂಪಣಾ ಕೌಶಲ್ಯ ಮೆಚ್ಚುವಂತದ್ದು.

4	ಟಿ. ಆರ್. ಉಷಾರಾಣಿ	ಗುಳೆ ಎದ್ದ ಕಿಟ್ಟಪ್ಪ

ಶ್ರೀಮತಿ ಉಷಾರಾಣಿಯವರು ಕತೆ ಹೆಣೆಯುವುದರಲ್ಲಿ ಸಿದ್ಧಹಸ್ತರು. ಪ್ರಸ್ತುತ ಕತೆ 'ಗುಳೆ ಎದ್ದ ಕಿಟ್ಟಪ್ಪ' ಇಂದಿನ ಹಳ್ಳಿಗಳಲ್ಲೂ ನಡೆಯುತ್ತಿರುವ ಹೊಲಸು ರಾಜಕೀಯದ ಪರಿಚಯವನ್ನು ಮಾಡಿಸುತ್ತಿದೆ. ಇಡೀ ಹಳ್ಳಿಯನ್ನು ತನ್ನ ಕುಟುಂಬದಂತೆಯೇ ನೋಡಿಕೊಂಡಿದ್ದ ಕಿಟ್ಟಪ್ಪನನ್ನು ತಮ್ಮ ಬೇಳೆ ಬೇಯಲಿಲ್ಲವೆನ್ನುವ ಕಾರಣಕ್ಕೆ ಹರಕೆಯ ಕುರಿ ಮಾಡಿದ ರಾಜಪ್ಪನ ಸಂಚು ವಿಫಲವಾದರೂ ಹಳ್ಳಿಗೆ ಕಿಟ್ಟಪ್ಪನಂತಹ ಸಜ್ಜನ ಉಳಿಯಲಿಲ್ಲವೆನ್ನುವ ವಿಷಾದ ಉಳಿದು ಹೋಗುತ್ತದೆ. ಭಾಷೆಯ ಬಳಕೆ, ಉತ್ತಮ ನಿರೂಪಣೆ ಮತ್ತು ಕತೆ ಹೆಣೆದ ತಂತ್ರ ಗಮನ ಸೆಳೆಯುತ್ತದೆ. ಒಂದು ಒಳ್ಳೆಯ ವಸ್ತುವಿನ, ಉತ್ತಮ ನಿರೂಪಣೆಯ ಕತೆ.

5	ಪೂರ್ಣಿಮಾ ಭಗವಾನ್	ನೆನಪೋತ್ಸವ

ಚೌಪದಿಗಳನ್ನು ರಚಿಸುವುದರಲ್ಲಿ ಸಿದ್ಧಹಸ್ತರಾದ ಶ್ರೀಮತಿ ಪೂರ್ಣಿಮಾ ಭಗವಾನ್ ಇಂದು ಕಳೆದ ಶತಮಾನದ ಅರವತ್ತರ ದಶಕದ ರಾಮಸ್ವಾಮಿ ಕಣಿವೆ ಎಂಬ ಹಳ್ಳಿಯೊಂದು ನಿಧಾನವಾಗಿ ಬದಲಾಗುತ್ತಾ ಬಂದು ಇಂದಿನ ಆಧುನಿಕತೆಗೆ ತೆರೆದುಕೊಂಡಿದ್ದರೂ, ಅಂದಿನ ಕುರುಹಾಗಿ ಇಂದೂ ಅಲ್ಲಿ ರಾಮನವಮಿಯಂದು ನಡೆಯುವ ವಾರ್ಷಿಕ ಜಾತ್ರಾ ಮಹೋತ್ಸವದ ವಿವರಗಳನ್ನು ನೀಡುವ ಲೇಖನವನ್ನು ರಚಿಸಿದ್ದಾರೆ. ಕಳೆದ ಶತಮಾನದ ಹೆಜ್ಜೆಗುರುತುಗಳನ್ನು ದಾಖಲಿಸುತ್ತಾ ಅಂದಿನ ನೆನಪುಗಳನ್ನು ಇಂದಿನ ವಾಸ್ತವದಲ್ಲಿ ಮಿಳಿತಗೊಳಿಸುತ್ತಾ, ಒಳ್ಳೆಯ ನೆನಪಿನ ಮೆರವಣಿಗೆಯನ್ನು ನೀಡಿದ್ದಾರೆ.

6	ಗೋಪಿನಾಥ್	ಒಂದೇ ಬಳ್ಳಿಯ ಹೂಗಳು

ಶ್ರೀಯುತ ಗೋಪಿನಾಥ್ ಅವರು ನಮ್ಮ ಸಸಕಸ ಗುಂಪಿನ ಆಸ್ಥಾನ ಹಾಸ್ಯ ಬರಹಗಾರರು. ದಿನನಿತ್ಯದ ಘಟನೆಗಳೇ ಆದರೂ ಅವು ಅವರ ಲೇಖನಿಯಲ್ಲಿ ಹಾಸ್ಯದ ಮಸಿಯನ್ನು ತುಂಬಿಕೊಂಡು ಲೇಖನದಲ್ಲಿ ನಗೆಯುಕ್ಕಿಸುತ್ತವೆ. ತನ್ನನ್ನೇ ಹಾಸ್ಯ ಮಾಡಿಕೊಳ್ಳುವವನು ಉತ್ತಮ ಹಾಸ್ಯಗಾರ ಎಂಬ ಮಾತಿದೆ. ಅಂತೆಯೇ ಗೋಪಿನಾಥರ ಈ ಲೇಖನದಲ್ಲೂ ತಮ್ಮ ಸ್ನೇಹಿತನೂ, ತಾನೂ ಇಬ್ಬರೂ ಸ್ವಭಾವದಲ್ಲಿ ಒಂದೇ ಬಳ್ಳಿಯ ಹೂಗಳಿದ್ದಂತೆ ಎಂದು ಪ್ರತಿಪಾದಿಸುತ್ತಾ ಲೇಖನದುದ್ದಕ್ಕೂ ನಗೆಯನ್ನರಳಿಸುತ್ತಾ ಹೋಗಿದ್ದಾರೆ.

7	ಸುವರ್ಣ ಲಕ್ಷ್ಮಿ	ಕಾಶಿ ವಿಶ್ವನಾಥ ದೇವಾಲಯ

ನನಗೆ ಸುವರ್ಣ ಲಕ್ಷ್ಮಿಯವರ ಬರಹಗಳ ಪರಿಚಯ ಹೆಚ್ಚಾಗಿಲ್ಲ. ಕ್ಲಬ್ ಹೌಸ್ ಕಥಾ ಪರಂಪರೆಯಲ್ಲಿ ಆಗೀಗ ಅವರ ಮಾತುಗಳನ್ನು ಕೇಳುವ ಅವಕಾಶವಾಗಿದೆಯಷ್ಟೇ. ಕಾಶಿ ವಿಶ್ವನಾಥ ದೇಗುಲದ ಪುರಾಣ ಮತ್ತು ಇತಿಹಾಸಗಳನ್ನು ಸಂಕ್ಷಿಪ್ತವಾಗಿ, ಆದರೆ ಒಂದೇ ಲೇಖನದಲ್ಲಿ ಸಮಗ್ರ ವಿಷಯವನ್ನೂ ತೋರುವಂತಹ ಚಂದದ ಬರೆಹವನ್ನು ರಚಿಸಿ ಇಂದಿನ ದಾಸೋಹದಲ್ಲಿ ಪ್ರಸ್ತುತಪಡಿಸಿದ್ದಾರೆ. ಕಾಶಿ ಯಾತ್ರೆ ಮಾಡುವವರಿಗೆ ಇದು ಒಂದು ಒಳ್ಳೆಯ ಮಾರ್ಗದರ್ಶಿ ಲೇಖನದಂತಿದೆ.

8	ನಾಗರತ್ನ ಚಂದ್ರಶೇಖರ	ಯುದ್ಧ ಯಾರು ಬಿದ್ದ? ಯಾರು ಗೆದ್ದ

ಶ್ರೀಮತಿ ನಾಗರತ್ನ ಚಂದ್ರಶೇಖರ್ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೈಯಾಡಿಸಿದವರು. ಹಲವು ಪತ್ರಿಕೆಗಳಲ್ಲಿ ಅವರ ಲೇಖನಗಳು ಪ್ರಕಟವಾಗಿದ್ದು ಅವರೊಬ್ಬ ಪ್ರಸಿದ್ಧ ಬರಹಗಾರ್ತಿಯಾಗಿ ಗುರುತಿಸಿಕೊಂಡಿದ್ದಾರೆ. ಇಂದು ಅವರು ಪ್ರಸ್ತುತ ಪಡಿಸಿರುವ 'ಯುದ್ಧ ಯಾರು ಬಿದ್ದ? ಯಾರು ಗೆದ್ದ?'ದ ಮೊದಲ ಭಾಗ ಗಂಭೀರವಾಗಿ ಆರಂಭವಾಗಿ ಯುದ್ಧದ ವಿನಾಶಕಾರಿ ಪರಿಣಾಮಗಳ ಬಗ್ಗೆ ಹೇಳುತ್ತಾ ವಿಚಾರ ಪ್ರಚೋದಕವಾಗಿ ಸಾಗಿ ನಂತರ ಇದ್ದಕ್ಕಿದ್ದಂತೆ ಹಾಸ್ಯದಲ್ಲಿ ಅಂತ್ಯವಾಗುತ್ತದೆ. ಇದು ಒಂದು ರೀತಿಯಾಗಿ ಅಸಂಗತವಾಗಿ ಕಾಣಿಸಿದರೂ ಲೇಖಕಿಯ ಬರವಣಿಗೆಯ ಸ್ವಾತಂತ್ರ್ಯವನ್ನು ನಾನು ಪ್ರಶ್ನಿಸುವುದಿಲ್ಲ.

9	ರೇಣುಕಾ ದೇಸಾಯಿ	ತಾಯಿ

ಚಟುವಟಿಕೆಯ ಗಣಿ ಶ್ರೀಮತಿ ರೇಣುಕಾ ದೇಸಾಯಿ ಬರಿಯ ಬರವಣಿಗೆಯಲ್ಲಷ್ಟೇ ಅಲ್ಲ; ಸಂಸಾರ, ಉದ್ಯೋಗ, ತಂತ್ರಜ್ಞಾನ, ಸಂಘಟನೆ, ಸಾಮಾಜಿಕ ಸೇವೆ ಹೀಗೆ ಹಲವು ಹತ್ತು ರಂಗಗಳಲ್ಲಿ ಏಕಕಾಲದಲ್ಲಿ ಕಾಲಿಟ್ಟು ನಡೆವ ಧೀರೆ. ಅವರು ಇಂದು ಪ್ರಸ್ತುತಪಡಿಸಿರುವ ಕತೆ ತಾಯಿ, ಒಬ್ಬ ಪರಿಪೂರ್ಣ ತಾಯ ಹೃದಯವುಳ್ಳವಳು ಮತ್ತು ತನ್ನ ಹೆತ್ತ ಮಗಳಷ್ಟೇ ಪ್ರೀತಿ, ವಾತ್ಸಲ್ಯ, ಮಮತೆಯನ್ನು ತನ್ನ ಸಾಕುಮಗಳಿಗೂ ನೀಡಿ ಸಮಾಜದಲ್ಲಿ ತನ್ನ ಮಮತೆಯ ಮಗಳ ಸ್ಥಾನವನ್ನು ನೀಡುತ್ತಾಳೆ ಎನ್ನುವುದನ್ನು ತೋರುವ ಕತೆ. ಅಂತೆಯೇ ಒಬ್ಬ ಸಾಕುಮಗಳು ಕೂಡಾ ತನ್ನ ಸಾಕುತಾಯಿಗೆ ನಿಜವಾದ ಮಗಳ ಸ್ಥಾನವನ್ನು ತುಂಬಬಹುದು ಎನ್ನುವುದನ್ನೂ ಹೇಳುತ್ತದೆ.

10	ಗಾಯತ್ರಿ ಮೂರ್ತಿ	ನೆನಪಿನ ಸುಳಿಯಲ್ಲಿ

ವೃತ್ತಿಯಿಂದ ವಿಜ್ಞಾನಿ ಮತ್ತು ಪ್ರವೃತ್ತಿಯಿಂದ ಲೇಖಕಿಯಾಗಿರುವ ಶ್ರೀಮತಿ ಗಾಯತ್ರಿ ಮೂರ್ತಿಯವರು ಇಂದು ತಮ್ಮ ಬಾಲ್ಯದ ಮೂರು ನೆನಪುಗಳನ್ನು ಸ್ವಾರಸ್ಯಕರವಾಗಿ ಚಿತ್ರಿಸಿಕೊಟ್ಟಿದ್ದಾರೆ. ಚಿನ್ನ ಪಾದರಸದೊಂದಿಗೆ ಬೆರೆತು ಅಮಾಲ್ಗಮ್ ಆಗುವುದು, ಬಣ್ಣ ಹಾಕುವುದು ಅಷ್ಟೊಂದು ಸರಳ ವಿಷಯವಲ್ಲ ಎನ್ನುವುದು ಮತ್ತು ಕೋಳಿಯ ಪೂಜೆ ಮತ್ತು ಬಲಿಯ ಈ ಮೂರೂ ಪ್ರಸಂಗಗಳು ತಕ್ಷಣಕ್ಕೆ ನಗೆಯನ್ನು ತರಿಸಿದರೂ ಹಿಂದೆಯೇ ಆಲೋಚಿಸುವಂತೆಯೂ ಮಾಡುತ್ತವೆ. ಒಬ್ಬ ವಿಜ್ಞಾನಿಯ ಬರಹಗಳ ಉದ್ದೇಶವೂ ಅದೇ ತಾನೇ.

11	ಸುಷುಮಾ ಸುರೇಶ್	ಅನಾಥರು

ಶ್ರೀಮತಿ ಸುಷುಮಾ ಸುರೇಶ್ ಕೂಡಾ ನನಗೆ ಹೊಸ ಪರಿಚಯ. ಇಂದು ಅವರು ಪ್ರಸ್ತುತಪಡಿಸಿರುವ 'ಅನಾಥರು' ಕತೆ ಅವರ "ಪಾತಜ್ಜಿ ಪ್ರೀತಿ ಹಂಚುವ ಅಜ್ಜಿ" ಕಥಾ ಸಂಕಲನದಲ್ಲಿನ ಕತೆ ಎಂದಿದ್ದಾರೆ. ಪ್ರಸಕ್ತ ವಿದ್ಯಮಾನದಲ್ಲಿ ವಯಸ್ಸಾದ ತಂದೆತಾಯಂದಿರು ಇಲ್ಲಿದ್ದು ಮಕ್ಕಳು ಪರದೇಶದಲ್ಲಿದ್ದು ಸಾಯುವ ಕಾಲದಲ್ಲಿ ಮುಪ್ಪಿನ ತಾಯ್ತಂದೆಯರು ಅನಾಥ ರಾಗುವುದನ್ನು ಸಶಕ್ತವಾಗಿ ಬಿಂಬಿಸಿರುವ ಕತೆ. ಕತೆಯಲ್ಲಿ ಪಾತಜ್ಜಿ ಸಮಸ್ಯೆಗೆ ನೀಡುವ ಪರಿಹಾರವೇನೋ ಸೂಕ್ತವಾದದ್ದೇ ಆದರೆ ಆಚರಣೆಯಲ್ಲಿ ತರಲು ಸಾಧ್ಯವೇ? ಎನ್ನುವುದೇ ಕಡೆಯಲ್ಲಿ ಉಳಿದು ಹೋಗುವ ಪ್ರಶ್ನೆ.

12	ರತ್ನಾ ಮೂರ್ತಿ	"ಮಂಡಲ" – ಚಿತ್ರ ರೂಪದಲ್ಲಿನ ಬ್ರಹ್ಮಾಂಡ, ಧ್ಯಾನದಲ್ಲಿನ ಆತ್ಮ"

ಶ್ರೀಮತಿ ರತ್ನಾ ಮೂರ್ತಿಯವರು ಸರಸ್ವತಿಯ ಅಪರಾವತಾರವೇ ಸರಿ. ಅವರು ಕೈಯ್ಯಾಡಿಸದ ಕ್ಷೇತ್ರವೇ ಇಲ್ಲವೆನ್ನ ಬಹುದೇನೋ. ಒಳ್ಳೆಯದು ಯಾವುದನ್ನು ಕಂಡರೂ ಅದರ ಕುರಿತು ಅಧ್ಯಯನ ಮಾಡುವ, ಅದನ್ನು ಕರಗತ ಮಾಡಿಕೊಳ್ಳುವ ಅವರ ಶ್ರದ್ಧೆ, ತಪಸ್ಸು ಅನುಕರಣೀಯ; ಆದರೆ ಸಾಮಾನ್ಯರಿಂದ ಸಾಧ್ಯವಿಲ್ಲದ್ದು. ಇತ್ತೀಚೆಗೆ ಅವರು ಬಹಳವಾಗಿ ತೊಡಗಿಕೊಂಡಿರುವ ಮಂಡಲ ಚಿತ್ರಕಲೆಯ ಬಗ್ಗೆ ಇಂದಿನ ಲೇಖನವನ್ನು ಪ್ರಸ್ತುತಪಡಿಸಿದ್ದಾರೆ. ಅವರೇ ಹೇಳುವಂತೆ ಮಂಡಲವೆಂದರೆ ರೂಪದಲ್ಲಿ ತತ್ತ್ವ, ದೃಶ್ಯದಲ್ಲಿ ಧ್ಯಾನ, ಮನಸ್ಸಿನಲ್ಲಿ ನೆಲೆಸುವ ಶಾಂತಿ! ಭಾರತೀಯ ತತ್ವ ಶಾಸ್ತ್ರ, ವೇದ ಕಾಲ, ತಂತ್ರ ಶಾಸ್ತ್ರ, ಭೌದ್ಧ ಪರಂಪರೆ ಎಲ್ಲೆಡೆಯೂ ಮಂಡಲ ಚಿತ್ರಕಲೆಯ ಪ್ರಯೋಗವನ್ನು ಅವರು ಗುರುತಿಸಿದ್ದಾರೆ. ಮಂಡಲವು

ಕೇವಲ ದೃಶ್ಯಾತ್ಮಕ ಚಿತ್ರವಲ್ಲ; ಅದು ಕೂಡ ಒಂದು ಧ್ಯಾನದ ಮಾರ್ಗ ಎನ್ನುತ್ತಾ ಅದು ಚಿಂತನೆಗಳನ್ನು ಸಮತೋಲನಗೊಳಿಸುತ್ತದೆ ಮತ್ತು ಮಂಡಲ ಕಲೆಯ ಕಲಾವಿದ, ಅದರ ಧ್ಯಾನಿ ಮತ್ತು ಆರಾಧಕ—ಈ ಮೂವರಿಗೂ ಒಂದೇ ಬಗೆಯ ಅನುಭವವಾಗಬಹುದು ಎನ್ನುತ್ತಾರೆ.

13	**ಪೋಲೇನಹಳ್ಳಿ ರಮೇಶ್**	**ತಂಪಣ್ಣ ಕೋಮಣ್ಣ**

ಶ್ರೀಯುತ ಪೋಲೇನಹಳ್ಳಿ ರಮೇಶ್ ಅವರು ವೃತ್ತಿಯಲ್ಲಿ ಇಂಜಿನಿಯರ್; ಪ್ರವೃತ್ತಿಯಲ್ಲಿ ಸೂಕ್ಷ್ಮ ಸಂವೇದನೆಯ ಕವಿ. ಹೆಚ್ಚು ಮಾತನಾಡದ ಇವರಂತೆಯೇ ಇವರ ಕವಿತೆಗಳೂ ನಿಶ್ಶಬ್ದವಾಗಿಯೇ ಓದುಗನೊಂದಿಗೆ ಸಂವಹನವನ್ನು ಸಾಧ್ಯಗೊಳಿಸಿಕೊಳ್ಳುತ್ತವೆ. ಇಂದು ಇವರು ಪ್ರಸ್ತುತಪಡಿಸಿದ 'ತಂಪಣ್ಣ ಕೋಮಣ್ಣ' ಕವಿತೆ ಜಗತ್ತಿನ ಸದ್ಯದ ಪರಿಸ್ಥಿತಿಯ ಕನ್ನಡಿಯಾಗಿದೆ. ಅಮೇರಿಕಾ, ಇಸ್ರೇಲ್ ಮತ್ತು ಇರಾನ್ ನಡುವೆ ನಾಯಕರ ಕಾರಣಗಳಿಗಾಗಿ ನಡೆಯುತ್ತಿರುವ ಕದನ ಅಲ್ಲಿನ ಜನಸಾಮಾನ್ಯರ ಜೀವನವನ್ನು ಹಣ್ಣು ಹಣ್ಣಲ್ಲ; ಹುಣ್ಣುಹುಣ್ಣಾಗಿಸಿದೆ. “ಬುದ್ಧಿ ಅಡವಿಟ್ಟವರು, ದುಡಿದು ಗಳಿಸಿದವರಲ್ಲ, ಪೂರ್ವಾರ್ಜಿತ ನೆನ್ನೆಯ ಅನ್ನ ಉಂಡು ಕೆರೆತ ಹೆಚ್ಚಾಗಿ ಕದನಕ್ಕಿಳಿದವರು”; “ಬದುಕು ಮೂರಾಬಟ್ಟೆ – ಎದೆಯೊಳಗೆ ಹಗೆ ತುಂಬಿ ಗಾಳಿಯಲಿ ವಿಷ ತುಂಬಿ ಜೀತದಾಳುಗಳ ಹೆಣ ಕಣಿವೆಯಲಿ ತುಂಬಿ ತುಂಬಿ”; “ಸಂಭವಾಮಿ ಯುಗೇ ಯುಗೇ ಎಂದವರು ಹಿಂದು–ಳಿದು ತಟಸ್ಥವೇ, ಗಸ್ತು ಬರುವವನು ಕಲಿಯೇ? ಎಲೆಯ ಮೇಲ್ ತೇಲಿ ಬರುವ ಕೃಷ್ಣನೆ? ಯಾರಿಗೂ ತಿಳಿಯದಲ್ಲ!” ಈ ಸಾಲುಗಳು ಕವಿತೆ ಓದಿ ಮುಗಿಸಿದ ಮೇಲೂ ಮನದಲ್ಲಿ ಮಾರ್ದನಿಸುತ್ತಿರುತ್ತವೆ.

14	**ಮಾಲತಿ ಶ್ರೀನಿವಾಸನ್**	**ಜೀವನ ಧಾರೆ; ನಿಜ ನಿವೃತ್ತಿ (ಎರಡು ಕವನಗಳು)**

ಶ್ರೀಮತಿ ಮಾಲತಿ ಶ್ರೀನಿವಾಸನ್ ಉತ್ತಮ ಕವಯಿತ್ರಿ ಹಾಗೂ ಗಾಯಕಿ. ದಿನನಿತ್ಯದ ಜೀವನದ ಆಗುಹೋಗುಗಳು, ಅವರ ಅನುಭವಗಳು ಅವರಲ್ಲಿ ಕವಿತೆಗಳ ರೂಪವನ್ನು ಪಡೆದುಕೊಳ್ಳುತ್ತವೆ. ಇಂದು ಅವರು ಎರೆಡು ಕವಿತೆಗಳನ್ನು ಪ್ರಸ್ತುತ ಪಡಿಸಿದ್ದಾರೆ. 'ಜೀವನ ಧಾರೆ'ಯಲ್ಲಿ ಅವರು ಜೀವನದಲ್ಲಿ ಸಾಗಿ ಬಂದ ಹಾದಿ, ಕಂಡ ಏರಿಳಿತಗಳು ಇಂದು ಅವರಲ್ಲಿ ಮೂಡಿಸುತ್ತಿರುವ ಭಾವನೆಗಳು ಪದಗಳ ರೂಪವನ್ನು ಪಡೆದುಕೊಂಡಿದೆ. ಎಲ್ಲವೂ ನಿಧಾನವಾಗಿ ನೇಪಥ್ಯಕ್ಕೆ ಸರಿಯುತ್ತಿದೆಯೆನ್ನಿಸುವ ಹೊತ್ತಿನಲ್ಲಿ ಧಾವಂತವೇಕೆ ಎಂದುಕೊಳ್ಳುತ್ತಿದೆ ಮನ.

ತಮ್ಮ ಪತಿ 84ರ ವಯಸ್ಸಿನಲ್ಲಿ ಅತಿಥಿ ಪ್ರಾಧ್ಯಾಪಕರ ಹುದ್ದೆಯಿಂದ ನಿವೃತ್ತಿ ತೆಗೆದುಕೊಳ್ಳುವಾಗ ಪತಿಯ ಮನದಲ್ಲಿ ಮೂಡಿದ ಗೊಂದಲ ಹಾಗೂ ಅದಕ್ಕೆ ಮಾಲತಿಯವರ ಮನದಲ್ಲಿ ಮೂಡಿದ ಸಾಂತ್ವನವೇ 'ನಿಜ ನಿವೃತ್ತಿ' ಕವಿತೆಯಾಗಿದೆ.

15	**ಎನ್.ವಿ. ರಘುರಾಂ**	**ಇದು ಇವರು ಬರೆದಿದ್ದೆ?... ಅಥವಾ....AIನೇ?**

ಶ್ರೀಯುತ ಎನ್.ವಿ.ರಘುರಾಂ ಅವರು ವೃತ್ತಿಯಲ್ಲಿ ಇಂಜಿನಿಯರ್, ಪ್ರವೃತ್ತಿಯಲ್ಲಿ ಉತ್ತಮ ಬರಹಗಾರರು. ದಿನನಿತ್ಯದ ಘಟನೆಗಳಿಗೂ ಜೀವ ತುಂಬಿ, ಅದಕ್ಕೆ ಹಾಸ್ಯದ ಲೇಪನ ಮಾಡಿಸಿ, ವೇದಿಕೆಯಲ್ಲಿ ಅದನ್ನು ಉಣಬಡಿಸಿ ಎಲ್ಲರನ್ನೂ ಖುಷಿ ಪಡಿಸುವವರು. ಹಲವು ಉತ್ತಮ ಪುಸ್ತಕಗಳನ್ನು ನಿರಂತರವಾಗಿ ಓದುತ್ತಾ ಅವುಗಳ ಸಾರವನ್ನೂ ವೇದಿಕೆಯಲ್ಲಿ ಪ್ರಸ್ತುತ ಪಡಿಸುತ್ತಾ ತಮ್ಮ ಸಾಹಿತ್ಯಾಭಿಮಾನವನ್ನು ಮೆರೆಯುವವರು. ಇಂದು ಇವರು ಪ್ರಸ್ತುತಪಡಿಸಿದ 'ಇದು ಇವರು ಬರೆದದ್ದೆ? ಅಥವಾ AIನೇ?' ಬರಹವು ವೇದಿಕೆಯಲ್ಲಿ ಎರಡು ದಿನಗಳಿಂದ ನಡೆದ ಚರ್ಚೆಯಿಂದ ಪ್ರೇರಿತವಾದದ್ದು ಎಂದು ಹೇಳಿದ್ದಾರೆ. ಲೇಖನದ ಶೈಲಿ, ಬರವಣಿಗೆಯ ಹದ ಇದು ನೀವೇ ಬರೆದದ್ದು; ಖಂಡಿತವಾಗಿಯೂ AI ಅಲ್ಲ ಎಂದು ಹೇಳುತ್ತಿದೆ.

16	**ಮಹಾಬಲ**	**ಹರಿಕಥಾ ರತ್ನ ಆರ್ ಗುರುರಾಜುಲು ನಾಯ್ಡು**

ಸಾನೆಟ್‌ಗಳು, ಕವಿತೆಗಳು, ಹಾಸ್ಯಬರಹಗಳು, ಪ್ರಬಂಧಗಳು, ಲೇಖನಗಳು ಮತ್ತು ಕಥಾ ರಚನೆ ಎಲ್ಲಾ ಕ್ಷೇತ್ರಗಳಲ್ಲಿಯೂ ಪಳಗಿರುವ ಶ್ರೀಯುತ ಮಹಾಬಲರ ಬಗ್ಗೆ ಹೇಳುವುದೆಂದರೆ ಸೂರ್ಯನಿಗೆ ಟಾರ್ಚ್ ಬಿಟ್ಟಂತೆ. ಇಂದು ಅವರು ಪ್ರಸ್ತುತ

ಪಡಿಸಿರುವ ಲೇಖನ ಖ್ಯಾತ ಹರಿಕಥಾ ವಿದ್ವಾಂಸ ಶ್ರೀಯುತ ಗುರುರಾಜುಲು ನಾಯ್ಡು ಯಾನೇ ಚಲನಚಿತ್ರ ನಟ ಅರುಣ ಕುಮಾರ್ ಅವರ ಬಗ್ಗೆ. ಸುಮಾರು ಕಳೆದ ಶತಮಾನದ ಅರವತ್ತು ಎಪ್ಪತ್ತರ ದಶಕದವರೆಲ್ಲರಿಗೆ ಚಿರಪರಿಚಿತರಾಗಿದ್ದವರು ಶ್ರೀಯುತ ಗುರುರಾಜುಲು ನಾಯ್ಡು. ಗಣೇಶೋತ್ಸವ, ರಾಮೋತ್ಸವಗಳೆಂದರೆ ಊರ ಜನರು ಕಾಯುತ್ತಿದ್ದದ್ದು ಗುರುರಾಜುಲು ನಾಯ್ಡು ಅವರ ಹರಿಕತೆಗೆ. ಕರ್ನಾಟಕದ ಮೂಲೆಮೂಲೆಗಳಲ್ಲೂ ಅವರ ಕಾರ್ಯಕ್ರಮವೆಂದರೆ ಸುತ್ತಮುತ್ತಲ ಹತ್ತೆಂಟು ಹಳ್ಳಿಯವರು ಗಾಡಿಗಳನ್ನು ಕಟ್ಟಿಕೊಂಡು ಬಂದು ಕಾರ್ಯಕ್ರಮದ ಪ್ರೇಕ್ಷಕರಾಗುತ್ತಿದ್ದದ್ದು ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.

17	ಸೀತಾರಾಮ ಕಟ್ಟಿ	ಕವಿತೆ ಹೊಳೆಯುವ ವೇಳೆ (ಕವನ)

'ಜಾನಕಿರಾಮ' ಎನ್ನುವ ಅಂಕಿತನಾಮದಿಂದ ಬರೆಯುವ ಶ್ರೀಯುತ ಸೀತಾರಾಮ ಕಟ್ಟಿಯವರು ಉತ್ತಮ ಕವಿ ಮತ್ತು ಸಂಯೋಜಕರು. ತಮ್ಮದೇ ಅಲ್ಲದೆ ವೇದಿಕೆಯ ಇತರರ ಪ್ರಸ್ತುತಿಗಳಿಗೂ ದೃಶ್ಯಸಂಯೋಜನೆ ಮಾಡಿ ಪ್ರಸ್ತುತಪಡಿಸುವ ಸಹೃದಯರು. ಇವರ ಪ್ರಸ್ತುತಿಗಳಿಂದ ವೇದಿಕೆ ಶ್ರೀಮಂತವಾಗಿದೆ. ಇಂದು ಇವರು ಪ್ರಸ್ತುತಪಡಿಸಿರುವ 'ಕವಿತೆ ಹೊಳೆಯುವ ವೇಳೆ' ಎನ್ನುವ ಕವಿತೆಯಲ್ಲಿ ಕವಿತೆ ಹುಟ್ಟುವ ಶುಭ ಘಳಿಗೆ ಅದಾವುದು, ಕಾರಣ ಯಾವುದು, ಸನ್ನಿವೇಶ ಯಾವುದು ಎಂದು ಸುಂದರವಾದ ಪದಗಳನ್ನು ಹೆಕ್ಕಿ ಹೇಳುತ್ತಾ, "ಕನಸು ಅರಳುವ ವೇಳೆ ಚಿತ್ತ ಚಿಗುರುವ ವೇಳೆ ಘನವಾದ ಭಾವಹಿಮ ಕರಗುವ ವೇಳೆ ಹೇಳುಗನ ದನಿಯಾಗಿ ಕೇಳುಗನ ಕಿವಿಗಾಗಿ ಕಾಯದೆಯೇ ಹೊರಹೊಮ್ಮಿ ಸೊರಗುವ ವೇಳೆ... ಶೂನ್ಯದಲಿ ಶೂನ್ಯವನು ಕಳೆಯುವ ವೇಳೆ... ಕವಿತೆ ಹೊಳೆಯುವ ವೇಳೆ .." ಎನ್ನುತ್ತಾ ಕವಿತೆಯನ್ನು ಮುಗಿಸುತ್ತಾರೆ.

18	ವೆಂಕಟೇಶ ಕಾಮತ್	ಹರಟೆ ಚೂರು...

ಶ್ರೀಯುತ ವೆಂಕಟೇಶ ಕಾಮತರು ಒಳ್ಳೆಯ ಸಾಹಿತ್ಯಾಸಕ್ತರು. ಸಾಹಿತ್ಯದ ಬಗೆಗಿನ ಅವರ ಒಲವು ಅವರ ತಾಯಿ ಶಾಲಿನಿ ಕಾಮತರ ಬಳುವಳಿಯೆಂದೇ ತೋರುತ್ತದೆ. ಹಿಂದೊಮ್ಮೆ ದಾಸೋಹದಲ್ಲಿ ಶ್ರೀಯುತ ಜಿ.ವಿ.ಅರುಣ ಅವರು ವೆಂಕಟೇಶ ಕಾಮತರ ತಾಯಿಯ ಬಗ್ಗೆಯೇ ಒಂದು ಲೇಖನವನ್ನು ಪ್ರಸ್ತುತಪಡಿಸಿದ್ದರು. ವೆಂಕಟೇಶ ಕಾಮತರ ಇಂದಿನ ಪ್ರಸ್ತುತಿಯಲ್ಲಿ ಅವರ ತಾಯಿಯ ಸ್ವರಕ್ಷಣಾ ಉಪಾಯದ ತುಣುಕೊಂದಿದೆ. ಬಸ್ಸಿನಲ್ಲಿ ಪ್ರಯಾಣಿಸುವಾಗ ಪುಂಡರಿಂದ ರಕ್ಷಿಸಿಕೊಳ್ಳಲು ಸೇಫ್ಟಿ ಪಿನ್ನನ್ನು ಬಳಸಿಕೊಳ್ಳುವುದನ್ನು ಓದಿದಾಗ ನನಗೆ ಗಿರಿಜಾ ಶಾಸ್ತ್ರಿಯವರ ಇದೇ ವಸ್ತುವಿನ ಕವಿತೆಯೊಂದು ನೆನಪಾಯಿತು. ಕಾಮತರ ಚಿಕ್ಕಮ್ಮನ ಚಪ್ಪಲಿ ಮೋಕ್ಷದ ಉಪಾಯ, ಅವರ ಸೋದರತ್ತೆಯ ಸಮಯೋಚಿತ ಚಟಾಕಿಗಳ ಸಿಡಿತ ಆಸಕ್ತಿದಾಯಕವಾಗಿ ರಂಜಿಸಿತು.

19	ಬೆಂ. ಶ್ರೀ. ರವೀಂದ್ರ	ಶಾಪ ವಿಮೋಚನೆ (ಕವನ)

ಸಸಕಸ ಗುಂಪಿನ ಮುಖ್ಯಸ್ಥರ್‌ದ ಶ್ರೀಯುತರ ಪರಿಚಯವನ್ನು ಮಾಡುವುದೆಂದರೆ ರವಿಗೇ ದೊಂದಿ ಬೆಳಕು ತೋರಿದಂತೆ. ರವೀಂದ್ರರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಕೈಯ್ಯಾಡಿಸಿದರೂ ಅವರ ಪ್ರಮುಖವಾದ ಆಯ್ಕೆ ಕವನವೇ. ರವೀಂದ್ರರ ಕವಿತೆಗಳು ಒಂದು ಓದಿಗೆ ನಿಲುಕುವಂತದಲ್ಲ. ಹಲವು ಮರುಓದುಗಳನ್ನು ಬೇಡುತ್ತದೆ. ಅವರು ಪದಗಳಲ್ಲಿ ಕವಿತೆಯನ್ನು ಕಟ್ಟುವುದಿಲ್ಲ; ಬದಲಾಗಿ ಅನುಭವವನ್ನು ಕಟ್ಟಿಕೊಡುತ್ತಾರೆ. ಒಂದು ಆವರಣವನ್ನು ನಿರ್ಮಿಸಿಬಿಡುತ್ತಾರೆ. ಪ್ರಸ್ತುತ ಇಂದಿನ ಕವಿತೆಯ ಮೊದಲ ಪಂಕ್ತಿ ಆರಂಭವಾಗುವುದು 'ಒಂದು ಬಿರುಬಿಸಿಲಿನ ನಡುವೆ ಇರುವ ಒಂದು ಮತೀಯ ಬುರುಜು, ಅದರ ಸುತ್ತಲೂ ಎದ್ದು ತೋರುವ ಬಡತನ, ಬತ್ತಿಹೋದ ನೀರ ಸೆಲೆ, ಹಾರುತ್ತಿರುವ ಬಿಸಿ ಬೂದಿ...' ಹೀಗೆ. ಮುಂದೆ ಸಾಗುತ್ತಾ ಇಂದು ನಡೆಯುತ್ತಿರುವ ಯುದ್ಧಕ್ಕೆ ಸಾಗುತ್ತಾ ಅಲ್ಲಿನ ಜನಸಾಮಾನ್ಯರ ಸದ್ಯದ ಪರಿಸ್ಥಿತಿಯ ಆವರಣಕ್ಕೆ ಜಿಗಿಯುತ್ತದೆ. ನೇತಾರರಿಗೆ ಇದು ಪ್ರತಿಷ್ಠೆ. ಜನಸಾಮಾನ್ಯರಿಗೆ ಅಗ್ನಿಪರೀಕ್ಷೆ. ದಾವಾನಲದ ಕಬಂಧ ಬಾಹುಗಳ ಕಡಿವ ರಾಮಲಕ್ಷ್ಮಣರು ಕಾಣುತ್ತಿಲ್ಲ... ಅವನಿಗೆ ಶಾಪವಿಮೋಚನೆಯಾಗುವುದಿಲ್ಲ ಎನ್ನುತ್ತಾ ಈ ಯುದ್ಧ ದಾಹಕ್ಕೆ ವಿಮೋಚನೆಯೇ ಇಲ್ಲ ಎನ್ನುವುದನ್ನು ಸೂಚಿಸುತ್ತದೆ.

20	ಎಂ.ಆರ್. ರಘುನಾಥ್	'ನವ ಸಂವತ್ಸರ', 'ಹನುಮಂತ ನೀ ಭಾಗ್ಯವಂತ' (2 ಕವನಗಳು)

ಈ ವೇದಿಕೆಗೆ ಸ್ವಲ್ಪ ಮಟ್ಟಿಗೆ ಹೊಸಬರಾಗಿರುವ ಶ್ರೀಯುತ ಎಂ. ಆರ್. ರಘುನಾಥ್ ಅವರು ಇಂದಿನ ದಾಸೋಹದಲ್ಲಿ ಎರಡು ಕವಿತೆಗಳನ್ನು ಪ್ರಸ್ತುತಪಡಿಸಿದ್ದಾರೆ. ಪ್ರಾಯಶಃ ಅವರ ಆಸಕ್ತಿಯ ಕ್ಷೇತ್ರ ಕವಿತೆಯೇ ಆಗಿರಬಹುದು. ಮೊದಲನೆಯ ಕವಿತೆ "ನವ ಸಂವತ್ಸರ" ವಸಂತ ಬರುವಾಗಲೇ ಹೇಗೆ ಶಿಶಿರನ ಕುರುಹುಗಳನ್ನು ಅಳಿಸುತ್ತಾ, ತನ್ನ ಹೆಜ್ಜೆಗಳನ್ನು ಎಲ್ಲೆಡೆಯೂ ಊರುತ್ತಾ ಜಗದಲ್ಲಿ ಒಂದು ವಿನೂತನತೆಯನ್ನು ತರುತ್ತಾನೆ, ಅದನ್ನು ನಾವು ಯುಗಾದಿಯಾಗಿ ಆಚರಿಸುತ್ತೇವೆ ಎನ್ನುವುದನ್ನು ಹೇಳುವ ಕವಿತೆ. ವಸಂತನಿಗೆ ಮರುಳಾಗದವರು ಯಾರು – ಚಂದದ ಕವಿತೆ.

ಎರಡನೆಯ ಕವಿತೆ ವೀರಾಂಜನೇಯನನ್ನು ಕುರಿತಾದ "ಹನುಮಂತ ನೀ ಭಾಗ್ಯವಂತ" ಎನ್ನುವ ಭಕ್ತಿಗೀತೆ. ಲಯಬದ್ಧವಾದ ಹಾಡಲು ಸೂಕ್ತವಾಗಿರುವ ಕವಿತೆ.

21	ರಾಧಿಕಾ ಗುಜ್ಜರ್	ಬಾಯಿಬಿಡದೆ ನೋವಿನೊಂದಿಗೆ ಇರುವು (ಕವನ)

ನಾವು ನೋಡುನೋಡುತ್ತಿರುವಂತೆಯೇ ಎತ್ತರೆತ್ತರಕ್ಕೆ ಏರುತ್ತಿರುವ ಲೇಖಕಿ ಶ್ರೀಮತಿ ರಾಧಿಕಾ ಗುಜ್ಜರ್. ಅವರು ಕತೆಯನ್ನೇ ಬರೆಯಲಿ, ಕವಿತೆಯನ್ನೇ ಬರೆಯಲಿ, ಲೇಖನವನ್ನೇ ಬರೆಯಲಿ, ಆ ವಸ್ತುವಿನ ಆಳಕ್ಕಿಳಿದು ಶ್ರದ್ಧೆಯಿಂದ ಅದಕ್ಕೆ ಸೂಕ್ತವಾದ ಅಕ್ಷರಗಳನ್ನು, ಪದಗಳನ್ನು ಆಯ್ದು ಪೋಣಿಸುತ್ತಾರೆ. ಎಲ್ಲ ಪ್ರಕಾರಗಳಲ್ಲೂ ಗೆಲುವನ್ನು ಸಾಧಿಸುವುದು ಅಷ್ಟು ಸುಲಭವಲ್ಲ; ಸತತವಾದ ತಪಸ್ಸಿನಿಂದ ಅದನ್ನು ಸಿದ್ಧಿಸಿಕೊಂಡಿದ್ದಾರೆ. ಇಂದು ಪ್ರಸ್ತುತಪಡಿಸಿರುವ "ಬಾಯಿಬಿಡದೆ ನೋವಿನೊಂದಿಗೆ ಇರುವು" ಕವಿತೆಯು ಆಡದೆ ಉಳಿದ ದುಃಖದೊಂದಿಗಿನ ಬದುಕನ್ನು ಅದೆಷ್ಟು ಚೆನ್ನಾಗಿ ಓದುಗರ ಎದೆಗಿಳಿಸಿಬಿಡುತ್ತದೆ. "ಎದೆ ಬಡಿದು ಗೋಳಾಡಿಬಿಡುವ ಸಹಜ ಅಭಿವ್ಯಕ್ತಿಗಿಂತ ಹರಿತವಿದು ಒಮ್ಮೆಲೇ ತುಳುಕಿ ಬೋರಲಾಗದ ಒಂದೊಂದು
ಅಕ್ಷರವೂ ಸಾವಿರವು ಸಾವಿನೊಡನೆ ಇರುವು ಸಾವಿನಂತಹ ನೋವಿನೊಡನೆ ಇರುವು" –'ಸಾವಿರವು', 'ಸಾವಿನೊಡನೆ ಇರುವು" 'ಸಾವಿನಂತಹ ನೋವಿನೊಡನೆ ಇರುವು' ಎಂದು ಪದಗಳೊಂದಿಗೆ ಅದೆಷ್ಟು ಸೊಗಸಾಗಿ ಆಟವಾಡಿದ್ದಾರೆ!

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್.ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 248 ನಡೆದ ದಿನಾಂಕ: 11 ಏಪ್ರಿಲ್ 2026
ಸಂಚಿಕೆಯ ಬಿಡುಗಡೆ ದಿನಾಂಕ: 09 ಮೇ 2026

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)